ರಂಜನ ಬೋಧನೆ ಪ್ರಚೋದನೆ

ಲಂಕೇಶ್



ವಿನೋದ್‌ರಾಜ್ ಜೀವನ ಪ್ರೀತಿ

ಏಪ್ರಿಲ್ 4, 2012 ಪುಟ 20 ರೂ. 14/-

ದ್ದ ಜೆಪಿ

ಸೋತ ಯಡ್ಡಿ



ಬಿಜೆಪಿ ಪತನ ಆರಂಭ

ಸಾಪ ಚುನಾವಣೆ : ಅಭ್ಯರ್ಥಿಗಳಿಗೆ ಪ್ರಶ್ನೆಗಳು



ಾಂಗ್ರೆಸ್ ಾಲಿಗೆ ಸ್ಮಾಸುರ




ಐಟಿ ದಾಳಿ ಮಾಡಿಸಿದ್ದು ಯಾರು?

ಹಾಸನ

ಶಿಲ್ಪಾ ಕೊಂದವನು ಡ್ರೈವರ್ ನವೀನ



ರಣಚಂಡಿ ಶಾಂತಕುಮಾರಿಗೆ ಲೋಕಾಯುಕ್ತ ಬರೆ



ಪ್ರಣಬ್ ಮುಖರ್ಜಿ ಈ ಸಾಲಿನಲ್ಲಿ ಮಂಡಿಸಿದ ಬಜೆಟ್ಟಿನಲ್ಲಿ ಜನಪರವಾದ ಯಾವ ನೀತಿಗಳೂ ಇಲ್ಲ, ಧೋರಣೆಗಳೂ ಇಲ್ಲ, ಇರಲು ಸಾಧ್ಯವೂ ಇಲ್ಲ. ಕಾರ್ಪೊರೇಟ್ ಉದ್ಯಮಪತಿಗಳಿಗೆ ಸಿಟ್ಟು ಬಂದಿರುವುದು ಸರ್ಕಾರ ತಾವು ಕೇಳಿದ್ದಷ್ಟನ್ನು ಈ ವರ್ಷವೇ ಕೊಟ್ಟಿಲ್ಲ ಅನ್ನೋ ಕಾರಣಕ್ಕೆ ಮಾತ್ರ.

ದಾದಾ ಬಜೆಟ್

ಒಂದು ಕಡೆ ದೇಶದ ಆರ್ಥಿಕ ಸ್ಥಿತಿ ಅಧೋಗತಿ ಹಿಡಿದಿದೆ ಎಂದು ಕಾರ್ಪೊರೇಟ್ ಉದ್ಯಮಪತಿಗಳು ಬೊಬ್ಬೆ ಹೊಡೆಯುತ್ತಾ ಸರ್ಕಾರ ಕೂಡಲೇ ತಮ್ಮ ಸಹಾಯಕ್ಕೆ ಧಾವಿಸಬೇಕೆಂದು ಆದೇಶಿಸುತ್ತಿರುವಾಗ ಮತ್ತೊಂದು ಕಡೆ ಚುನಾವಣೆ ಕಾಲ ಸಮೀಪಿಸಿರುವ ಹೊತ್ತಿನಲ್ಲಿ ಪ್ರಣಬ್ ದಾದಾ ಯುಪಿಎ-2 ಸರ್ಕಾರದ ಮೂರನೇ ಬಜೆಟ್ ಮಂಡಿಸಿದ್ದಾರೆ. ಬಜೆಟ್ಟನ್ನು ಕಾರ್ಪೊರೇಟ್ ಉದ್ಯಮಪತಿಗಳು "ಕೆಟ್ಟ" ಬಜೆಟ್ಟೆಂದು ವರ್ಣಿಸಿದ್ದರೆ ಯಥಾ ಪ್ರಕಾರ ವಿರೋಧ ಪಕ್ಷಗಳು ಜನವಿರೋಧಿ ಬಜೆಟ್ಟೆಂದು ಟೀಕಿಸಿವೆ. ಆಮ್ ಆದ್ಮಿಯನ್ನು ಬೀದಿಗೆ ತಳ್ಳುವ ಬಜೆಟ್ಟೆಂದು ಎಡಪಕ್ಷಗಳು ಸಹ ಹೇಳಿವೆ. ಕಾರ್ಪೊರೇಟ್ ಉದ್ಯಮಪತಿಗಳು "ರಾಜಕೀಯ ಅನಿವಾರ್ಯತೆಗೆ" ಬಲಿಬಿದ್ದು "ಆರ್ಥಿಕತೆ"ಯನ್ನು ಬಲಿಗೊಟ್ಟ ಬಜೆಟ್ಟೆಂದು ತೆಗಳಿದ್ದಾರೆ. ಅವರ ಪ್ರಕಾರ ಬಡವರ ಪರವಾಗಿ ಸರ್ಕಾರ ಏನೇ ಮಾಡಿದರೂ ಅದು ದುಷ್ಟ ರಾಜಕಾರಣ. ಬಡವರಿಂದ ಕಿತ್ತು ಶ್ರೀಮಂತರ ಹೊಟ್ಟೆಗೆ ಹಾಕಿದರೆ ಅದು ಒಳ್ಳೆ ರಾಜಕೀಯ ಮುತ್ಸದ್ದಿತನ, ಸುಧಾರಣೆ, ಪ್ರಗತಿಗಾಮಿ ಇತ್ಯಾದಿ.

ಹಾಗಿದ್ದಲ್ಲಿ ಪ್ರಣಬ್ ಮುಖರ್ಜಿ ಜನಪರವಾದ ಬಜೆಟ್ಟನ್ನು ಮಂಡಿಸಿಬಿಟ್ಟರೆ?

ಖಂಡಿತಾ ಇಲ್ಲ.

ಕಾರ್ಪೊರೇಟ್ ಉದ್ಯಮಪತಿಗಳು ತಾವೇ ಮಾಡಿಕೊಂಡ ಹಗರಣ ಮತ್ತು ಅರ್ಥಗತಿಗೆ ಸಿಕ್ಕು ಕಂಗಾಲಾಗಿದ್ದಾರೆ. ಹೀಗಾಗಿ ಸರ್ಕಾರ ತನ್ನೆಲ್ಲಾ ಸಂಪನ್ಮೂಲ ಮತ್ತು ಆರ್ಥಿಕ ನೀತಿಗಳನ್ನು ಉದ್ಯಮಿಗಳ ಹಿತಾಸಕ್ತಿಗೆ ತಕ್ಕಂತೆ ಮಾಡಬೇಕೆಂದು ನಿರೀಕ್ಷಿಸಿದ್ದರು. ಪ್ರಣಬ್ ದಾದಾ ಮಾಡಿದ್ದು ಅದನ್ನೇ. "ನಾನು ದಯಾಮಯಿ ಆಗುವ ಮುನ್ನ ಕ್ರೂರಿಯಾಗಬೇಕಾಗುತ್ತದೆ" ಎಂದು ಅವರು ಬಹಿರಂಗವಾಗಿಯೇ ಬಜೆಟ್ ಭಾಷಣದಲ್ಲಿ ಸಾಮಾನ್ಯ ಜನರಿಗೆ ಎಚ್ಚರಿಕೆ ಕೊಟ್ಟಿದ್ದಾರೆ. ಇದೇ ಅರ್ಥದ ಮಾತುಗಳನ್ನು 1991ರಲ್ಲಿ ನರಸಿಂಹ ರಾವ್ ಅವರು ಕೂಡಾ ಹೇಳಿದ್ದರು. 1997ರಲ್ಲಿ ರಾಷ್ಟ್ರೀಯ ರಂಗ - ಅಂದರೆ ಕಾಂಗ್ರೆಸ್ ಮತ್ತು ಬಿಜೆಪಿಯನ್ನು ಹೊರತುಪಡಿಸಿದ ಪಕ್ಷಗಳು ಎಡಪಕ್ಷಗಳ ಬೆಂಬಲದೊಂದಿಗೆ ರಚಿಸಿದ - ಖಿಚಡಿ ಸರ್ಕಾರದ ಹಣಕಾಸು ಮಂತ್ರಿಯಾಗಿ ಚಿದಂಬರಂ ಹೇಳಿದ್ದೂ ಇದೇ ಮಾತನ್ನೇ.

ಕಳೆದ ಇಪ್ಪತ್ತು ವರ್ಷಗಳಿಂದ ಆರಸು ಮೊರೆವ ಹುಲಿಯಾಗಿ ಬಗೆಬಗೆದು ತಿನ್ನುತ್ತಿರುವುದು ಸಾಮಾನ್ಯ ಜನರನ್ನೇ.

ಪ್ರಣಬ್ ಮುಖರ್ಜಿ ಈ ಸಾಲಿನಲ್ಲಿ ಮಂಡಿಸಿದ ಬಜೆಟ್ಟಿನಲ್ಲಿ ಜನಪರವಾದ ಯಾವ ನೀತಿಗಳೂ ಇಲ್ಲ, ಧೋರಣೆಗಳೂ ಇಲ್ಲ, ಇರಲು ಸಾಧ್ಯವೂ ಇಲ್ಲ. ಕಾರ್ಪೊರೇಟ್ ಉದ್ಯಮಪತಿಗಳಿಗೆ ಸಿಟ್ಟು ಬಂದಿರುವುದು ಸರ್ಕಾರ ತಾವು ಕೇಳಿದ್ದಷ್ಟನ್ನು ಈ ವರ್ಷವೇ ಕೊಟ್ಟಿಲ್ಲ ಅನ್ನೋ ಕಾರಣಕ್ಕೆ ಮಾತ್ರ.

ಪ್ರಣಬ್ ದಾದಾ ಮಂಡಿಸಿದ ಬಜೆಟ್ಟಿನಲ್ಲಿ ಯಾವ ಸರಕಿಗೆ ಎಷ್ಟು ತೆರಿಗೆ ಕಡಿಮೆ ಮಾಡಿದ್ದಾರೆ ಅಥವಾ ಜಾಸ್ತಿ ಮಾಡಿದ್ದಾರೆ ಎನ್ನುವುದು ಅಷ್ಟು ಮುಖ್ಯವಲ್ಲ. ಬಜೆಟ್ಟೆಂದರೆ ಅಷ್ಟೇ ಅಲ್ಲ. ಬಜೆಟ್ಟು ಮೂಲಭೂತವಾಗಿ ಸರ್ಕಾರ ಯಾವ ಮೂಲಗಳಿಂದ ಎಷ್ಟೆಷ್ಟು ಹಣವನ್ನು ಸಂಗ್ರಹಿಸಿ ಯಾವ್ಯಾವ ಬಾಬತ್ತಿಗೆ ಖರ್ಚು ಮಾಡುತ್ತದೆ ಎಂದು ಹೇಳುವ ದಾಖಲೆ. ಹೀಗಾಗಿ ಪ್ರತಿ ಬಜೆಟ್ಟಿನ ಹಿಂದೆ ಒಂದು ಸರ್ಕಾರದ ಆರ್ಥಿಕ ಸಿದ್ಧಾಂತ ಕೆಲಸ ಮಾಡುತ್ತಿರುತ್ತದೆ. ಅದು ಯಾವ ವಸ್ತುಗಳ ಮೇಲೆ ತೆರಿಗೆ ವಿಧಿಸಿ ಯಾವುದನ್ನು ಬಿಡುತ್ತಿದೆ ಎಂಬುದರಲ್ಲಿ ಪ್ರತಿಫಲಿತವಾದರೂ ಅದರ ಸರಿಯಾದ ಚಿತ್ರಣ ಸಿಗುವುದು ಬಜೆಟ್ಟಿನ ಸ್ಥೂಲ ಮತ್ತು ಒಟ್ಟಾರೆ ಧೋರಣೆಯಲ್ಲಿ.

ಪ್ರಣಬ್ ದಾದಾರವರೇ ಈ ಬಾರಿಯ ತಮ್ಮ ಬಜೆಟ್ ಭಾಷಣ ಮಂಡಿಸುವಾಗ ಪ್ರಾರಂಭದಲ್ಲೇ ಗುರುತಿಸಿದಂತೆ ಈ ಬಜೆಟ್ ಮಂಡನೆಯಾಗುವ ವೇಳೆಯಲ್ಲಿ ಇಡೀ ಜಗತ್ತು ದೊಡ್ಡ ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿದೆ. ಯೂರೋ ಜೋನ್‌ನಲ್ಲಿ ಬಿಕ್ಕಟ್ಟು ಉಂಟಾಗಿತ್ತು. ಜಪಾನ್ ಭೂಕಂಪ ಇತ್ಯಾದಿಗಳು ಹಾಗೂ ಅಮೆರಿಕದ ಆರ್ಥಿಕತೆಯಲ್ಲಿ ಸ್ಥಗಿತ ಇನ್ನಿತ್ಯಾದಿಗಳು ಒಟ್ಟಾರೆ ಜಾಗತಿಕ ಆರ್ಥಿಕತೆಯಲ್ಲಿ ಸ್ಥಗಿತತೆಯನ್ನು ತಂದೊಡ್ಡಿದೆ. ಇದು ಜಾಗತಿಕ ಮಾರುಕಟ್ಟೆಯನ್ನು ಆಧರಿಸಿದ ಭಾರತದ ಉದ್ಯಮಗಳು ಸೊರಗುವಂತೆ ಮಾಡಿವೆ. ಹಾಗೆಯೇ ಕೃಷಿಯಲ್ಲೂ ಸಹ ಅಭಿವೃದ್ಧಿ ದರ ಶೇ.2.3ಕ್ಕೆ ಕುಸಿದಿದೆ. ಈ ಎಲ್ಲಾ ಕಾರಣಗಳಿಂದ ಒಟ್ಟಾರೆ ಆರ್ಥಿಕ ಪ್ರಗತಿಯ ದರ ಶೇ.8 ಎಂಬ ಸರ್ಕಾರದ ಬೊಬ್ಬೆಯೆಲ್ಲಾ ಒಡೆದು ಅಭಿವೃದ್ಧಿ ದರ ಶೇ.6.4ಕ್ಕೆ ಕುಸಿದಿದೆ. ಇದರಿಂದ ಉದ್ಯಮಿಗಳು ಲಾಭದ ಕೊರತೆಯನ್ನು ಎದುರಿಸುತ್ತಿದ್ದರೆ, ಜನತೆ ಬದುಕಲು ಬೇಕಾದ ಉದ್ಯೋಗ, ಆಹಾರಗಳ ಕೊರತೆಯನ್ನು ಎದುರಿಸುತ್ತಿದ್ದಾರೆ. ಆದರೆ 'ಉದ್ಯಮಿಗಳ ಬಳಿ ಲಾಭ ಶೇಖರವಾದರೆ ಅದು ಕ್ರಮೇಣ ಜಿನುಗುತ್ತಾ ಕೆಳಗೆ ಹರಿದು ದೇಶದ ಎಲ್ಲಾ ಜನರಿಗೂ ದೊರಕುತ್ತದೆ. ಆದ್ದರಿಂದ ಸರ್ಕಾರ ಬಜೆಟ್‌ನಲ್ಲಿ ಬಡವರಿಗೆ ರಿಯಾಯಿತಿ ಕೊಡುವುದಕಿಂತ ಹೆಚ್ಚಾಗಿ ಶ್ರೀಮಂತರ ಮತ್ತು ಉದ್ಯಮಿಗಳ ಬಳಿ ಹೆಚ್ಚು ಹಣ ಮತ್ತು ಲಾಭ ಉಳಿದುಕೊಳ್ಳುವ ರೀತಿಯ ನೀತಿಯನ್ನು ಅನುಸರಿಸಬೇಕು. ಹಾಗೂ ಬಡವರ ಕಲ್ಯಾಣ ಮತ್ತು ಮೂಲಭೂತ ಅಗತ್ಯಗಳನ್ನು ಪೂರೈಸುವುದಕ್ಕಿಂತ ಹೆಚ್ಚಾಗಿ ಬಂಡವಾಳ ಹೂಡಿಕೆ ಮತ್ತು ಲಾಭ ಖಾತರಿಯನ್ನು ಮಾಡಬಲ್ಲ ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸುವಂಥ ನೀತಿಗಳನ್ನು ಅನುಸರಿಸಬೇಕು' ಎಂಬುದು ಉದ್ಯಮಿಗಳ ಆಗ್ರಹವಾಗಿತ್ತು. ಸಾರಾಂಶದಲ್ಲಿ ದಾದಾ ಬಜೆಟ್ ಮಾಡಿರುವುದೂ ಇದನ್ನೇ. ದಾದಾಗಿರಿ ತೋರಿಸಿರುವುದು ಸಾಮಾನ್ಯ ಜನರ ಮೇಲೆಯೇ!

ಬಜೆಟ್ಟಿನ ಕೆಲವು ಧೋರಣೆಗಳನ್ನು ನೋಡಿದರೆ ಸಾಕು ಈ ಸತ್ಯ ಅರಿವಾಗುತ್ತದೆ.

ಸಾಮಾನ್ಯವಾಗಿ ಯಾವುದೇ ಸರ್ಕಾರ ತನ್ನ ಸಂಪನ್ಮೂಲವನ್ನು ತೆರಿಗೆಗಳು, ಸರ್ಕಾರ ಮಾಡಿರುವ ಹೂಡಿಕೆಗಳ ಉದ್ಯಮಗಳಿಂದ ಬರುವ ಲಾಭಗಳು, ಬಾಡಿಗೆ ಮತ್ತು ಜನರಿಂದ ಹಾಗೂ ಹೊರದೇಶಗಳಿಂದ ಎತ್ತುವ ಸಾಲಗಳಿಂದ ಕ್ರೋಢೀಕರಿಸುತ್ತದೆ. ಈ ಬಜೆಟ್ಟಿನಲ್ಲಿ ಒಟ್ಟಾರೆ ವೆಚ್ಚದ ಶೇ.40 ಭಾಗವನ್ನು ಸಾಲ ಮಾಡಿ ಎತ್ತಲಾಗುವುದೆಂದು ನಿರೀಕ್ಷಿಸಲಾಗಿದೆ. ಬಜೆಟ್ ದಿನ ಶೇರ್ ಮಾರ್ಕೆಟ್ ಕುಸಿದುಬೀಳಲೂ ಇದೇ ಕಾರಣ. ಏಕೆಂದರೆ ಸರ್ಕಾರದ ಸಾಲದ ಮೂಲ ಬ್ಯಾಂಕು ಮತ್ತು ವಿಮೆ ಸಂಸ್ಥೆಗಳೇ. ಬ್ಯಾಂಕುಗಳು ಮತ್ತು ವಿಮಾಸಂಸ್ಥೆಗಳು ನಮ್ಮಿಂದ ಎತ್ತುವ ಡಿಪಾಜಿಟ್ ಮತ್ತು ಪ್ರೀಮಿಯಂನ ಒಟ್ಟು ಮೊತ್ತಗಳನ್ನೇ ಸರ್ಕಾರ ಎರವಲು ಪಡೆಯುತ್ತದೆ. ಖಾಸಗೀ ಉದ್ಯಮಿಗಳು ಕಣ್ಣಿಟ್ಟಿದ್ದು ಇದೇ ಸಾಲದ ಮೇಲೆಯೇ!

ಕಾರ್ಪೊರೇಟ್ ಉದ್ಯಮಿಗಳ ಪ್ರಕಾರ ಸರ್ಕಾರ ಈ ಸಾಲದ ಮೂಲದ ಮೇಲೆ ಕಣ್ಣಿಡಲೇಬಾರದಾಗಿತ್ತು. ಅವೆಲ್ಲಾ ಅವರಿಗೇ ಮೀಸಲಾಗಿರಬೇಕಿತ್ತು. ಹಾಗಿದ್ದ ಮೇಲೆ ಸರ್ಕಾರ ಈ ಎಲ್ಲಾ ವೆಚ್ಚಗಳಿಗೆ ಬೇಕಿರುವ ಹಣವನ್ನು ಎಲ್ಲಿಂದ ಸಂಗ್ರಹಿಸಬೇಕಿತ್ತು? ಅವರ ಪ್ರಕಾರ ಸರ್ಕಾರ ಉದ್ಯಮಗಳಲ್ಲಿ ಹೂಡಿರುವ ಬಂಡವಾಳವನ್ನು ಹಿಂತೆಗೆಯುವ ಮೂಲಕ ಅಂದರೆ ಖಾಸಗೀಕರಿಸುವ ಮೂಲಕ ಹಾಗೂ ಜನರ ಮೇಲೆ ಇನ್ನೂ ಹೆಚ್ಚಿನ ತೆರಿಗೆ ವಿಧಿಸುವ ಮೂಲಕ



ಶಿವಸುಂದರ್ ಚಾರ್ವಾಕ


ಸಂಗ್ರಹಿಸಬೇಕೇ ಹೊರತು ತಮ್ಮ ಮೇಲೆ ತೆರಿಗೆ ಹೆಚ್ಚಿಸುವುದನ್ನಾಗಲೀ, ಬ್ಯಾಂಕುಗಳ ಸಾಲಕ್ಕಾಗಲೀ ಕೈ ಹಾಕಬಾರದು. ಅದನ್ನು ಒಪ್ಪಿಕೊಂಡೇ ಸರ್ಕಾರ 2002ರಲ್ಲಿ ಸಂಸತ್ತಿನಲ್ಲಿ **Fiscal Responsibility and Budget Management Act (FRBM)** ಎಲ್ಲಾ ಪಕ್ಷಗಳ ಸಮ್ಮತಿಯೊಂದಿಗೆ ಜಾರಿಗೆ ತಂದಿದೆ. ಅದನ್ನೇ ವಿತ್ತೀಯ ಶಿಸ್ತು-**Fiscal Responsibility** ಎಂದೂ ಕರೆಯಲಾಗುತ್ತದೆ. ಹಳೆಯ ಕಾಲದಲ್ಲಿ ಯಾವುದೇ ವರ್ಣದ ರಾಜರು ಅಧಿಕಾರಕ್ಕೆ ಬಂದರೂ ವರ್ಣಾಶ್ರಮವನ್ನು ಕಾಪಾಡುವುದು - ಅಂದರೆ ಬ್ರಾಹ್ಮಣ್ಯದ ಹಿರಿಮೆಯನ್ನ ಕಾಪಾಡುವುದು - ಎಷ್ಟು ಮುಖ್ಯವಾಗಿತ್ತೋ ಈ ಕಾಲದ ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಈ ವಿತ್ತೀಯ ಶಿಸ್ತನ್ನು ಅಂದರೆ ಕಾರ್ಪೊರೇಟ್ ಉದ್ಯಮಿಗ ಹಿತಾಸಕ್ತಿಯನ್ನು ಕಾಪಾಡುವುದು ಅಷ್ಟೇ ಮುಖ್ಯವಾಗಿ

ಆದರೆ ಪ್ರತಿಬಾರಿ ವಿತ್ತೀಯ ಶಿಸ್ತನ್ನು ಒಟ್ಟಾರೆ ಉತ್ಪನ್ನ ಶೇ. 4 ಕ್ಕೆ ಸೀಮಿತಗೊಳಿಸಿಕೊಳ್ಳುವುದಾಗಿ ಹೇಳುತ್ತಿ ಸರ್ಕಾರ ಈ ಬಾರಿ ಅನಿವಾರ್ಯವಾಗಿ ಅದು ಶೇ.5 ಆಗಿದೆಯೆಂದೂ ಆದರೆ ಮುಂದಿನ ವರ್ಷ ಅದನ ಶೇ.5ಕ್ಕಿಂತ ಕಡಿಮೆಗೆ ತರಲಾಗುವುದೆಂದು ಹೇಳಿದೆ. ಅದ ಪೂರಕವಾಗಿ ಪ್ರತಿ ಇಲಾಖೆಯೂ ತಮ್ಮ ತಮ್ಮ ವೆಚ್ಚವನ ಹೇಗೆ ಕಡಿಮೆ ಮಾಡಬಹುದು ಎಂಬುದರ ಮಾರ್ಗಸೂ ಯನ್ನು ಹಾಕಿಕೊಡಲಾಗುವುದೆಂದು ಹೇಳಲಾಗಿದೆ. ಅಂದ ಮುಂದಿನ ವರ್ಷ ಜನರ ಕಲ್ಯಾಣದ ಮೇಲೆ ಅಂದ ಕುಡಿಯುವ ನೀರು, ರಸ್ತೆ, ಪಡಿತರ ಇತ್ಯಾದಿಗಳ ಮೇ ಮಾಡುತ್ತಿದ್ದ ವೆಚ್ಚವನ್ನು ಒಟ್ಟಾರೆ ಉತ್ಪನ್ನದ ಶೇ.0.6ರಷ ಅಂದರೆ ಅಂದಾಜು 30-40 ಸಾವಿರ ಕೋಟಿ ರೂಪಾಯಿ ಗಳಷ್ಟು ಕಡಿಮೆ ಮಾಡಲಾಗುವುದೆಂದು ಈಗಾಗಲ ಹೇಳಾಗಿದೆ! ಆದಕ್ಕೆ ಪೂರಕವಾಗಿ ದಾದಾ ಬಜೆಟ್ ಈ ಬಾರಿ ಕಣ್ಣಿಟ್ಟಿರುವುದು ಪ್ರಮುಖವಾಗಿ ಸರ್ಕಾರ ಜನರಿಗಾ ನೀಡುತ್ತಿರುವ ಹಲವಾರು ರಿಯಾಯಿತಿ ಮತ್ತು ವಿನಾಯಿ ಗಳ ಅರ್ಥಾತ್ ಸಬ್ಸಿಡಿಗಳ ಮೇಲೆ. ದಾದಾ ಬಜೆಟ್ಟಿನ ಹೇಳಿರುವಂತೆ ಸರ್ಕಾರದ ವೆಚ್ಚದ ಮೇಲೆ ಅತಿಯಾ ಹೊರೆಯಾಗಿರುವುದು ಸಬ್ಸಿಡಿಗಳಂತೆ! ಹೀಗಾಗಿ ಪಡಿತ ಪೆಟ್ರೋಲಿಯಂ, ಗೊಬ್ಬರ ಇನ್ನಿತ್ಯಾದಿಗಳ ಮೇಲೆ ವೆ ಮಾಡುತ್ತಿದ್ದ ಸಬ್ಸಿಡಿಯನ್ನು ಕ್ರಮೇಣವಾಗಿ ಒಟ್ಟಾರೆ ರಾಷ್ಟ್ರೀಯ ಉತ್ಪನ್ನದ ಶೇ.4ರಿಂದ ಶೇ.2ಕ್ಕೆ, ನಂತರ ಶೇ.1.6 ಇಳಿಸಲಾಗುವುದಂತೆ. ಅಂದರೆ ಮುಂದಿನ ವರ್ಷಗಳ ಜನರಿಗಾಗಿ ಕೊಡುತ್ತಿದ್ದ ಎಲ್ಲಾ ಬಗೆಯ ಸಬ್ಸಿಡಿಗಳನ ಹಿಂತೆಗೆದುಕೊಳ್ಳಲಿದ್ದಾರೆ. ಅದರ ಪೂರ್ವಭಾವಿಯಾ ಜನರಿಗೆ ಕೊಡುತ್ತಿದ್ದ ಸಬ್ಸಿಡಿಯನ್ನು ನೇರವಾಗಿ ಹಣ ರೂಪದಲ್ಲಿ ಹಸ್ತಾಂತರಿಸುವ ಕಾರ್ಯಕ್ರಮವನ ಹಮ್ಮಿಕೊಳ್ಳಲಾಗುತ್ತಿದೆ. ಅದಕ್ಕೆ ಆಧಾರ ಕಾರ್ಡನ್ನು ಕಡ್ಡಾಯ ಮಾಡಲಾಗುತ್ತಿದೆ. ಇದು ಸರ್ಕಾರ ಜನರಿಗೆ ಒದಗಿಸುತ್ತಿ ಕಲ್ಯಾಣ ಕಾರ್ಯಕ್ರಮಗಳಿಂದ ಸಂಪೂರ್ಣ ಹಿಂತೆಗೆಯುವ ದರಲ್ಲಿ ಮತ್ತೊಂದು ದಾಪುಗಾಲು. ಈ ನಿಟ್ಟಿನಲ್ಲಿ ಎಲ್‌ಪಿ ಅನಿಲ ಗ್ರಾಹಕರಿಗೆ ನೇರ ಹಣಕಾಸು ಸರಬರಾಜು ಮಾಡು ದಿಕ್ಕಿನಲ್ಲಿ ಮೈಸೂರಿನಲ್ಲೂ, ಸೀಮೆಎಣ್ಣೆಗೆ ಸಂಬಂಧಪಟ್ಟಂ ರಾಜಸ್ಥಾನದಲ್ಲೂ ಪೈಲೆಟ್ ಯೋಜನೆಗಳನ ಪ್ರಾರಂಭಿಸಲಾಗುತ್ತಿದೆ.

ಇದಲ್ಲದೆ 2012ರ ಆಗಸ್ಟ್‌ನಿಂದ ಬಡವರ ಮೇಲ ಇನ್ನೂ ಹೆಚ್ಚಿನ ತೆರಿಗೆ ಭಾರವನ್ನು ಹೊರಿಸುವ ಹೊಸ ತೆರಿಗೆ ಪದ್ಧತಿಯಾದ **Goods and Service Tax (GST)** ಪದ್ಧತಿ ಜಾರಿಗೆ ಬರಲಿದೆ ಎಂಬುದನ್ನೂ ಸಹ ಘೋಷಿಸಲಾಗಿದೆ. ಅಂದರೆ ಸಾಲ ಮಾಡಿ ಸರ್ಕಾರ ಅನ್ನ ಹಾಕುತ್ತಿದೆ, ಕೆಲಸ ಕೊಡುತ್ತಿದೆ. ಅದಕ್ಕಿಂತ ಹೆಚ್ಚಾಗಿ ಖಾಸಗಿ ಉದ್ಯಮಿಗಳಿಗೆ ಬೇಕಿರುವುದೆಲ್ಲವನ್ನೂ ಈ ಸಾಲದಿಂದಲೇ ಮಾಡುತ್ತಿದೆ. ಆದರೆ ಆ ಸಾಲವನ್ನು ತೀರಿಸಲು GST ತೆರಿಗೆ ಪದ್ಧತಿ ಮೂಲಕ ಬಡಜನರ ಜೇಬಿಗೆ ಕತ್ತರಿ ಹಾಕುತ್ತಿದೆ. ಸರ್ಕಾರಿ ಸಂಸ್ಥೆಗಳನ್ನು ಖಾಸಗೀಕರಿಸುವ ಮೂಲಕ ಜನರ ಆಸ್ತಿಯನ್ನು ಹರಾಜು ಮಾಡಿ ಶ್ರೀಮಂತರಿಗಾಗಿ ಮಾಡಿರುವ ಸಾಲವನ್ನು ತೀರಿಸಲಿದೆ.

ಚುನಾವಣೆಯೇ ಹತ್ತಿರ ಬಂದರೂ ಮೊದಲಿನಂ ಜನಪ್ರಿಯವಾದ ಬಜೆಟ್ಟನ್ನು ಮಂಡಿಸುವ ಪರಿಸ್ಥಿತಿಯು ಇರಲಾರದ ಮಟ್ಟಿಗೆ ದೇಶದ ಆರ್ಥಿಕತೆ ಬಿಕ್ಕಟ್ಟಿನತ್ತ ಜಾರುತ ಇದೆ. ಸರ್ಕಾರ ಚುನಾವಣೆಯ ಭಯವೂ ಇಲ್ಲದೆ ಖುಲ್ಲಂ ಖುಲ್ಲಾ ಉದ್ಯಮಪತಿಗಳ ಪರವಾದ ಬಜೆಟ್ಟನ್ನು ಮಂಡಿ ದಕ್ಕಿಸಿಕೊಳ್ಳುತ್ತಿದೆ. ಭಾರತದ ಪ್ರಜಾತಂತ್ರದ ಅಸಲಿ ಚಹ ಬೆತ್ತಲಾಗುತ್ತಿದೆ.


ನೋ ಕಾಮೆಂಟ್ಸ್



"ಮೋದಿ ರಾಜ್ಯಭಾರದಲ್ಲಿ ಅದಾನಿ ಕೈಗಾರಿಕಾ ಗುಂಪನ್ನೂ ಒಳಗೊಂಡಂತೆ ಎಲ್ ಅಂಡ್ ಟಿ, ರಹೇಜಾಸ್, ಡಿಎಲ್‌ಎಫ್ ಇನ್ನಿತ್ಯಾದಿ ಕೈಗಾರಿಕೋದ್ಯಮಿಗಳಿಗೆ ಅಕ್ರಮವಾಗಿ ಸಾವಿರಾರು ಎಕರೆ ಜಮೀನನ್ನು ನೀಡಲಾಗಿದೆ. 2009-10ರಲ್ಲಿ ಇಡೀ ಗುಜರಾತಿನ ಕೃಷಿ ಉತ್ಪನ್ನ ಕೇವಲ 32,000 ಕೋಟಿ ರೂ.ಗಳಾಗಿದ್ದರೆ ಅದೇ ವರ್ಷ ಟಾಟಾ ಕಂಪನಿಗೆ ಗುಜರಾತ್ ಸರ್ಕಾರ 33,000 ಕೋಟಿ ರೂಪಾಯಿಗಳಷ್ಟು ರಿಯಾಯಿತಿಯನ್ನು ಘೋಷಿಸಿತ್ತು."

-ಅರ್ಜುನ್ ಮೊಧ್ವಾಡಿಯಾ, ಗುಜರಾತಿನ ಕಾಂಗ್ರೆಸ್ ನಾಯಕ

"ಜನಪರವಾಗಿ ನಿಂತು ಹೋರಾಡಿದ ಆದಿವಾಸಿ ಸೋನಿ ಸೂರಿ ತಾನು ಮಾವೋವಾದಿಯೆಂದು ಒಪ್ಪಿಕೊಳ್ಳಬೇಕೆಂದು ಪೊಲೀಸರು ಚಿತ್ರಹಿಂಸೆ ನೀಡಿ ಆಕೆಯ ಮರ್ಮಾಂಗದಲ್ಲಿ ಕಲ್ಲುಗಳನ್ನು ತುರುಕಿದರು.



ಆದಾಗಿ ವರ್ಷ ಕಳೆದ ಮೇಲೂ ಸೋನಿ ಸೂರಿ ಜೈಲಿನಲ್ಲಿದ್ದಾಳೆ. ಆಕೆಯನ್ನು ಚಿತ್ರಹಿಂಸೆಗೆ ಗುರಿಮಾಡಿದ ಪೊಲೀಸ್ ಅಧಿಕಾರಿ ಅಂಕಿತ್ ಗರ್ಗ್‌ಗೆ ಗಣರಾಜ್ಯೋತ್ಸವದ ದಿನ ಪೊಲೀಸ್ ಮೆಡಲ್ ಅನ್ನು ನೀಡಲಾಯಿತು."

-ಅರುಂಧತಿ ರಾಯ್

"ಪ್ರಣಬ್ ದಾದಾರವರು ಮಧ್ಯಮ ಮಾರ್ಗೀ ಬಜೆಟ್ಟನ್ನು ಮಂಡಿಸಿದ್ದಾರೆ.. ಇದು ಏಕಕಾಲದಲ್ಲಿ ಎಲ್ಲರನ್ನು ತೃಪ್ತಿಗೊಳಿಸಲು ಪ್ರಯತ್ನಿಸುತ್ತಾ ಯಾರನ್ನೂ ತೃಪ್ತಿಪಡಿಸುವುದಿಲ್ಲ."

-ಡಾ. ಶಂಕರ್ ಆಚಾರ್ಯ, ಅರ್ಥಶಾಸ್ತ್ರಜ್ಞ


ನಂಬಿದ್ರೆನಂಬಿ ಬಿಟ್ರೆಬಿಡಿ

"ನಾನು ತಾಲಿಬಾನ್‌ಗಳನ್ನು ಅರ್ಥಮಾಡಿಕೊಳ್ಳಲು ಬಯಸುತ್ತೇನೆ. ಮತ್ತು ಅವರಿಗೆ ನನ್ನ ಅಭಿಪ್ರಾಯವನ್ನು ಹೇಳಿ ಅವರನ್ನು ದಾರಿಗೆ ತರಲು ಯತ್ನಿಸುತ್ತೇನೆ."

-ಟ್ರಿಪಲ್ ಶ್ರೀ ರವಿಶಂಕರ್

"ನಾವು ಹೈಕಮಾಂಡ್‌ಗೆ ಡೆಡ್‌ಲೈನ್ ವಿಧಿಸಿಲ್ಲ. ನಾವು 48 ಗಂಟೆಗಳು ಕಾಯುತ್ತೇವೆ ಎಂದಷ್ಟೆ ಹೇಳಿದ್ದೇವೆ. ಅದು ಗಡುವಲ್ಲ, ಅವರು ಬೆಳವಣಿಗೆಗಳನ್ನು ನೋಡುತ್ತಿದ್ದಾರೆ. ಸರಿಯಾದ ಸಮಯದಲ್ಲಿ ಸರಿಯಾದ ನಿಲುವನ್ನು ತೆಗೆದುಕೊಳ್ಳುತ್ತಾರೆ ಎಂದು ನಾನು ನಂಬಿದ್ದೇನೆ."

-ಯಡಿಯೂರಪ್ಪ



"ರೆಸಾರ್ಟ್ ಪಾಲಿಟಿಕ್ಸ್ ಮಾಡಿದರೆ ತಪ್ಪೇನಿದೆ? ಏನೂ ತಪ್ಪಿಲ್ಲ. ಅದು ಈಗಿನ ರಾಜಕಾರಣದಲ್ಲಿ ಸಂವೇದನಾ ಶೂನ್ಯ ಹೈಕಮಾಂಡ್‌ನಿಂದ ನ್ಯಾಯ ಪಡೆದುಕೊಳ್ಳುವ ಹೊಸ ಮಾರ್ಗವಾಗಿ ಹೊರಹೊಮ್ಮಿದೆ."

-ಹರತಾಳು ಹಾಲಪ್ಪ

ನೀಚತನದ ಪರಮಾವಧಿ




• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ಯಡಿಯೂರಪ್ಪ ಮತ್ತು ಆತನ ಹಿಂಬಾಲಕರಾದ ..ಲವಾರು ಬಿಜೆಪಿ ಶಾಸಕರು ಮತ್ತೆ ಪಂಚತಾರಾ ..ರ್ಟ್‌ವೊಂದರಲ್ಲಿ ಆರಾಮಾಗಿ ಕಾಲ ಕಳೆದು ಬಂದಿದ್ದಾರೆ. ..ಂಗಳೂರು ಸೇರಿದಂತೆ ರಾಜ್ಯದ ವಿವಿಧ ಕಡೆ ..ನಸಾಮಾನ್ಯರು ಕುಡಿಯುವ ನೀರಿಗಾಗಿ ಹಾತೊರೆ ..ಯುತ್ತಿದ್ದರೆ, ವಿದ್ಯುತ್ ಅಭಾವದಿಂದಾಗಿ ರೈತಾಪಿಗಳು ..ಮ್ಮ ಬೆಳೆಗೆ ನೀರುಣಿಸಲಾಗದೆ ಕಂಗಾಲಾಗಿದ್ದರೆ, ಮೇವಿಲ್ಲದೆ ..ವಿರಾರು ಜಾನುವಾರುಗಳು ತತ್ತರಿಸುತ್ತಿದ್ದರೆ ಬಿಜೆಪಿಯ 'ಜನನಾಯಕರು' ಯಡಿಯೂರಪ್ಪನಿಂದ ತಮಗೆ ಸಿಗುವ ..ನ-ಮಾನ-ಹಣದ ಆಸೆಯಿಂದಾಗಿ ಗೋಲ್ಡನ್ ಪಾಮ್ ..ಂಬ ರೆಸಾರ್ಟ್‌ನಲ್ಲಿ ಯಡ್ಡಿಯ 'ಬಂಧು-ಬಂಧಿ' ..ಾಗಿದ್ದರು.

ನಿನ್ನೆ ರೇವುನಾಯಕ ಬೆಳಮಗಿ ಎಂಬ ಚಿಡ್ಡಿ ಶಾಸಕ ..ವಿ ಚಾನೆಲ್‌ನವರ ಮುಂದೆ ತಾನೇನು ಹೇಳುತ್ತಿದ್ದೇನೆಂಬ ..ುವೆಯೂ ಇಲ್ಲದೆ "ಜನರು ನೀರು, ಕರೆಂಟು, ಮೇವು ..ಂದು ನನ್ನ ತಲೆ ತಿನ್ನುತ್ತಿದ್ದಾರೆ. ಅದಕ್ಕೆ ಒಂದಿಷ್ಟು ರೆಸ್ಟ್ ..ತೆಯಲು ಇಲ್ಲಿಗೆ ಬಂದಿದ್ದೇನೆ" ಎಂದು ವದರಿದ. ..ಮ್ಮಾ ಈ ಪುಣ್ಯಾತ್ಮನಿಗೆ ಜನ ಮತ ಕೊಟ್ಟು ವಿಧಾನಸೌಧಕ್ಕೆ ..ಕಳುಹಿಸಿದ್ದು ಯಾತಕ್ಕೆ? ಜನರ ಸಮಸ್ಯೆಗಳನ್ನು ಬಗೆಹರಿ ..ಲೋ ಅಥವಾ ಜನರ ಸಂಕಷ್ಟಗಳೇ ತನಗೆ ತಲೆನೋವು ..ಡುತ್ತದೆಂದು ಯಡ್ಡಿಯ ಹಂಗಿನಲ್ಲಿ ರೆಸಾರ್ಟ್‌ನಲ್ಲಿ ..ಗುವುದಕ್ಕೋ?

ಇವತ್ತು ಯಡ್ಡಿಯ ಹಿಂದೆ ಮೂವತ್ತು ..ಸಕರಿರಬಹುದು ಅಥವಾ ಆತನ ಗುಂಪಿನವರು



..ಳುವಂತೆ ಎಪ್ಪತ್ತು ಶಾಸಕರೇ ಇರಬಹುದು. ಆದರೆ ..ವರ ಸಂಖ್ಯೆಗಿಂತ ನಮಗೆ ಮುಖ್ಯವಾಗಬೇಕಾದದ್ದು ಅವರೆಲ್ಲ ..ಾಕೆ ಇವತ್ತು ಯಡ್ಡಿಗೆ ಜೋಪರಾಕ್ ಹೇಳುತ್ತಿದ್ದಾರೆ ..ಬುದು. ಈಗ ಎಲ್ಲರಿಗೂ ಗೊತ್ತಿರುವಂತೆ ಯಡ್ಡಿಯ ..ಸ್ ಪಾಯಿಂಟ್ ಅಜೆಂಡಾ' ತಾನು ಮತ್ತೆ ಮುಖ್ಯಮಂತ್ರಿ ..ಬೇಕೆಂಬುದು. ಆತನ ಈ ಒತ್ತಾಯದ ಹಿಂದೆ ಇರುವ ..ದ್ದೇಶ ತಾನು ಮುಖ್ಯಮಂತ್ರಿ ಆಗುವ ಮೂಲಕ ಸಿಗುವ ..ಕಾರದಿಂದ ರಾಜ್ಯವನ್ನು ಮತ್ತಷ್ಟು ದೋಚಬೇಕು, ತನ್ನ ..ಬಲಿಗರಿಗೂ ಸಾಕಷ್ಟು 'ಉಣಿಸಬೇಕು' ಎಂಬುದೇ ..ರತು ರಾಜ್ಯದ ಬಗ್ಗೆಯಾಗಲಿ, ಜನರ ಬಗ್ಗೆಯಾಗಲಿ ಆತನಿಗೆ ..ಚಿತ್ತೂ ಕಾಳಜಿ ಇಲ್ಲ. ಯಥಾ ರಾಜ ತಥಾ ಪ್ರಜೆ ..ಬಂತೆ ಆತನೊಂದಿಗೆ ಇರುವ ಕರಂದ್ಲಾಜೆ, ನಿರಾಣಿ, ..ಮ್ಮಾಯಿ, ರೇಣುಕಾಚಾರ್ಯ, ಹಾಲಪ್ಪ ಇತ್ಯಾದಿಗಳ ..ದ್ದೇಶವೂ ರಾಜ್ಯವನ್ನು ಮುಕ್ಕುವುದೇ ಆಗಿದೆಯೇ ..ರತು ರಾಜ್ಯದ ಉದ್ಧಾರವಂತೂ ಅಲ್ಲ.

.. ಬಿಜೆಪಿಯ ಹೈಕಮಾಂಡಿಗೆ ಸೆಡ್ಡು ಹೊಡೆದು ..ಡ್ಡಿಯೊಂದಿಗೆ ಹಾರಾಟ ಮಾಡುತ್ತಿರುವ ಶಾಸಕರಿಗೆ ..ವ ಸಿದ್ಧಾಂತ, ಬದ್ಧತೆ, ಜನಪರ ಚಿಂತನೆ, ಪ್ರಗತಿ ..ತು ಯಾವ ಕನಸೂ ಇಲ್ಲ, ಬದಲಾಗಿ ಅವರೆಲ್ಲರಲ್ಲಿ ..ವುದು ಧನದಾಹ ಮಾತ್ರ. ಇಂತಹ ರೆಸಾರ್ಟ್ ..ಜಕೀಯದಿಂದಲೂ ಹಲವು ಶಾಸಕರು ಹಣ ..ಡಿಕೊಳ್ಳುವುದು ಎಲ್ಲರಿಗೂ ಗೊತ್ತಿರುವ ಸಂಗತಿಯೇ ..ದೆ.

.. ಉದಾಹರಣೆಗೆ ಹಿಂದೊಮ್ಮೆ ಇದೇ ಯಡ್ಡಿಯ ವಿರುದ್ಧ ..ದಾಯವೆದ್ದಿದ್ದ ಬಳ್ಳಾರಿಯ ಗಣಿ ಮಾಫಿಯಾದ ಕುಳಗಳು ..ಮ್ಮ ಪರ ನಿಲ್ಲಲು ಇದೇ ರೇಣುಕಾಚಾರಿ ಮತ್ತು ..ತ್ಯಾದಿಗಳನ್ನು ಆಂಧ್ರದ ರೆಸಾರ್ಟ್ ಒಂದಕ್ಕೆ ಹೈಜಾಕ್ ..ಡಿಕೊಂಡು ಹೋಗಿದ್ದರು. ಆಗ ಪ್ರತಿಯೊಬ್ಬರಿಗೂ ..ಳ್ಳಾರಿಯ ಗಣಿ ಕಳ್ಳರು ಕನಿಷ್ಠ ಐದು ಕೋಟಿ ..ಪಾಯಿಗಳನ್ನು ನೀಡಿದ್ದರು ಎಂದು ಬಲ್ಲವರು ಹೇಳಿದ್ದರು. .. ಹಾಗೆಯೇ ಮತ್ತೊಮ್ಮೆ ಬಿಜೆಪಿಯ ಹಲವು ಶಾಸಕರು ..ತ್ತು ಪಕ್ಷೇತರರು ಕೂಡ ಯಡ್ಡಿಯ ವಿರುದ್ಧ ..ದಾಯವೆದ್ದು ಗೋವಾದ ರೆಸಾರ್ಟ್ ಒಂದಕ್ಕೆ ಹಾರಿ ..ೀಗಿದ್ದಾಗಲೂ ಜೆಡಿಎಸ್‌ನ ಕುಮಾರಸ್ವಾಮಿಯಿಂದ ..ಸಾಕಷ್ಟು 'ಭಕ್ಷಿ' ಪಡೆದಿದ್ದರು.

..ಇವತ್ತು ಕೇವಲ ಆರು ತಿಂಗಳ ಹಿಂದೆ ಇದೇ ಯಡಿಯೂರಪ್ಪ ತನ್ನ ನೆಚ್ಚಿನ ಭಂಟ ಸದಾನಂದ ಗೌಡರನ್ನು ಮುಖ್ಯಮಂತ್ರಿ ಹುದ್ದೆಗೇರಿಸುವ ಸಂದರ್ಭದಲ್ಲೂ ಯಡ್ಡಿ ತನ್ನ ಬೆಂಬಲಿಗರನ್ನು ಮತ್ತೆ ರೆಸಾರ್ಟ್ ಒಂದಕ್ಕೆ ಹೈಜಾಕ್ ಮಾಡಿಕೊಂಡು ಅಲ್ಲಿ ಗುಡ್ಡೆಹಾಕಿಕೊಂಡಿದ್ದ. ಆಗಲೂ ಇವತ್ತಿನಂತೆ ಅವರನ್ನೆಲ್ಲ 'ಬಂಧಿ'ತರನ್ನಾಗಿ ಇಟ್ಟುಕೊಂಡಿದ್ದರಿಂದ ಆಗ ಯಡ್ಡಿಯ ವೈರಿ ಜಗದೀಶ್ ಶೆಟ್ಟರ್ ಸೋತು, ಸದಾನಂದ ಗೌಡ ಗದ್ದುಗೆಯನ್ನೇರಿದ್ದರು. ಅವತ್ತು ಕೂಡ ಯಡ್ಡಿ ತನ್ನ ಬೆಂಬಲಿಗರಿಗೆ ಸಾಕಷ್ಟು 'ಮೇವು' ಕೊಟ್ಟಿದ್ದರು.

ರಾಜಕೀಯ ಎಂಬುದು ವಿಚಿತ್ರ ಆಟ. ಇಲ್ಲಿ ಯಾರು ಯಾವಾಗ ಯಾರ ಪರ ಇರುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದಲೇ ಇವತ್ತು ಯಡ್ಡಿ ತನ್ನ ಮಾಜಿ ಭಂಟ ಸದಾನಂದ ಗೌಡರ ವಿರುದ್ಧ ಹೋರಾಡುತ್ತಿದ್ದರೆ ಆತನ ಬಗಲಲ್ಲಿ ಮಾಜಿ ವೈರಿ ಆದರೆ ಹಾಲಿ ಮಿತ್ರ ಜಗದೀಶ್ ಶೆಟ್ಟರ್ ಕಿಂಚಿತ್ತೂ ನಾಚಿಕೆ ಇಲ್ಲದೆ ನಸುಗುನ್ನಿಯಂತೆ ನಗುತ್ತಿದ್ದಾರೆ.

ಇವತ್ತು ಯಡ್ಡಿಯೊಂದಿಗೆ ರೆಸಾರ್ಟ್‌ಗೆ ಹೋಗಿದ್ದ ಬೇಳೂರು, ಬೆಳಮಗಿ ಇತ್ಯಾದಿಗಳಿಗೆ ಈ 'ಬಂಡಾಯದಿಂದ' ಮಂತ್ರಿ ಪದವಿ, ಗೂಟದ ಕಾರು ಯಾವುದೂ ಸಿಗುವುದಿಲ್ಲ ಎಂಬುದು ಶತಸ್ಸಿದ್ಧ. ಆದರೆ ಅವಿಲ್ಲದಿದ್ದರೂ ಯಡ್ಡಿಯಿಂದ ಹಲವು ಕೋಟಿ ರೂಪಾಯಿಗಳಾದರೂ ಖಂಡಿತವಾಗಿಯೂ ಸಿಕ್ಕೇ ಸಿಗುತ್ತದೆ ಎಂಬುದೇ ಅವರೆಲ್ಲರೂ ಯಡ್ಡಿ ಪರ ಹೂಂಕರಿಸಲು 'ಪ್ರೇರಣೆ' ನೀಡುತ್ತಿದೆ ಎಂಬುದೂ ಅಷ್ಟೇ ಶತಸ್ಸಿದ್ಧ!

ಕಳೆದ ಮೂರು ವರ್ಷಗಳಿಂದ ಬಿಜೆಪಿ ರಾಜ್ಯದಲ್ಲಿ ಸೃಷ್ಟಿಸಿರುವ ಹೇಸಿಗೆಗಳು ಒಂದೆರಡಲ್ಲ. ಯಡ್ಡಿಯ ಪ್ರಸ್ತುತ ರೆಸಾರ್ಟ್ ಬ್ಲಾಕ್‌ಮೇಲ್ ಆ ಅವಾಂತರಗಳ ಪಟ್ಟಿಯಲ್ಲಿ ಹೊಸ ಸೇರ್ಪಡೆಯಷ್ಟೇ. ತನ್ನ ಅಧಿಕಾರದ ಕುರ್ಚಿಯನ್ನು ಭದ್ರಪಡಿಸಿಕೊಳ್ಳಲು 'ಆಪರೇಷನ್ ಕಮಲ'ದಂತಹ ಮಸಲತ್ತು, ಜನಸಮುದಾಯಗಳ ಬೆಂಬಲ ಪಡೆಯಲು ಮಠಾಧೀಶರ ಖರೀದಿ, ತನ್ನ ಅಜೆಂಡಾವನ್ನು ಮುಂದುವರಿಸಲು ಶಾಲಾ ಮಕ್ಕಳ ಪಠ್ಯ ಪುಸ್ತಕಗಳ ಕೇಸರೀಕರಣ, ತನ್ನ ಮತ ಬ್ಯಾಂಕನ್ನು ವೃದ್ಧಿಸಿಕೊಳ್ಳಲು ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯ... ಹೀಗೆ ಪ್ರತಿಯೊಂದು ವಿಷಯದಲ್ಲೂ ಬಿಜೆಪಿಗಳ ದಗಲ್ಬಾಜಿತನಗಳೇ ಎದ್ದು ಕಾಣಿಸುತ್ತದೆ.

ಈ ಬಿಜೆಪಿ ನೀಚರನ್ನು ಅಧಿಕಾರದಿಂದ ಒದ್ದೋಡಿಸಿ, ಅವರ ಪಿತೃ ಸಂಸ್ಥೆಯಾದ ಸಂಘ ಪರಿವಾರದ ಬಾಲವನ್ನು ಕಟ್ ಮಾಡಿದರಷ್ಟೇ ಕನ್ನಡಿಗರಿಗೆ ಮತ್ತು ಕರ್ನಾಟಕಕ್ಕೆ ನೆಮ್ಮದಿ, ಮರ್ಯಾದೆ, ಅಭಿವೃದ್ಧಿ ಎಂಬುದು ಕೈಗೆಟುಕುತ್ತದೆ...

* * * * * *

ಬಾಯಲ್ಲಿ ಬೆಣ್ಣೆ ಬಗಲಲ್ಲಿ ದೊಣ್ಣೆ ಎಂಬ ನಾಣ್ನುಡಿಯಂತೆ ಭಾರತ ಪ್ರಜಾಪ್ರಭುತ್ವವಾಗಿದ್ದರೂ ನಮ್ಮ ಸರ್ಕಾರಗಳ ಪ್ರವೃತ್ತಿ ಸರ್ವಾಧಿಕಾರಿಯ ಗುಣಗಳನ್ನು ಹೊಂದಿದೆ. ಈ ಧೋರಣೆಗೆ ಇತ್ತೀಚೆಗೆ ಬಲಿಪಶು ಆಗಿರುವವರು ಮಾರ್ಚ್ 6ರಂದು ದೆಹಲಿಯಲ್ಲಿ ಬಂಧನಕ್ಕೊಳಗಾದ ಪತ್ರಕರ್ತ ಮೊಹಮದ್ ಅಹಮದ್ ಆಜ್ಮಿ. ಆಜ್ಮಿ ಅವರು ಎಸಗಿದ 'ಅಪರಾಧ', ಕೇಂದ್ರ ಸರ್ಕಾರದ ನೀತಿ ನಿಯಮಗಳನ್ನು ನಿಷ್ಠುರವಾಗಿ ವಿಮರ್ಶಿಸಿದ್ದು; ನಮ್ಮ ಸರ್ಕಾರ ಅಮೆರಿಕ ಮತ್ತು ಇಸ್ರೇಲ್ ಸರ್ಕಾರಗಳ ತಾಳಕ್ಕೆ ಕುಣಿಯುತ್ತಿದೆ ಎಂದು ಟೀಕಿಸಿದ್ದು' ಪ್ಯಾಲೆಸ್ತೇನಿನ ಅರಬ್ಬರ ಪರವಾದ ನಿಲುವು ತೆಗೆದುಕೊಂಡದ್ದು. ಈ ಕಾರಣಗಳಿಗಾಗಿ ದೆಹಲಿ ಪೊಲೀಸರು ಕಳೆದ ಫೆಬ್ರವರಿ 13 ರಂದು ದೆಹಲಿಯಲ್ಲಿ ಇಸ್ರೇಲಿ ರಾಯಭಾರಿಯ ವಾಹನದ ಮೇಲಾದ ಬಾಂಬ್ ದಾಳಿಯ ಸಂಚಿನಲ್ಲಿ ಆಜ್ಮಿ ಭಾಗಿಯಾಗಿದ್ದಾರೆ ಎಂದು ಆರೋಪಿಸಿ ಅವರನ್ನು ಬಂಧಿಸಿದ್ದಾರೆ.



ಆಜ್ಮಿ

ಆರೋಗ್ಯಕರ ಪ್ರಜಾಪ್ರಭುತ್ವದಲ್ಲಿ ಪತ್ರಿಕೆಗಳ ಕರ್ತವ್ಯವೇ ಸರ್ಕಾರಗಳನ್ನು ಎಚ್ಚರಿಸುವುದು, ವಿಮರ್ಶಿಸುವುದು, ಟೀಕಿಸುವುದು. ಆದರೆ ನಮ್ಮ ಪ್ರಜಾಪ್ರಭುತ್ವ ಎಷ್ಟು ರೋಗಗ್ರಸ್ತವಾಗಿದೆ ಎಂದರೆ ಇಲ್ಲಿ ನಕ್ಸಲರೊಬ್ಬರ ಸಂದರ್ಶನವನ್ನು ಪ್ರಕಟಿಸಿದ್ದಕ್ಕೆ 'ಪ್ರಜಾವಾಣಿಯ' ಸಂಪಾದಕ ಪದ್ಮರಾಜ್ ದಂಡಾವತಿ ಅವರಿಗೆ ಪೊಲೀಸರು ನೋಟಿಸ್ ಜಾರಿ ಮಾಡುತ್ತಾರೆ. ಸರ್ಕಾರದ ನೀತಿಗಳನ್ನು ಟೀಕಿಸಿದ್ದಕ್ಕೆ 'ಕರಾವಳಿ ಅಲೆ'ಯ ಪ್ರಕಾಶಕರಾದ ಬಿ.ವಿ.ಸೀತಾರಾಮ್ ಅವರ ಕೈಸಾಲುಗಳಿಗೆ ಕಬ್ಬಿಣದ ಸರಪಳಿಗಳನ್ನು ಬಿಗಿದು ಊರೂರು ಅಲೆಯುವಂತೆ ಮಾಡುತ್ತಾರೆ. ನಕ್ಸಲರ ನಾಯಕ ಆಜಾದ್ ಮತ್ತು ಪತ್ರಕರ್ತ ಹೇಮಚಂದ್ರ ಪಾಂಡೆಯವರನ್ನೂ ನಕಲಿ ಎನ್‌ಕೌಂಟರ್‌ನಲ್ಲಿ ಕೊಂದು ಪಾಂಡೆ ಕೂಡ ನಕ್ಸಲರ ಬೆಂಬಲಿಗನಾಗಿದ್ದ ಎಂಬಂತೆ ಪೋಲಿಸರು ಬಿಂಬಿಸುತ್ತಾರೆ. ಗುಜರಾತಿನ ಮಾರಣಹೋಮದಲ್ಲಿ ಸತ್ತವರ ಪರವಾಗಿ ಹೋರಾಡುತ್ತಿರುವ ಪತ್ರಕರ್ತೆ ತೀಸ್ತಾ ಸೆಟಲ್ವಾದ್ ಅವರ ಮೇಲೆ ಬೊಟ್ಟಿ ಕೇಸುಗಳನ್ನು ದಾಖಲಿಸಿ ಹಿಂಸಿಸುತ್ತಾರೆ....

ಇವತ್ತು ಈ ಪ್ರಜಾಪ್ರಭುತ್ವದಲ್ಲಿ ಎಂತಹ ಸ್ಥಿತಿ ನಿರ್ಮಾಣವಾಗಿದೆ ಎಂದರೆ ನೀವು ಹಿಂದೂ ಆಗಿದ್ದು ಆದಿವಾಸಿಗಳ ಪರ ದನಿ ಎತ್ತಿದರೆ ನಿಮಗೆ 'ನಕ್ಸಲ್ ಬೆಂಬಲಿಗ' ಎಂಬ ಹಣೆಪಟ್ಟಿ ಕಟ್ಟಿಟ್ಟ ಬುತ್ತಿ. ಹಾಗೆಯೇ ನೀವು ಮುಸಲ್ಮಾನರಾಗಿದ್ದು ಆ ಸಮುದಾಯದ ಹಕ್ಕುಗಳ ಬಗ್ಗೆ ಮಾತನಾಡಿದರೆ ನೀವು ಪ್ರಭುತ್ವದ ಕಣ್ಣಲ್ಲಿ 'ಉಗ್ರಗಾಮಿ' ಅಥವಾ 'ಭಯೋತ್ಪಾದಕ' ಆಗುತ್ತೀರಿ. ಅಷ್ಟೇ ಅಲ್ಲ, ನರ್ಮದಾ ಆಣೆಕಟ್ಟು ವಿರುದ್ಧ ಮೇಧಾ ಪಾಟ್ಕರ್‌ರಂತೆಯೋ, ಕೂಡಂಕುಲಂ ಅಣುಸ್ಥಾವರದ ವಿರುದ್ಧ ಉದಯಕುಮಾರ್‌ರಂತೆಯೋ ಜನರ ಪರವಾಗಿ ಹೋರಾಡಿದರೆ ನಿಮಗೆ 'ಫಾರಿನ್ ಏಜೆಂಟ್' ಎಂಬ ಬಿರುದು ಕಾದಿರುತ್ತದೆ...

ಇದೆಲ್ಲದರ ಅರ್ಥ ಇಷ್ಟೇ: ಇವತ್ತು ಯಾರು ಸರ್ಕಾರದ, ಅಂತರರಾಷ್ಟ್ರೀಯ ಕಂಪನಿಗಳ, ಮೇಲು ವರ್ಗದವರ, ಉಳ್ಳವರ ಪರವಾಗಿ ಮಾತನಾಡುತ್ತಾರೋ ಅವರೆಲ್ಲ ಅಪ್ಪಟ 'ದೇಶಪ್ರೇಮಿ'ಗಳು. ಹಾಗೆಯೇ ಯಾರು ಈ ದೇಶದ ಬಡವರ, ದಲಿತರ, ಶೋಷಿತರ, ದಮನಿತರ, ಅಲ್ಪಸಂಖ್ಯಾತರ, ಆದಿವಾಸಿಗಳ ಪರ ಮಾತನಾಡುತ್ತಾರೋ ಅವರೆಲ್ಲ 'ದೇಶದ್ರೋಹಿ'ಗಳು. ಈ ಹಿನ್ನೆಲೆಯಲ್ಲಿ ಪತ್ರಕರ್ತ ಆಜ್ಮಿ ಅವರ ಬಂಧನ ನಮ್ಮ ಸರ್ಕಾರದ ಸೊಗಲಾಡಿತನವನ್ನೂ, ನಮ್ಮ ಪ್ರಜಾಪ್ರಭುತ್ವದ ಟೊಳ್ಳುತನವನ್ನೂ ಏಕಕಾಲಕ್ಕೆ ಸಾಬೀತುಪಡಿಸುವಂತಿದೆ.

ಅಂದಹಾಗೆ ಕೇಂದ್ರ ಸರ್ಕಾರದ ನೀತಿನಿಯಮಗಳನ್ನು ಟೀಕಿಸಿದ್ದಕ್ಕಾಗಿ ಅನ್ಯಾಯವಾಗಿ ಬಂಧಿಸಲ್ಪಟ್ಟ, ವಿನಾಕಾರಣ ಪೊಲೀಸರ ಥರ್ಡ್ ಡಿಗ್ರಿ ಹಿಂಸಾಚಾರಕ್ಕೆ ಗುರಿಯಾದ ಪತ್ರಕರ್ತರಲ್ಲಿ ಆಜ್ಮಿ ಮೊದಲನೆಯವರೇನಲ್ಲ. ಈ ಹಿಂದೆ ಇಂತಹ ಹಲವಾರು ಪ್ರಕರಣಗಳು ನಡೆದಿವೆ. ಅವುಗಳಲ್ಲಿ ಪ್ರಮುಖವಾದದ್ದು ಇಫ್ತಿಕರ್ ಗಿಲಾನಿ ಎಂಬ ಪತ್ರಕರ್ತರಿಗಾದದ್ದು.

ಪಾಕಿಸ್ತಾನದ ಪ್ರಮುಖ ಪತ್ರಿಕೆಯೊಂದಕ್ಕೆ ವಿಶೇಷ ವರದಿಗಾರರಾಗಿ ಕೆಲಸ ಮಾಡುತ್ತಿದ್ದ ಕಾಶ್ಮೀರಿ ಮೂಲದ ಗಿಲಾನಿ, ಕಾಶ್ಮೀರಿಗಳ ಹಕ್ಕೊತ್ತಾಯಗಳ ಬಗ್ಗೆ ಮತ್ತು ಕಾಶ್ಮೀರಿ ಹೋರಾಟಗಾರರ ವಿರುದ್ಧ ಭಾರತದ ಪೊಲೀಸರು ಮತ್ತು ಸೈನಿಕರು ನಡೆಸುತ್ತಿದ್ದ ದೌರ್ಜನ್ಯದ ಬಗ್ಗೆ ಹಲವಾರು ವರದಿಗಳನ್ನು ಬರೆದಿದ್ದರು. ಸಹಜವಾಗಿಯೇ ಆಗ ಅಧಿಕಾರದಲ್ಲಿದ್ದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರಕ್ಕೆ ಇದನ್ನು ಸಹಿಸಲಾಗಲಿಲ್ಲ. ಆದ್ದರಿಂದ ಗಿಲಾನಿ ಅವರು ಭಾರತ ಸೈನ್ಯದ ಬಗ್ಗೆ ಪಾಕಿಸ್ತಾನಕ್ಕೆ ಗೌಪ್ಯ ಮಾಹಿತಿಗಳನ್ನು ನೀಡುತ್ತಿರುವ ಬೇಹುಗಾರ ಎಂದು ಆರೋಪಿಸಿ ಅವರನ್ನು ಕಠಿಣವಾದ ಅಫೀಶಿಯಲ್ ಸೀಕ್ರೆಟ್ಸ್ ಆಕ್ಟ್ ಅಡಿ ಬಂಧಿಸಿತು.

ಆದರೆ ಗಿಲಾನಿ ಅವರ ಬಂಧನಕ್ಕೆ ಪೊಲೀಸರು ಕೊಟ್ಟ ಕಾರಣ ಅವರ ಕಂಪ್ಯೂಟರ್‌ನಲ್ಲಿ ಕಾಶ್ಮೀರದಲ್ಲಿ ಭಾರತ ಸೈನ್ಯದ ಚಲನವಲನದ ಬಗ್ಗೆ ಮಾಹಿತಿ ಇತ್ತು ಮತ್ತು ಅದನ್ನು ಪಾಕಿಸ್ತಾನಿಗಳಿಗೆ ಕೊಡಲು ಗಿಲಾನಿ ಉದ್ದೇಶಿಸಿದ್ದರು ಎಂಬುದಾಗಿತ್ತು. ವಾಸ್ತವವಾಗಿ ಗಿಲಾನಿ ಅವರ ಕಂಪ್ಯೂಟರ್‌ನಲ್ಲಿ ಇದ್ದ ಮಾಹಿತಿ ಎಂತಹದ್ದಾಗಿತ್ತೆಂದರೆ ಅದನ್ನು ಪಾಕಿಸ್ತಾನದ ಸರ್ಕಾರ ಅಂತರಜಾಲದಲ್ಲಿ ಬಿಡುಗಡೆ ಮಾಡಿತ್ತು ಮತ್ತು ಯಾರು ಬೇಕಾದರೂ ಅದನ್ನು ಇಂಟರ್‌ನೆಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿತ್ತು. ಅಂದರೆ ಅದರಲ್ಲಿ 'ಗುಪ್ತ'ವಾದದ್ದು ಏನೂ ಇರಲಿಲ್ಲ. ಆದರೂ ಗಿಲಾನಿ ಅವರಿಗೆ ಜಾಮೀನು ಸಿಗದಂತೆ ಸರ್ಕಾರ ನೋಡಿಕೊಂಡಿತಲ್ಲದೆ, ಪೊಲೀಸರು ಮತ್ತು ಗುಪ್ತದಳದವರು ಹೇಳುವ ಸುಳ್ಳುಗಳನ್ನು ಶಿರಸಾವಹಿಸಿ ವರದಿ ಮಾಡುವ ಕೆಲವು ಪತ್ರಕರ್ತರನ್ನು ಉಪಯೋಗಿಸಿಕೊಂಡು ಅವರ ತೇಜೋವಧೆಯನ್ನು ಮಾಡಲಾಯಿತು. ಗಿಲಾನಿ ಓರ್ವ ದೇಶದ್ರೋಹಿ ಮಾತ್ರವಲ್ಲ, ಆತ ಓರ್ವ ವಂಚಕ, ವಿಕೃತಕಾಮಿ ಎಂಬ ಹೊಲಸನ್ನೆಲ್ಲ ನಮ್ಮ ಆಡಳಿತ ವ್ಯವಸ್ಥೆ ಹಬ್ಬಿಸಿತು.

ಬಿಜೆಪಿ ನೇತೃತ್ವದ ಸರ್ಕಾರ ಗಿಲಾನಿಯವರನ್ನು ಹಣಿಯಲು ಎಂತಹ ದುಷ್ಟ ಹಾದಿಯನ್ನು ಹಿಡಿಯಿತೆಂದರೆ ದೆಹಲಿ ಪೊಲೀಸರು, ಗುಪ್ತದಳದವರು ಮತ್ತು ಕೇಂದ್ರ ಗೃಹ ಇಲಾಖೆ ಜೊತೆಗೂಡಿ ಹಲವಾರು ಖೊಟ್ಟಿ ಸಾಕ್ಷಿಗಳನ್ನು ಸಿದ್ಧಪಡಿಸಿತು. ಗಿಲಾನಿ ಅವರ ಅದೃಷ್ಟ ಚೆನ್ನಾಗಿತ್ತು, ಸರ್ಕಾರದ ವಿವಿಧ ಅಂಗಗಳು ಅತ್ಯುತ್ಸಾಹದಲ್ಲಿ ಎಂತಹ 'ಸಾಕ್ಷಿ'ಗಳನ್ನು ಸಿದ್ಧಪಡಿಸಿದ್ದವೆಂದರೆ ಅವುಗಳು ನ್ಯಾಯಾಲಯದ ಮುಂದೆ ಪರಸ್ಪರ ಡಿಕ್ಕಿ ಹೊಡೆದುಕೊಳ್ಳುವಂತಿದ್ದವು. ಇದನ್ನೆಲ್ಲ ಪತ್ರಕರ್ತರು ಬಯಲಿಗೆಳೆದಾಗ ವಿಧಿ ಇಲ್ಲದೆ ಬಿಜೆಪಿ ಸರ್ಕಾರ ಗಿಲಾನಿ ಅವರ ವಿರುದ್ಧ ಮಾಡಿದ್ದ ಆರೋಪಗಳನ್ನೆಲ್ಲ ಹಿಂದೆ ಪಡೆಯಿತು. ಪರಿಣಾಮವಾಗಿ ನ್ಯಾಯಾಲಯ ಗಿಲಾನಿ ಅವರು ದೋಷಮುಕ್ತರು ಎಂದು ಬಿಡುಗಡೆ ಮಾಡಿತು. ಸರ್ಕಾರದ ಈ ಷಡ್ಯಂತ್ರದಿಂದಾಗಿ ಗಿಲಾನಿ ಅವರು ಅನ್ಯಾಯವಾಗಿ ಏಳು ತಿಂಗಳ ಕಾಲ ಜೈಲುವಾಸವನ್ನು ಅನುಭವಿಸುವಂತಾಗಿತ್ತು. (ವಿಪರ್ಯಾಸ ನೋಡಿ, ಇದೇ ಗಿಲಾನಿ ಅವರು ತಮ್ಮ ಜೈಲು ಅನುಭವವನ್ನು ಕುರಿತು ಬರೆದ ಪುಸ್ತಕಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿತು.)


ಈಗ ಕೇಂದ್ರದಲ್ಲಿ ಬಿಜೆಪಿ ಬದಲಾಗಿ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಅಧಿಕಾರದಲ್ಲಿದೆ ಮತ್ತು ಗಿಲಾನಿ ಬದಲಾಗಿ ಆಜ್ಮಿ ಅವರನ್ನು ಬಂಧಿಸಲಾಗಿದೆ. ಇದಿಷ್ಟೇ ವ್ಯತ್ಯಾಸ.

ಇಸ್ರೇಲಿ ರಾಯಭಾರಿಯ ವಾಹನದ ಮೇಲಾದ ಬಾಂಬ್ ದಾಳಿಯಲ್ಲಿ ಇರಾನ್ ಸರ್ಕಾರದ ಪಾತ್ರವಿದೆ ಎಂದು ಅವತ್ತಿನಿಂದಲೇ ಇಸ್ರೇಲಿ ಸರ್ಕಾರ ಬಾಯಿಬಡಿದುಕೊಳ್ಳುತ್ತಿತ್ತು. ಮಾತ್ರವಲ್ಲದೆ ಇದಕ್ಕೆ ಕಾರಣರಾದವರನ್ನು ಬಂಧಿಸಿ ಎಂದು ಭಾರತದ ಸರ್ಕಾರದ ಮೇಲೆ ತೀವ್ರ ಒತ್ತಡ ಹೇರುತ್ತಿತ್ತು. ಆದರೆ ಇಲ್ಲಿಯತನಕ ಆ ದಾಳಿಯ ಹಿಂದಿರುವ ಸಂಚನ್ನು ದೆಹಲಿ ಪೊಲೀಸರಿಗೆ ಬೇಧಿಸಲಾಗಿಲ್ಲ. ಆದರೇನಂತೆ, ಕೇಂದ್ರ ಸರ್ಕಾರವನ್ನು ಟೀಕಿಸುತ್ತಿರುವ, ಇಸ್ರೇಲ್ ವಿರುದ್ಧದ ನಿಲುವನ್ನು ತಾಳಿರುವ ಒಬ್ಬರನ್ನು ಈ ಕೇಸಿನಲ್ಲಿ 'ಫಿಟ್' ಮಾಡಿದರೆ ಒಂದೇ ಕಲ್ಲಿನಲ್ಲಿ ಎರಡು ಹಕ್ಕಿಗಳನ್ನು ಹೊಡೆದಂತಾಗುತ್ತದೆ. ಇಂತಹ ಯೋಚನೆಯಲ್ಲಿದ್ದ ದುಷ್ಟ ಸರ್ಕಾರದ ಕಣ್ಣಿಗೆ ಬಿದ್ದದ್ದೇ ಆಜ್ಮಿ.

ಹಿರಿಯ ಪತ್ರಕರ್ತರಾದ, ದೆಹಲಿಯ ಪ್ರಮುಖರ ಪರಿಚಯವಿರುವ ಆಜ್ಮಿ ಇರಾನಿನ ಸುದ್ದಿ ಸಂಸ್ಥೆಯಾದ 'ಇರ್ನಾ'ಕ್ಕೆ ಕೆಲಸ ಮಾಡುತ್ತಿದ್ದಾರೆ. ಪರ್ಷಿಯನ್ ಮತ್ತು ಅರೇಬಿಕ್ ಭಾಷೆಗಳನ್ನು ಬಲ್ಲ ಆಜ್ಮಿ ಅರಬ್ ಪ್ರದೇಶಗಳ ರಾಜಕೀಯವನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆ. ಇರಾನ್ ಮಾತ್ರವಲ್ಲದೆ ಆ ಪ್ರದೇಶದಲ್ಲಿರುವ ಇತರೆ ದೇಶಗಳಲ್ಲಿ ಹಲವಾರು ಜನರ ಪರಿಚಯವನ್ನು ಹೊಂದಿದ್ದಾರೆ. ಅವರು ಪತ್ರಕರ್ತರಾಗಿರುವುದರಿಂದ ವಿವಿಧ ಮಾಹಿತಿ ಮೂಲಗಳನ್ನಲ್ಲದೆ ತರಹೇವಾರಿ ಜನರೊಂದಿಗೆ ಸಂಪರ್ಕವೂ ಇದೆ. ಅದೆಲ್ಲದಕ್ಕಿಂತ ಮುಖ್ಯವಾಗಿ ಆಜ್ಮಿ ಅವರು ಇತ್ತೀಚೆಗೆ ಟಿವಿ ಚಾನೆಲ್ ಒಂದರ ಚರ್ಚೆಯಲ್ಲಿ ಭಾಗವಹಿಸಿದ್ದಾಗ ಅಮೆರಿಕ ಮತ್ತು ಇಸ್ರೇಲ್ ಸರ್ಕಾರಗಳನ್ನು ಕಟುವಾಗಿ ಟೀಕಿಸಿದ್ದರು. ದಾಳಿ ನಡೆದ ಎರಡು ವಾರಗಳ ಹಿಂದೆ ಅವರು ಸಿರಿಯಾ ದೇಶಕ್ಕೆ ಭೇಟಿ ನೀಡಿದ್ದರು. ಅವರ ಫೋನ್‌ಗೆ ಇರಾನ್ ದೇಶದಿಂದ ಹಲವಾರು ಕಾಲ್‌ಗಳು ಬಂದಿದ್ದವು...

ಇಂತಹ 'ಸಾಕ್ಷ್ಯ'ಗಳನ್ನು ಆಧರಿಸಿಯೇ ಪೊಲೀಸರು ಆಜ್ಮಿ ಅವರನ್ನು ಬಂಧಿಸಿದ್ದಾರೆ. ದೆಹಲಿ ಪತ್ರಕರ್ತರು ಆಜ್ಮಿ ಅವರ ಬಂಧನವನ್ನು ಪ್ರತಿಭಟಿಸಿ ಅವರನ್ನು ಕೂಡಲೇ ಬಿಡುಗಡೆಮಾಡಬೇಕೆಂದು ಆಗ್ರಹಿಸುತ್ತಿದ್ದಾರೆ...

ಭಾರತವೆಂಬ ಪ್ರಜಾಪ್ರಭುತ್ವದಲ್ಲಿ ಸರ್ಕಾರ ಎಂತೆಂತಹ ಜನದ್ರೋಹಿ ಕೃತ್ಯಗಳಲ್ಲಿ ತೊಡಗುತ್ತದೆ ಎಂಬುದಕ್ಕೆ ಆಜ್ಮಿ ಅವರಿಗಾಗಿರುವ ಅನ್ಯಾಯ ಒಂದು ಹೊಸ ನಿದರ್ಶನವಷ್ಟೇ...



ಅಕ್ರಮ ಗಣಿಗಾರಿಕೆ

ಡಿಕೆಶಿ ಕಾಂಗ್ರೆಸ್ ಪಾಲಿನ ಬಸ್ಮಾಸುರ

ಇಡೀ ತಾಲ್ಲೂಕಿನಾದ್ಯಂತ ಕಲ್ಲು ಕಬಳಿಸಿದ ಡಿಕೆಶಿ ಕಟಿಂಗ್ ಮತ್ತು ಪಾಲಿಶಿಂಗ್ ಮಾಡುವ ಕೈಗಾರಿಕೆಯನ್ನು ಸ್ಥಾಪಿಸಿದ್ದಾನೆ. ಅದು ಎಲ್ಲಿ ಅಂತೀರ? ಸರ್ಕಾರಿ ಅರಣ್ಯದೊಳಗೆ. ತನ್ನ ಫ್ಯಾಕ್ಟರಿಗಾಗಿ ಅರಣ್ಯದಲ್ಲಿ ಅಕ್ರಮವಾಗಿ ರಸ್ತೆ ನಿರ್ಮಿಸಿದ್ದಾನೆ, ವಿದ್ಯುತ್ ಲೈನ್ ಎಳೆಸಿದ್ದಾನೆ. ಆದರೆ ಈಗ ಅಸ್ತಿತ್ವದಲ್ಲಿರುವ ಕಾನೂನಿನ ಪ್ರಕಾರ ಅರಣ್ಯ ಪ್ರದೇಶದಲ್ಲಿ ಇಂಥ ಯಾವ ಚಟುವಟಿಕೆಗೂ ಅವಕಾಶವಿಲ್ಲ. ಆದರೆ ಅಕ್ರಮಗಳಲ್ಲೇ ಮುಳುಗಿ ತೇಲುತ್ತಿರುವ ಡಿಕೆಶಿಯಂಥವರಿಗೆ ಯಾವ ಕಾನೂನು ಅನ್ವಯವಾಗುವುದಿಲ್ಲ.

ಅಕ್ರಮ ಗಣಿಗಾರಿಕೆ ಎಂಬ ಶಬ್ದ ಕಿವಿಗೆ ಬಿದ್ದಕೂಡಲೇ ನಮಗೆ ನೆನಪಾಗುವುದು ಬಳ್ಳಾರಿಯ ಕಬ್ಬಿಣ ಅದಿರು ಗಣಿಯ ಕರ್ಮಕಾಂಡ ಹಾಗೂ ಅದರ ಅನಭಿಷಕ್ತ ದೊರೆಗಳಾದ ರೆಡ್ಡಿ ಬ್ರದರ್ಸ್, ಶ್ರೀರಾಮುಲು ಮುಂತಾದವರು. ರೆಡ್ಡಿ ಜೈಲುಪಾಲಾಗುವ ಮೂಲಕ ಬಳ್ಳಾರಿಯ ಆಟಾಟೋಪ ತಹಬಂದಿಗೆ ಬಂದಂತಿದೆ. ಆದರೆ ಇದೇ ಸಂದರ್ಭದಲ್ಲಿ ರಾಜಧಾನಿಗೆ ಕೇವಲ 50 - 60 ಕಿ ಮೀ. ದೂರವಿರುವ ಕನಕಪುರ ತಾಲೋಕಿನಲ್ಲಿ ಸುಮಾರು 25 ವರ್ಷಗಳಿಂದಲೂ ಭಾರೀ ಅಕ್ರಮ ಗಣಿಗಾರಿಕೆಯ ಸಾಮ್ರಾಜ್ಯವೇ ಅಸ್ತಿತ್ವದಲ್ಲಿರುವುದು ಇತ್ತೀಚೆಗೆ ಮಾಧ್ಯಮಗಳಲ್ಲಿ ಸಣ್ಣಮಟ್ಟಿಗೆ ಚರ್ಚೆಯಾಗುತ್ತಿದೆ, ವಿಪರ್ಯಾಸ ನೋಡಿ, ಕನಕಪುರದಲ್ಲಿ ಅಕ್ರಮ ಗ್ರಾನೈಟ್ ದಂಧೆಯ ದೊರೆ ಬೇರೆ ಯಾರೂ ಅಲ್ಲ, ಬಳ್ಳಾರಿ ಅಕ್ರಮದ ವಿರುದ್ಧ "ಹೋರಾಟ" ನಡೆಸುತ್ತಿರುವ ವಿರೋಧ ಪಕ್ಷ ಕಾಂಗ್ರೆಸ್‌ನ ಕಾರ್ಯಾಧ್ಯಕ್ಷನಾಗಿದ್ದ, 3 ಬೇರೆ ಬೇರೆ ಇಲಾಖೆಗಳಿಗೆ ಮಂತ್ರಿಯಾಗಿದ್ದ ಡಿ.ಕೆ.ಶಿವಕುಮಾರ್. ಈ ವಿಷಯವನ್ನು ಮಾಧ್ಯಮಗಳೆದುರು ಬಿಚ್ಚಿಟ್ಟಿದ್ದು ಸ್ವತಃ ಅರಣ್ಯ ಮಂತ್ರಿ ಮೆಗಾಸಿಟಿ ಯೋಗೇಶ್ವರ್; ತನ್ನದೇ ವೈಯಕ್ತಿಕ ರಾಜಕೀಯ ಲೆಕ್ಕಾಚಾರದಿಂದಾಗಿ ಡಿಕೇಶಿ ಅಕ್ರಮಗಳ ವಿರುದ್ಧ ಇಲಾಖಾ ತನಿಖೆಗೆ ಯೋಗೇಶಿ ಆದೇಶಿಸಿರುವುದು ಈಗ ಹಳೆಯ ಸುದ್ದಿ. ಇಬ್ಬರು ಅಸಲಿ ಕಳ್ಳರ ನಡುವಿನ ಗುದ್ದಾಟದಂತೆ ಭಾಸವಾಗುತ್ತಿರುವ ಈ ಕಚ್ಚಾಟ ಯಾವ ರೀತಿಯಲ್ಲಿ ಅಂತ್ಯಕಾಣುತ್ತದೋ ದೇವರೇ ಬಲ್ಲ. ಈ ಸಂದರ್ಭದಲ್ಲಿ ರಾಜಧಾನಿಯ ಮಗ್ಗುಲಲ್ಲೇ ಸದ್ದುಗದ್ದಲವಿಲ್ಲದೇ ತಣ್ಣಗೆ ನಡೆಯುತ್ತಿರುವ ನಾಡಿನ ಪ್ರಾಕೃತಿಕ ಸಂಪತ್ತಿನ ಲೂಟಿ ಮತ್ತು ಪರಿಸರ ವಿನಾಶದ ದಾರುಣ ಕತೆಯನ್ನು ನಿಮ್ಮ ಮುಂದಿಡುತ್ತಿದ್ದೇವೆ.

ಇಲ್ಲಿಗೆ ಸುಮಾರು 25 ವರ್ಷಗಳ ಹಿಂದಿನ ಮಾತು. ತಮ್ಮೂರಿನ ಹೊಲಗದ್ದೆ, ಗೋಮಾಳ, ಅರಣ್ಯಭೂಮಿ ಮುಂತಾದ ಕಡೆ ಯಥೇಚ್ಛವಾಗಿದ್ದ ಕರಿಕಲ್ಲಿನ ಬಂಡೆಗಳನ್ನು ತೀರಾ ನಿಷ್ಪ್ರಯೋಜಕವೆಂದೇ ಸಾಮಾನ್ಯವಾಗಿ ರೈತರು ಭಾವಿಸಿದ್ದರು. ಆದರೆ ಆ ಕರಿಕಲ್ಲೇ ವಿದೇಶಗಳಲ್ಲಿ ಐಷಾರಾಮಿ ಕಟ್ಟಡಗಳಿಗೆ ಬಳಸುವ, ದುಬಾರಿ ಬೆಲೆಯ ಗ್ರಾನೈಟ್ ಶಿಲೆಯೆಂಬುದನ್ನು ಅರಿತ ಹಲವಾರು ದಂಧೆಕೋರರು ಈ ಕರಿಕಲ್ಲನ್ನು ಹೊಡೆದು, ಮಂಗಳೂರಿನ ಬಂದರಿಗೆ ಸಾಗಿಸಿ ಅಲ್ಲಿಂದ ನೇರ ವಿದೇಶಕ್ಕೆ ಸಾಗಿಸುವ ಕಾರ್ಯಕ್ಕಿಳಿದರು. ಆ ದಿನಗಳಲ್ಲಿ ಸೂಕ್ತ ಲೈಸೆನ್ಸ್ ವ್ಯವಸ್ಥೆಯಾಗಲಿ, ತೆರಿಗೆ ವಸೂಲಿ ಮಾಡುವ ವ್ಯವಸ್ಥೆಯಾಗಲಿ ಇರಲಿಲ್ಲ, ಒಂದು ಘನ ಮೀಟರ್ ಕರಿಕಲ್ಲು ಲಕ್ಷಾಂತರ ರೂಪಾಯಿಗಳನ್ನು ಅನಾಯಾಸವಾಗಿ ತಂದುಕೊಡುತ್ತಿದ್ದುದರಿಂದ ಹಲವರು ದಿಢೀರ್ ಕೋಟ್ಯಾಧಿಪತಿಗಳಾಗಿಬಿಟ್ಟರು. ಇದು ನಮ್ಮ ಸಾರ್ವಜನಿಕ ಸಂಪತ್ತಿನ ಹಗಲು ದರೋಡೆಯಾಗಿತ್ತು.

ಇಂಥ ಚಾರಿತ್ರಿಕ ಕಾಲಘಟ್ಟದಲ್ಲಿ ಡೀಕೇಶಿ ಮಾಡುತ್ತಿದ್ದುದೇನು?

ಆಗಲೇ ರಾಜಕೀಯಕ್ಕಿಳಿದಿದ್ದ ಡೀಕೇಶಿ, 1987ರಲ್ಲಿ ಜಿ.ಪಂ.ಸದಸ್ಯನಾಗಿ, ನಂತರ 1989ರ ಚುನಾವಣೆಯಲ್ಲಿ ಕಾಂಗ್ರೆಸ್ ಶಾಸಕನೂ ಆಗಿಬಿಟ್ಟಿದ್ದ. ಹೀಗಿದ್ದಾಗಲೇ ಅನಾಯಾಸವಾಗಿ ಹಣತಂದು ಕೊಡುತ್ತಿದ್ದ ಗ್ರಾನೈಟ್ ಕಲ್ಲುಗಳ ಕಡೆ ಆಕರ್ಷಿತನಾದ. ಒಂದು ಕೈಯಲ್ಲಿ ರಾಜಕೀಯ ಅಧಿಕಾರ, ಮತ್ತೊಂದು ಕೈಯಲ್ಲಿ ಕಲ್ಲುಗಣಿಯ ಅಕ್ರಮ ಸಂಪತ್ತು, ಹೀಗೇ ನಾಗಾಲೋಟದಲ್ಲಿ ಹೊರಟ ಡೀಕೇಶಿ ಹಿಂತಿರುಗಿ ನೋಡಲೇ ಇಲ್ಲ, ಹೀಗಾಗಿ ಇಂದು ಕರ್ನಾಟಕದಲ್ಲಿ ಅತ್ಯಂತ ಶ್ರೀಮಂತ ರಾಜಕಾರಣಿಗಳ ಸಾಲಿನಲ್ಲಿ ಅಗ್ರಗಣ್ಯ, ಈಗಿನ ಕಾಡು ಸಚಿವ ಯೋಗೇಶಿ ಆರೋಪಿಸುವಂತೆ ಡೀಕೇಶಿ ಅಕ್ರಮ ಸಂಪತ್ತನ್ನು ಸರ್ಕಾರಿ ಇಲಾಖೆಗಳ ಬಜೆಟ್‌ಗೆ ಹೋಲಿಸಬಹುದು. ಅಂದರೆ ಎಷ್ಟು ಸಾವಿರ ಕೋಟಿಗಳಿರಬಹುದು, ಈ ಬಗ್ಗೆ ಸೂಕ್ತ ತನಿಖೆ ಈಗಷ್ಟೇ ಆರಂಭವಾಗಬೇಕಿದೆ. ಆದರೆ ಕಳೆದ ಚುನಾವಣೆಯಲ್ಲಿ ಆತ ಘೋಷಿಸಿಕೊಂಡ ಆಸ್ತಿ ಮೊತ್ತ ಕೇವಲ 76 ಕೋಟಿ 69 ಲಕ್ಷಗಳು ಮಾತ್ರ.

ಗ್ರಾನೈಟ್ ದಂಧೆಗೆ ಕೈಯಿಟ್ಟ ಡೀಕೇಶಿ ಈಗಾಗಲೇ ಆ ದಂಧೆಯಲ್ಲಿದ್ದ ದುರ್ಬಲ ಕುಳಗಳನ್ನು ಸಲೀಸಾಗಿ ಆ ದಂಧೆಯಿಂದ ಹೊರದಬ್ಬಿದ. ಕೆಲ ಪ್ರಭಾವಿಗಳ ಜೊತೆ ವ್ಯವಹಾರ ಕುದುರಿಸಿಕೊಂಡ. ತನ್ನ ಕೈಲಿದ್ದ ಅಧಿಕಾರ, ಕೊತ್ವಾಲ್ ರಾಮಚಂದ್ರನಂಥ ಭೂಗತ ದೊರೆಯ ಶಿಷ್ಯನೆಂಬ ಕುಖ್ಯಾತಿ ಇಲ್ಲವನ್ನೂ ಧಾರಾಳವಾಗಿ ದುರ್ಬಳಕೆ ಮಾಡಿಕೊಂಡು ಕನಕಪುರದ ಅಕ್ರಮ ಗಣಿಗಾರಿಕೆಯ ಅನಭಿಷಕ್ತ ದೊರೆಯ ಸ್ಥಾನಕ್ಕೇರಿಬಿಟ್ಟ. ಆತನ ವಿರುದ್ಧ ಹೋರಾಡುತ್ತಿರುವವರು ಹೇಳುವಂತೆ ಬಳ್ಳಾರಿ ಗಣಿದಣಿಗಳಂತೆ ಕನಕಪುರದ ಗಣಿಗಳಿಂದ ಹಫ್ತಾ ವಸೂಲಿಗೆ ಇಳಿದಿದ್ದಾನಂತೆ. ಈತನ ಆಣತಿಯಿಲ್ಲದೆ ಕನಕಪುರದಲ್ಲಿ ಯಾವ ದಂಧೆಯೂ ನಡೆಯುವುದಿಲ್ಲವಂತೆ.

ಇಂಥಾ ಕಲ್ಲುಗಳ್ಳ ಡೀಕೇಶಿಯ ನಿಜ ವೃತ್ತಾಂತವನ್ನು ಅರ್ಥಮಾಡಿಕೊಳ್ಳಲಿಕ್ಕೆ ನಾವು ಕೆಲವು ಉದಾಹರಣೆಗಳನ್ನು ನೋಡೋಣ.

ಕನಕಪುರ ತಾಲೂಕಿನ ಯಡಮಾರನಹಳ್ಳಿ ಬಳಿ ನೆಹರೂ ದೊಡ್ಡಿಯೆಂಬ ಕುಗ್ರಾಮವಿದೆ. ಇಲ್ಲಿ ಇರುಳಿಗರು ಅಥವಾ ಕಾಡು ಪೂಜಾರಿಗಳು ಎಂದು ಕರೆಯಲಾಗುವ ಅಮಾಯಕ ಆದಿವಾಸಿಗಳು ನೆಲೆಸಿದ್ದಾರೆ. ಇದೇ ಗ್ರಾಮದಲ್ಲೇ ಸುಮಾರು 577 ಎಕರೆ ಸರ್ಕಾರಿ ಗೋಮಾಳವಿತ್ತು, ಲಾಗಾಯ್ತಿನಿಂದಲೂ ಆ ಭೂಮಿಯನ್ನು ಉಳುಮೆ ಮಾಡಿ ಜೀವನ ಸಾಗಿಸುತ್ತಿದ್ದರು. ಈ ಭೂಮಿಯಲ್ಲಿ ಗ್ರಾನೈಟ್ ಕಲ್ಲುಗಳಿದ್ದುದರಿಂದ ಹಲವಾರು ದಂಧೆಕೋರರು ಅಕ್ರಮವಾಗಿ ಲಗ್ಗೆ ಇಟ್ಟರು. ಹೀಗೆ ತಮ್ಮ ಜೀವನಾಧಾರಕ್ಕೆ ಸಂಚಕಾರ ಬಂದಿದ್ದರಿಂದ ಇರುಳಿಗರು ಅಕ್ರಮ ಕ್ವಾರಿಯನ್ನು ತಡೆಗಟ್ಟುವಂತೆಯೂ, ಹಾಗೂ ನೈಜ ವಾರಸುದಾರರಾದ ತಮಗೆ ಆ ಭೂಮಿಯನ್ನು ಹಂಚಿಕೆಮಾಡಿ, ಪಟ್ಟಾ ನೀಡಬೇಕೆಂದು ವರ್ಷಾನುಗಟ್ಟಳೆ ಹೋರಾಟ ನಡೆಸಿದರು. ಈ ಹೋರಾಟಕ್ಕೆ ರೈತಸಂಘ, ದಲಿತ ಸಂಘಗಳನ್ನೂ ಒಳಗೊಂಡಂತೆ ಹಲವು ಪರಿಸರಾಸಕ್ತರು, ಸಾಮಾಜಿಕ ಕಾರ್ಯಕರ್ತರು ಸಕ್ರಿಯವಾಗಿ ಬೆಂಬಲಿಸಿದರು.

ಈ ಸಂದರ್ಭದಲ್ಲಿ ನಡೆದ ಬಹಿರಂಗ ಸಭೆಗಳಲ್ಲಿ ಆಗ ವಿರೋಧಪಕ್ಷದ ನಾಯಕನಾಗಿದ್ದ ಯಡಿಯೂರಪ್ಪ ಕೂಡ 3 ಬಾರಿ ಭಾಗವಹಿಸಿದ್ದರು, 46 ದಿನಗಳ ನಿರಂತರ ಧರಣಿಯ ನಂತರ ಈ ಆದಿವಾಸಿಗಳಿಗೆ ಸುಮಾರು 366 ಎಕರೆ ಹಂಚಿಕೆಯಾಯಿತು. ಆಗ ವಿಧಾನಸಭೆ ವಿಸರ್ಜನೆಗೊಂಡಿದ್ದು ರಾಜ್ಯಪಾಲರ ಆಡಳಿತವಿತ್ತು, ಡೀಕೇಶಿ ಮಂತ್ರಿಯಾಗಿದ್ದರೆ ಆ ಭೂಮಿ ಬಹುಶಃ ಬಡಪಾಯಿಗಳ ಕೈಸೇರುತ್ತಿರಲಿಲ್ಲ, ಇರುಳಿಗರು ಈ ಹೋರಾಟದ ಯಶಸ್ಸಿನ ಸಂಭ್ರಮದಲ್ಲಿರುವಾಗಲೇ ಮರುದಿನವೇ ಹೋರಾಟದ ಮುಂಚೂಣಿಯಲ್ಲಿದ್ದ ಹುಚ್ಚೀರಯ್ಯ ಎಂಬುವವನನ್ನು ಕೊಲೆಮಾಡಿದ ಗ್ರಾನೈಟ್ ಪಾತಕಿಗಳು ಆ ಶವವನ್ನು




ಸಂಗಮಕ್ಕೆ ಎಸೆದು ಬಿಟ್ಟಿದ್ದರು. ಸಹಜವಾಗಿಯೇ ಡೀಕೇಶಿ ಪಟಾಲಂ ಮೇಲೆ ಕೊಲೆ ಕೇಸು ದಾಖಲಾಯಿತು. ಇನ್ನೇನು ಕೇಸಿನಲ್ಲಿ ಶಿಕ್ಷೆಯಾಗುವುದು ಖಚಿತ ಎಂಬ ಅಂತಿಮ ಹಂತದಲ್ಲಿದ್ದಾಗ ಕೊಲೆಯಾದವನ ಹೆಂಡತಿಯಿಂದಲೇ ವ್ಯತಿರಿಕ್ತ ಸಾಕ್ಷಿ ಹೇಳುವಂತೆ ಮಾಡಿ, ಕೇಸಿನಿಂದ ಬಚಾವಾದರು. ಈಗಲೂ ಕೊಲೆಗಾರರು ರಾಜಾರೋಷವಾಗಿ ತಿರುಗಾಡುತ್ತಿದ್ದಾರೆ. ಆ ಜಮೀನಿನಲ್ಲಿ ಅಕ್ರಮ ಗಣಿಗಾರಿಕೆ ಅಬಾಧಿತವಾಗಿ ಮುಂದುವರೆದಿದೆ. ಕನಕಪುರದ ಕಲ್ಲುಗಳ್ಳರ ಸಾಮ್ರಾಜ್ಯದಲ್ಲಿ ಕಾನೂನಿಗೆ ಕವಡೆಕಾಸಿನ ಕಿಮ್ಮತ್ತೂ ಇಲ್ಲ.


ಅಚ್ಚಲು ಗ್ರಾಮದ ಮತ್ತೊಂದು ಉದಾಹರಣೆಯನ್ನು ನೋಡಿ:- ಈ ಗ್ರಾಮದ ಸರ್ವೆ ನಂಬರ್ 53 ರಲ್ಲಿ 281 ಎಕರೆ ಗೋಮಾಳವಿದೆ. ಗಣಿಗಳ್ಳರ ರಾಕ್ಷಸ ನೋಟ ಅಲ್ಲಿದ್ದ ಕಲ್ಲುಗಳ ಮೇಲೆ ಬಿದ್ದಿದ್ದೇ ತಡ, ಗೋಮಾಳವನ್ನು ಯದ್ವಾತದ್ವಾ ಬಗೆದು ಕಲ್ಲುಕದಿಯುವ ಕೆಲಸ ಪ್ರಾರಂಭವಾಗೇಬಿಟ್ಟಿತು. ತಮ್ಮ ದನಕರುಗಳು ಮೇಯುತ್ತಿದ್ದ ಗೋಮಾಳ, ಹೀಗೆ ಕಲ್ಲುಕಳ್ಳರ ಪಾಲಾಗುತ್ತಿದ್ದುದನ್ನು ಕಂಡ ಅಚ್ಚಲು ಗ್ರಾಮಸ್ಥರು ಪ್ರತಿಭಟಿಸಿದರು. ಖ್ಯಾತ ನ್ಯಾಯವಾದಿ ಎಕೆ ಸುಬ್ಬಯ್ಯನಂಥ ವಕೀಲರ ಮೂಲಕ ಕಾನೂನು ಹೋರಾಟ ನಡೆಸಿದರು. ಪರಿಣಾಮವಾಗಿ ನ್ಯಾಯಾಲಯ ಅಕ್ರಮ ಗಣಿಗಾರಿಕೆಗೆ ತಡೆಯಾಜ್ಞೆ ನೀಡಿದೆ. '05. ನಂ 85/90' ಆದರೇನಂತೆ ಇಲ್ಲಿ ಕಾನೂನೆಂದರೆ ಕಾಲಕಸಕ್ಕೆ ಸಮನಾದುದು. ಈ ತಡೆಯಾಜ್ಞೆ ಉಲ್ಲಂಘಿಸಿದ ಗಣಿ ಇಲಾಖೆಯ ಅಧಿಕಾರಿಗಳು ಪ್ರಭಾತ್ ಗ್ರಾನೈಟ್ಸ್, 'ಹೆಂಡದ ಕುಳ ಎಸ್ ಪಿ ಆರ್ ತಿಮ್ಮೇಗೌಡನ ಕುಟುಂಬದ್ದು' ಹಾಗೂ ಆರ್ ಸಿ ಇಂಡಿಯಾ 'ನಿಜಲಿಂಗೇಗೌಡ ಎಂಬ ಉದ್ಯಮಿಗೆ ಸೇರಿದ್ದು' ಎಂಬ ಕಂಪನಿಗಳಿಗೆ ಅಕ್ರಮ ಗಣಿಗಾರಿಕೆಗೆ ಅವಕಾಶ ಮಾಡಿಕೊಟ್ಟರು. ಇದನ್ನ ಪ್ರಶ್ನಿಸಿದ ಸ್ಥಳೀಯ ಜನರು ಅಚ್ಚಲು ಗ್ರಾಮದ ಶಿವರಾಜ್ ಎಂಬುವವರ ನಾಯಕತ್ವದಲ್ಲಿ ಹೈಕೋರ್ಟ್ ಮೊರೆಹೋದರು. ಈ ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆಯಲ್ಲಿ ಹೈಕೋರ್ಟ್ ಗಣಿಗುತ್ತಿಗೆ ನೋಟಿಫಿಕೇಶನ್ ವಜಾಗೊಳಿಸಿದೆ. ಹೈಕೋರ್ಟ್ ಆದೇಶ ಬಂದಮೇಲೆ ಅಕ್ರಮಗಳಿಗೆ ಕಡಿವಾಣ ಬಿದ್ದಿರಬಹುದು ಎಂದು ಯಾರಾದರೂ ಊಹಿಸುವುದು ಸಹಜ. ಆದರೆ ಬಳ್ಳಾರಿ ಗಣಿ ರಿಪಬ್ಲಿಕ್ ಮತ್ತು ಕನಕಪುರ ಗ್ರಾನೈಟ್ ರಿಪಬ್ಲಿಕ್‌ಗಳಲ್ಲಿ ಪ್ರತ್ಯೇಕ ಕಾನೂನುಗಳು ಅಸ್ತಿತ್ವದಲ್ಲಿವೆ. ಹೈಕೋರ್ಟ್ ಆದೇಶ ಕಾಗದದ ಮೇಲಿದೆ. ಕಲ್ಲು ಗಣಿಲೂಟಿ ಕಳೆದ 10 ವರ್ಷದಿಂದಲೂ ಇಲ್ಲಿ ಮುಂದುವರೆದೇ ಇದೆ.

ಈ 10 ವರ್ಷಗಳ ಗುತ್ತಿಗೆ ಅವಧಿ 2009 ರಲ್ಲಿ ಮುಕ್ತಾಯವಾಯಿತು. ಸ್ಥಳೀಯರ ವಿರೋಧ, ಕಾನೂನು ಹೋರಾಟ ಇತ್ಯಾದಿ ಯಾವುದಕ್ಕೂ ಸೊಪ್ಪು ಹಾಕದ ದುಷ್ಟ ಅಧಿಕಾರಿಗಳು ಕೋರ್ಟ್‌ನ ಆದೇಶವನ್ನೂ ಉಲ್ಲಂಘಿಸಿ ಮತ್ತೆ ಗುತ್ತಿಗೆ ನವೀಕರಣ ಮಾಡಿದ್ದಾರೆ. ಕನಕಪುರ ರಿಪಬ್ಲಿಕ್‌ನಲ್ಲಿ ಕೆಲಸ ಮಾಡುವ ಅಧಿಕಾರಿಗಳಿಗೆ ಸರ್ಕಾರದ ಜೊತೆಗಿನ ಸಂಬಂಧ ಸಂಬಳ ಸಾರಿಗೆ ಪಡೆಯೋದಕ್ಕೆ ಮಾತ್ರ ಸೀಮಿತ. ಅವರು ನಿಷ್ಠರಾಗಿ ಸೇವೆ ಸಲ್ಲಿಸೋದು ಮಾತ್ರ ಅಕ್ರಮ ಗ್ರಾನೈಟ್ ದಂಧೆಯ ದೊರೆಗಳಿಗೆ.

ಕನಕಪುರ ಅಕ್ರಮಗಳ ತನಿಖೆ ನಡೆಸಿದ ಡಾ. ಯು.ವಿ. ಸಿಂಗ್ ಅವರ ವರದಿ ಪ್ರಕಾರ ಕಲ್ಲು ಗಣಿಗಾರಿಕೆ ನಡೆಯುತ್ತಿರುವ 484 ಸ್ಥಳಗಳ ಪೈಕಿ ಕೇವಲ 69ಕ್ಕೆ ಮಾತ್ರ ಅನುಮತಿ ಪಡೆದಿದ್ದು ಉಳಿದ ಎಲ್ಲವೂ ಅಕ್ರಮ ದಂಧೆಗಳಾಗಿವೆ. ಗೋಮಾಳಗಳು ಮಾತ್ರವಲ್ಲದೆ ರಾಜ್ಯ ಮೀಸಲು ಅರಣ್ಯ ಪ್ರದೇಶಗಳಲ್ಲೂ ಯಥೇಚ್ಛ ಲೂಟಿ ನಡೆದಿದೆ. ಅಕ್ರಮಗಳನ್ನು ತಡೆಗಟ್ಟಲೆಂದು ನೇಮಕವಾಗಿರುವ ಅಧಿಕಾರಿಗಳ ರಕ್ಷಣೆಯಲ್ಲೇ ಎಲ್ಲವೂ ನಡೆಯುತ್ತಿದೆ.


ಡಿ.ಕೆ.ಸೂರಿ

ಡಿಕೆಶಿ ಪಟಾಲಂನ ಅಕ್ರಮ ಲೂಟಿ ಸರ್ಕಾರೀ ಕಂಪನಿಗಳಿಗೂ ವಿಸ್ತರಿಸಿದೆ. ಮರಳೇಬೇಕುಪ್ಪೆ ಗ್ರಾಮದ ಈ ಉದಾಹರಣೆ ನೋಡಿ. ಈ ಗ್ರಾಮದಲ್ಲಿ ಮೈಸೂರು ಮಿನರಲ್ಸ್ ಲಿಮಿಟೆಡ್ ಎಂಬ ಸರ್ಕಾರಿ ಕಂಪನಿಗೆ ನೂರ ಹತ್ತು ಎಕರೆ ಜಮೀನಿದೆ. ಈ ಜಮೀನಿನಲ್ಲಿ ಕಂಪನಿಯು ಕಲ್ಲು ಗಣಿಗಾರಿಕೆ ನಡೆಸುತ್ತಿದೆ. ಇದೇ ಗ್ರಾಮದಲ್ಲಿ ಡಿಕೆಶಿ ತಮ್ಮ ಡಿಕೆ ಸುರೇಶ್ ಹೆಸರಿನಲ್ಲಿ ಚಿಕ್ಕೇಗೌಡ ಎಂಬುವವರಿಂದ ಸುಮಾರು 5 ಎಕರೆ ಜಮೀನನ್ನು ಕ್ರಯ ಮಾಡಿಕೊಂಡಿದ್ದಾರೆ. ವಾಸ್ತವದಲ್ಲಿ ಇವರು ಖರೀದಿ ಮಾಡಿದ ಜಮೀನಿನ ಕಡೆ ಒಮ್ಮೆಯೂ ತಿರುಗಿ ನೋಡಿಲ್ಲ, ಆ ಜಮೀನನ್ನು ಮಾರಾಟ ಮಾಡಿದ ಮೂಲ ಮಾಲೀಕರೇ ಇಂದಿಗೂ ಆ ಜಮೀನಿನಲ್ಲಿ ಬೇಸಾಯ ಮಾಡುತ್ತಿದ್ದಾರೆ. ಈ ಪಟ್ಟಾ ಜಮೀನಿನ ಹೆಸರಿನಲ್ಲಿ ಗಣಿ ಗುತ್ತಿಗೆ ಪಡೆದುಕೊಂಡ ಡಿಕೆಶಿ, ಅಲ್ಲಿಂದ ಸುಮಾರು ಒಂದೂವರೆ ಕಿಲೋಮೀಟರ್



...ದೂರವಿರುವ ಸರ್ಕಾರಿ ಜಮೀನಿನಲ್ಲಿ ಅಕ್ರಮ ...ಣಿಗಾರಿಕೆ ನಡೆಸಿದ್ದಾನೆ. ಅಷ್ಟು ಸಾಲದೆಂಬಂತೆ ಎಮ್ ...ಮ್ ಎಲ್ ಸ್ಟಾಕ್ ಮಾಡಿಟ್ಟಿದ್ದ ಕೋಟ್ಯಾಂತರ ...ರೂಪಾಯಿ ಬೆಲೆಬಾಳುವ ಗ್ರಾನೈಟನ್ನು ...ಲಪಟಾಯಿಸಲು ಸಂಚು ಹೂಡಿದ ಡಿಕೆಶಿ ಸುಮಾರು ...ಇರಡೂವರೆ ಕೋಟಿ ಬೆಲೆಬಾಳುವ ಕಲ್ಲುಗಳನ್ನು ...ಅಕ್ರಮವಾಗಿ ಸಾಗಿಸಿಬಿಟ್ಟ. ಈ ಅಕ್ರಮದ ವಿರುದ್ಧ ...ದೂರು ಕೊಡಲು ಎಮ್‌ಎಮ್‌ಎಲ್ ಸಿಬ್ಬಂದಿ ...ಪೋಲೀಸ್ ಠಾಣೆಗೆ ಹೋದರೆ ಪೊಲೀಸರು ಅಕ್ರಮ ...ತಡೆಯುವುದು ಹಾಗಿರಲಿ ದೂರನ್ನೇ ...ದಾಖಲಿಸಿಕೊಳ್ಳಲಿಲ್ಲ. ಅಂದಹಾಗೆ ಡಿಕೆಶಿ ಆಗ ...ಎಸ್.ಎಂ.ಕೃಷ್ಣನ ಸರ್ಕಾರದಲ್ಲಿ ಸಹಕಾರಿ ಸಚಿವನಾಗಿದ್ದ.

ಈ ಬಗ್ಗೆ ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆ ...ದಾಖಲಾಗಿದ್ದು ಹೈಕೋರ್ಟ್ 2011ರಲ್ಲಿ ಸಿಓಡಿ ತನಿಖೆಗೆ ...ಆದೇಶಮಾಡಿತ್ತು. ಈ ತನಿಖೆಯಿಂದ ಡಿಕೆಶಿ ಕೂಟ ...ಅಕ್ರಮಗಳಲ್ಲಿ ತೊಡಗಿರುವುದು ಸಾಬೀತಾಗಿದೆ. ಆದರೆ ...ಕಾನೂನು ಕ್ರಮ ಜರುಗಿಸುವ ಧೈರ್ಯ ಯಾರಿಗೂ ...ಇಲ್ಲವಾಗಿದೆ.

ಅಕ್ರಮ ಸಂಪತ್ತನ್ನು ಲಪಟಾಯಿಸಲು ಎಂತೆಂಥಾ ...ಪಂಚರಂಗಿ ಆಟಗಳನ್ನು ಆಡುತ್ತಾನೆ ಎಂಬುದಕ್ಕೆ ಗಟ್ಟಿಗುಂದ ...ಕ್ರಮದ ಉದಾಹರಣೆ ನೋಡಿ. ಗಟ್ಟಿಗುಂದದ ಸರ್ವೆ ...ನಂಬರ್ 145 ರಲ್ಲಿ ಉತ್ಕೃಷ್ಟ ದರ್ಜೆಯ ಗ್ರಾನೈಟ್ ...ಲಭ್ಯವಿದೆ. ಈ ಜಾಗಕ್ಕೆ ರಾಜು ತಂದೆ ಶಿವರಾಮ್ ...ಎಂಬುವರು ಗಣಿ ಗುತ್ತಿಗೆ ಪಡೆದುಕೊಂಡಿದ್ದರು. ಭಾರೀ ...ಬೆಲೆಬಾಳುವ ಸಂಪತ್ತು ತನ್ನ ಕೈತಪ್ಪಿ ಹೋಗುತ್ತಿರುವುದನ್ನು ...ಸಹಿಸಲಾಗದೆ ಡಿಕೆಶಿ ಭಾರೀ ಕುತಂತ್ರ ಒಂದನ್ನು ಹೂಡಿದ. ...ಗಣಿ ಇಲಾಖೆಗೆ ಅರ್ಜಿ ಸಲ್ಲಿಸಿ ತಮಗೆ ಸರ್ಕಾರಿ ...ಕಂಪನಿಯಾದ ಎಮ್‌ಎಮ್‌ಎಲ್ ಜೊತೆ ಜಾಯಿಂಟ್ ...ವೆಂಚರ್ ಇದೆಯೆಂದು, ಆದ್ದರಿಂದ ಸರ್ಕಾರಿ ಕಂಪನಿಗೆ ...ಪ್ರಾಶಸ್ತ್ಯ ನೀಡಿ ತಮಗೆ ಗಣಿ ಗುತ್ತಿಗೆ ನೀಡಬೇಕೆಂದು ...ಕೇಳಿಕೊಂಡ. ವಾಸ್ತವದಲ್ಲಿ ಎಮ್‌ಎಮ್‌ಎಲ್‌ನ ಕಲ್ಲುಗಳನ್ನು ...ಕದ್ದಿದ್ದು ಬಿಟ್ಟರೆ ಈತನಿಗೆ ಬೇರೆ ಯಾವ ಸಂಬಂಧವೂ ...ಇರಲಿಲ್ಲ. ಆದರೂ ಡಿಕೆಶಿಯ ಆಣತಿಯಂತೆ ಅಧಿಕಾರಿಗಳು ...ರಾಜುವಿನ ಗುತ್ತಿಗೆ ಒಪ್ಪಂದವನ್ನು ರದ್ದುಮಾಡಿ ಡಿಕೆಶಿಗೆ ...ಗಣಿಗಾರಿಕೆಗೆ ಅವಕಾಶ ಮಾಡಿಕೊಟ್ಟರು.

ಇಂಥಾ ಅಕ್ರಮವನ್ನು ಪ್ರಶ್ನಿಸಿ ರಾಜು ಹೈಕೋರ್ಟ್‌ನಲ್ಲಿ ...ದಾವೆ ಹೂಡಿದರು. ಖ್ಯಾತ ನ್ಯಾಯವಾದಿಯಾದ ರವಿವರ್ಮ ...ಕುಮಾರ್ ಈ ಕೇಸಿನಲ್ಲಿ ವಕಾಲತ್ತು ವಹಿಸಿದ್ದರು. ...ಅಂತಿಮವಾಗಿ 2008ರಲ್ಲಿ ಡಿಕೆಶಿ ಕೂಟದ ಗುತ್ತಿಗೆ ...ಲೈಸೆನ್ಸನ್ನು ಕೋರ್ಟ್ ವಜಾಮಾಡಿತು. ಆದರೇನಂತೆ! ...ಅಷ್ಟರಲ್ಲಿ ಸುಮಾರು 8 ವರ್ಷಗಳ ಕಾಲ ಕಲ್ಲು ಲೂಟಿ ...ಹೊಡೆದಿದ್ದ ಡಿಕೆಶಿ ಕೋಟಿ ಕೋಟಿಗಳನ್ನು ಬಾಚಿಕೊಂಡಿದ್ದ.

ಹೀಗೆ ಇಡೀ ತಾಲ್ಲೂಕಿನಾದ್ಯಂತ ಕಲ್ಲು ಕಬಳಿಸಿದ ...ಡಿಕೆಶಿ ಕಟಿಂಗ್ ಮತ್ತು ಪಾಲಿಶಿಂಗ್ ಮಾಡುವ ...ಕಾರ್ಖಾನೆ/...ಗಾರಿಕೆಯನ್ನು ಸ್ಥಾಪಿಸಿದ್ದಾನೆ. ಅದು ಎಲ್ಲಿ ಅಂತೀರ? ...ದಯಕನಹಳ್ಳಿ ಗಡಿ ಸರ್ಕಾರಿ ಅರಣ್ಯದೊಳಗೆ. ತನ್ನ ...ಲಾರಿಗಾಗಿ ಅರಣ್ಯದಲ್ಲಿ ಅಕ್ರಮವಾಗಿ ರಸ್ತೆ ನಿರ್ಮಿಸಿದ್ದಾನೆ, ...ವಿದ್ಯುತ್ ಲೈನ್ ಎಳೆಸಿದ್ದಾನೆ. ಆದರೆ ಈಗ ಅಸ್ತಿತ್ವದಲ್ಲಿರುವ ...ಕಾನೂನಿನ ಪ್ರಕಾರ ಅರಣ್ಯ ಪ್ರದೇಶದಲ್ಲಿ ಇಂಥ ಯಾವ ...ಚಟುವಟಿಕೆಗೂ ಅವಕಾಶವಿಲ್ಲ. ಆದರೆ ಅಕ್ರಮಗಳಲ್ಲೇ ...ಮುಳುಗಿ ತೇಲುತ್ತಿರುವ ಡಿಕೆಶಿಯಂಥವರಿಗೆ ಯಾವ ...ಕಾನೂನು ಅನ್ವಯವಾಗುವುದಿಲ್ಲ. ರೈತರ ಪಂಪ್‌ಸೆಟ್‌ಗಳಿಗೆ ...ಸರಿಯಾಗಿ ಕರೆಂಟು ಒದಗಿಸಲಾಗದ ಇಲಾಖೆಯವರು ...ಡಿಕೆಶಿಯ ಅಕ್ರಮ ಕೈಗಾರಿಕೆಗೆ 24 ಗಂಟೆಯೂ ಕರೆಂಟ್ ...ಸಪ್ಲೈ ಮಾಡುತ್ತಿದ್ದಾರೆ.

ಇತ್ತೀಚೆಗೆ ಈ ಅಕ್ರಮಗಳ ಬಗ್ಗೆ ತನಿಖೆ ಮಾಡಿದ ...ಅರಣ್ಯ ಇಲಾಖೆ ಈ ಅಕ್ರಮಗಳಲ್ಲಿ ಶಾಮೀಲಾದ ...ಆರೋಪದ ಮೇಲೆ ಕನಕಪುರ ರೇಂಜರ್ ನಾಗರಾಜು ...ಮತ್ತು ಎಸಿಎಫ್ ಶ್ರೀನಿವಾಸಯ್ಯ ಎಂಬ ಇಬ್ಬರು ...ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದೆ.


ಆದರೆ ಡಿಕೆಶಿಗೆ ಶಿಕ್ಷೆ ನೀಡುವವರ್‍ಯಾರು? ರಾಜ್ಯ ...ಕಾಂಗ್ರೆಸ್ ನಾಯಕರು ಇದಕ್ಕೇನನ್ನುತ್ತಾರೆ.

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಮೇಯರ್ ಪಟ್ಟಕ್ಕಾಗಿ ಅಶೋಕ್-ಸೋಮಣ್ಣರ ಹಣಾಹಣಿ

ರಣಚಂಡಿ ಕೌನ್ಸಿಲರ್ ಶಾಂತಕುಮಾರಿಗೆ ಲೋಕಾಯುಕ್ತ ಬರೆ


ಶಾರದಮ್ಮನ ಮೇಯರ್‌ಗಿರಿ ಇನ್ನೇನು ಮುಗಿಯಿತು ಎನ್ನುವಾಗಲೇ ಮೂಡಲಪಾಳ್ಯದ ಲೇಡಿ ಕೌನ್ಸಿಲರ್ ಶಾಂತಕುಮಾರಿಯ ಮನೆ ಮೇಲೆ ಲೋಕಾಯುಕ್ತ ದಾಳಿಯಾಗಿದೆ. ಆ ಪಾಟಿ ಆಸ್ತಿಪಾಸ್ತಿ ಜಪ್ತಿಯಾಗದೆ ಹೋದರೂ ತಕ್ಕಮಟ್ಟಿಗೆ ಸಖತ್ತು ಸಂಪತ್ತೇ ಶಾಂತಕುಮಾರಿಯ ಮಡಿಲಿನಲ್ಲಿತ್ತು. ಆಕೆ ಸೋಮಣ್ಣನ ಶಿಷ್ಯೆ. ಹೇಗೂ ಈ ಸಾರಿ 2ಎ ಕ್ಯಾಟಗರಿಯವರೇ ಮೇಯರ್ ಆಗಬೇಕಿತ್ತು. ಈ ಪಟ್ಟಿಯಲ್ಲಿ ಶಾಂತಕುಮಾರಿಯ ಹೆಸರೂ ಮುಂಚೂಣಿಯಲ್ಲಿತ್ತು. ಜೊತೆಗೆ ಮಂತ್ರಿ ಸೋಮಣ್ಣ ಕೂಡ ತನ್ನ ಶಿಷ್ಯೆಗೇ ಮೇಯರ್‌ಗಿರಿ ದಕ್ಕಬೇಕೆಂದು ಹಠಕ್ಕೆ ಬಿದ್ದಿದ್ದರಿಂದ ಶಾಂತಕುಮಾರಿಯೇ ಬೆಂಗಳೂರಿನ ನೂತನ ಮೇಯರ್ ಎಂಬ ಸುದ್ದಿ ಹೊಗೆಯಾಡಿದ ಬೆನ್ನಲ್ಲೇ ಲೋಕಾಯುಕ್ತ ದಾಳಿಯಾಗಿದೆ.



ಶಾಂತಕುಮಾರಿ

ಇಲ್ಲಿ ಮೇಯರ್‌ಗಿರಿಗೂ ಲೋಕಾಯುಕ್ತ ದಾಳಿಗೂ ಇರುವ ಸಂಬಂಧ ಮಾತ್ರ ನಿಗೂಢ.

ಲೋಕಾಯುಕ್ತ ಎಸ್.ಪಿ. ಶಿವಶಂಕರ್ ಪ್ರಕಾರ ಇಲ್ಲಿಗೆ ವರ್ಷದ ಹಿಂದೇ ಆರ್‌ಟಿಐ ಕಾರ್ಯಕರ್ತ ಮಲ್ಲತ್ತಹಳ್ಳಿಯ ಜಯರಾಮ್ ಶಾಂತಕುಮಾರಿಯ ವಿರುದ್ಧ ಅಕ್ರಮ ಆಸ್ತಿಗಳಿಕೆಯ ದೂರು ದಾಖಲಿಸಿದ್ದ. ಉಪಲೋಕಾಯುಕ್ತರು ಅದನ್ನು ತನಿಖೆಗಾಗಿ ಡಿವೈಎಸ್‌ಪಿ ಗಿರೀಶ್‌ರಿಗೆ ವರ್ಗಾಯಿಸಿದ್ದರು. ತನಿಖೆ ಮಾಡಿದ ಪೊಲೀಸರು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಶಾಂತಕುಮಾರಿ ವಿರುದ್ಧ ಕೇಸ್ ದಾಖಲಿಸಿಯೇ ಮಾರ್ಚ್ 16 ರ ಶುಕ್ರವಾರ ದಾಳಿ ನಡೆಸಿದ್ದಾರೆ.



ಜಯರಾಂ



ದಾಳಿ ನಡೆದ ಮನೆ




ರಾಮಕೃಷ್ಣ

ಒಂದಲ್ಲ ಮೂರನೇ ಬಾರಿ ಪಾಲಿಕೆಗೆ ಗೆದ್ದು ಉಪಮೇಯರ್ ಕೂಡ ಆಗಿದ್ದ ಶಾಂತಕುಮಾರಿ ಪ್ರವೃತ್ತಿಯಲ್ಲಿ ರಣಚಂಡಿಯಾದರೂ ಘಟಾನುಘಟಿ ಕೌನ್ಸಿಲರ್‌ಗಳಿಗೆ ಹೋಲಿಸಿದರೆ ದೊಡ್ಡಮಟ್ಟದ ಹಗರಣಗಳನ್ನು ಮಾಡಿದವಳಲ್ಲ. ಉಪಮೇಯರ್ ಹರೀಶ್, ಮಾಜಿ ಮೇಯರ್ ನಟರಾಜ್, ಬನಶಂಕರಿ ವಾರ್ಡಿನ ಬಸವರಾಜ್, ಬೆಳ್ಳಂದೂರಿನ ಬಾಬುರೆಡ್ಡಿ, ವಿಜಯನಗರದ ರವೀಂದ್ರ ಮುಂತಾದವರಿಗೆ ಹೋಲಿಸಿದರೆ ಶಾಂತಕುಮಾರಿ ಮಾಡಿದ್ದು ಕಮ್ಮಿಯೆ. ಹಾಗಂತ ಹಾವಳಿಯಲ್ಲಿ ಶಾಂತಕುಮಾರಿ ಯಾವ ರೌಡಿಗೂ ಕಮ್ಮಿಯಿಲ್ಲ. ಮೂಡಲಪಾಳ್ಯ ಆರುಂಧತಿನಗರ, ಕನಕನಗರ, ಮಾಳಗಾಳ, ನಾಗರಬಾವಿ ಇತ್ಯಾದಿ ಏರಿಯಾಗಳಲ್ಲಿ ಶಾಂತಕುಮಾರಿಯ ಕುಡುಕ ಗಂಡ ರವಿಕುಮಾರ ಮತ್ತು ಆತನ ತಮ್ಮಂದಿರಾದ ಗೋಪಾಲ್, ಮೋಹನರ ರೌಡಿಜಮ್ಮಿಗೆ ರೋಸತ್ತೇ ಅನೇಕರು ಮನೆ ತೊರೆದಿದ್ದಾರೆ. ಇದು ಸಾಲದೆಂಬಂತೆ ಪುಡಿ ರೌಡಿಗಳ ಜೊತೆ ನಿಂತು ಖುದ್ದು ಶಾಂತಕುಮಾರಿಯೇ ನಡುರಸ್ತೆಯಲ್ಲಿ ಫೈಟಿಂಗ್‌ಗೆ ಬೀಳುತ್ತಾಳೆ.

ಹೀಗೆ ಶಾಂತಕುಮಾರಿ ಶುರುಹಚ್ಚಿಕೊಂಡ ಅಟ್ಟಹಾಸಕ್ಕೆ ಜೊತೆಯಾದವನು ಮಲ್ಲತ್ತಹಳ್ಳಿಯ ಪೊಲೀಸ್ ಜಯರಾಮ. ಈತನ ಜೊತೆ ಪಂಚಶೀಲನಗರದ ರಾಮಕೃಷ್ಣ, ನಾಗರಬಾವಿ ಹೊಯ್ಸಳನಗರದ ಹನುಮಂತ, ಆರುಂಧತಿನಗರದ ಬಾಬು ಮುಂತಾದ ಕಿಡಿಗೇಡಿಗಳ ಗುಂಪೊಂದು ಶಾಂತಕುಮಾರಿಯ ನೆರಳಲ್ಲೇ ತಲೆ ಎತ್ತಿತು. ಶುರುವಿನಲ್ಲಿ ಶಾಂತಕುಮಾರಿಯ ಭಟ್ಟಂಗಿಗಳಾದ ಇವರೆಲ್ಲ ಕಾಲಕ್ರಮೇಣ ಆಕೆಯ ಹೆಸರಲ್ಲೇ ರೋಲ್‌ಕಾಲ್ ಶುರುಹಚ್ಚಿಕೊಂಡರು. ಈ ಪೈಕಿ ಪೊಲೀಸ್ ಜಯರಾಮ ಆರ್‌ಟಿಐ ದಂಧೆಯಲ್ಲಿ ಪಳಗಿದ್ದ. ಯಾರ್‍ಯಾರು ಬಿಲ್ಡಿಂಗ್ ಕಟ್ಟಿಸುತ್ತಿದ್ದಾರೆ, ಯಾರ್‍ಯಾರು ಬೋಗಸ್ ಬಿಲ್ ಕಾಮಗಾರಿ ಮಾಡಿಸುತ್ತಿದ್ದಾರೆ, ಯಾವ್ಯಾವ ಇಂಜಿನಿಯರ್‌ನ ಕತೆ ಏನು ಇತ್ಯಾದಿಗಳನ್ನೆಲ್ಲ ಪತ್ತೆಹಚ್ಚಿ ಮಾಹಿತಿ ಹಕ್ಕು ಕಾಯ್ದೆಯಡಿ ಅರ್ಜಿ ಹಾಕುವುದು, ಆನಂತರ ಬಂದಷ್ಟು ರೊಕ್ಕ ಸುಲಿದು ತೆಪ್ಪಗಾಗುವುದು ಈ ತಂಡದ ನಿತ್ಯ ಕಾಯಕವಾಯಿತು. ಇದು ಗೊತ್ತಾಗಿದ್ದೇ ಶಾಂತಕುಮಾರಿ ಈ ನಾಲ್ವರನ್ನೂ ಕರೆದು ಉಗಿದು ಓಡಿಸಿದಳು. ಯಾವತ್ತು ಶಾಂತಕುಮಾರಿಯ ಬಿಟ್ಟೀಕೂಳು ತಪ್ಪಿತೋ ಜಿದ್ದಿಗೆ ಬಿದ್ದ ಜಯರಾಮ ಆಕೆಯ ವಿರುದ್ಧವೇ ತಿರುಗಿಬಿದ್ದ.


ಕ್ರಮೇಣ ಶಾಂತಕುಮಾರಿಯ ವಾರ್ಡಿನ ಬೋಗಸ್ ಕಾಮಗಾರಿಗಳ ವಿರುದ್ಧವೇ ಆರ್‌ಟಿಐ ಅರ್ಜಿ ಗುಜರಾಯಿಸಿದ. ಇದರಿಂದ ಕೆರಳಿ ರಣಚಂಡಿಯಾದ ಶಾಂತಕುಮಾರಿ ಹುಡುಗರನ್ನು ಬಿಟ್ಟು ಜಯರಾಮುನನ್ನು ಅಟಕಾಯಿಸಿದ್ದೇ ತಪರಾಕಿ ಹಾಕಿಸಿಬಿಟ್ಟಳು. ಇದರಿಂದಾಗಿ ಮತ್ತಷ್ಟು ರೊಚ್ಚಿಗೆದ್ದ ಜಯರಾಮು ಇಲ್ಲಿಗೆ ಏಳು ತಿಂಗಳ ಹಿಂದೆ ಶಾಂತಕುಮಾರಿ ಮತ್ತು ಆಕೆಯ ಗಂಡ ರವಿಕುಮಾರ್‌ರಿಂದ ತನ್ನ ಪ್ರಾಣಕ್ಕೆ ಆಪತ್ತಿದೆಯೆಂದು ಚಂದ್ರಲೇಔಟ್ ಪೊಲೀಸ್ ಠಾಣೆಗೆ ದೂರು ಕೊಟ್ಟ.

ಈ ಎಲ್ಲಾ ಹಿನ್ನೆಲೆಯಲ್ಲೇ ಶಾಂತಕುಮಾರಿಯ ಆಸ್ತಿ-ಪಾಸ್ತಿ ಪಟ್ಟಿ ಮಾಡಿ ಜಯರಾಮು ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದ.



ಸೋಮಣ್ಣ

ವಿಪರ್ಯಾಸವೆಂದರೆ ಈ ರೀತಿ ಅಕ್ರಮ ಆಸ್ತಿಗಳಿಗೆ ಸಂಬಂಧಪಟ್ಟಂತೆ ದೂರು ಕೇವಲ ಶಾಂತಕುಮಾರಿಯ ಮೇಲಷ್ಟೇ ಅಲ್ಲ, ಬೆಂಗಳೂರಿನ 60ಕ್ಕೂ ಅಧಿಕ ಬಿಬಿಎಂಪಿ ಕಾರ್ಪೊರೇಟರುಗಳ ವಿರುದ್ಧ ಇಂಥದ್ದೇ ದೂರುಗಳು ಲೋಕಾಯುಕ್ತದಲ್ಲಿವೆ. ಬೇರೆಲ್ಲ ಕೌನ್ಸಿಲರ್‌ಗಳನ್ನು ಬಿಟ್ಟು ಕೇವಲ ಶಾಂತಕುಮಾರಿಯನ್ನೇ ಆಯ್ಕೆ ಮಾಡಿ, ಅದೂ ಒಂದು ವರ್ಷದ ಹಿಂದಿನ ದೂರನ್ನು ಹಿಡಿದು, ಈ ಗಳಿಗೆಯನ್ನೇ ಕಾಯ್ದು ಲೋಕಾಯುಕ್ತ ದಾಳಿ ನಡೆಸಲು ಕಾರಣವೇನು?




ಅಶೋಕ್

ಪಾಲಿಕೆ ಮೂಲಗಳೇ ಹೇಳುವಂತೆ ಅದು ಮೇಯರ್‌ಗಾದಿಯ ಷಡ್ಯಂತ್ರ. ಹೇಗೂ ಈ ಬಾರಿ 2ಎ ಕ್ಯಾಟಗರಿಯವರೇ ಮೇಯರ್ ಆಗಬೇಕು. ಮೇಯರ್ ರೇಸಿನಲ್ಲಿ ಬನಶಂಕರಿ ವಾರ್ಡಿನ ಬಸವರಾಜ್ ಮತ್ತು ಶ್ರೀನಿವಾಸ ನಗರದ ವೆಂಕಟೇಶ್‌ಮೂರ್ತಿ ಹೆಸರುಗಳು ಮುಂಚೂಣಿಯಲ್ಲಿವೆ. ಇವರಿಬ್ಬರೂ ಹೇಳಿಕೇಳಿ ಮಂತ್ರಿ ಅಶೋಕ್ ಭಟ್ಟಂಗಿಗಳು. ಶಾಂತಕುಮಾರಿ ಸೋಮಣ್ಣನ ಶಿಷ್ಯೆ. ಈ ಬಾರಿಯೂ ತನ್ನ ಚೇಲಾಗಳನ್ನೇ ಮೇಯರ್‌ಗಾದಿಗೆ ತರುವುದು ಅಶೋಕ್ ಹುನ್ನಾರವಾದರೆ ಅದಕ್ಕೆ ತದ್ವಿರುದ್ಧವಾಗಿ ತನ್ನದೇ ರಬ್ಬರ್ ಸ್ಟಾಂಪ್ ಶಾಂತಕುಮಾರಿಯನ್ನು ಮೇಯರ್ ಮಾಡಬೇಕೆಂಬ ಹಠ ಸೋಮಣ್ಣನಿಗಿದೆ. ಅದು ಬೆಂಗಳೂರನ್ನಾಳುವ ಸೋಮಣ್ಣ-ಅಶೋಕ್ ಜಿದ್ದಾಜಿದ್ದಿ ಕೂಡಾ.



ಮೇಯರ್ ಶಾಂತ

ಹಾಗೆ ನೋಡಿದರೆ ಮೇಯರ್ ಆಕಾಂಕ್ಷಿಗಳ ಪೈಕಿ ಬನಶಂಕರಿ ವಾರ್ಡಿನ ಬಸವರಾಜ್ ವಿರುದ್ಧ ದಿವಾನಾ ಅಲಿಯ ಹಂತಕರಿಗೆ ನೆರವಾದ ಆರೋಪವಿದೆ. ವೆಂಕಟೇಶ್‌ಮೂರ್ತಿಯ ವಾರ್ಡಿನ ಅಷ್ಟೂ ಕಾಮಗಾರಿಗಳ ಜಾತಕ ಕೆದಕಿದರೆ ಆತ ಕೂಡ ಜೈಲು ಪಾಲಾಗಲೇಬೇಕು. ಇವರಿಬ್ಬರ ವಿರುದ್ಧವೂ ಸಿಕ್ಕಾಪಟ್ಟೆ ದೂರುಗಳು ದಾಖಲಾಗಿವೆ. ಆದರೆ ಲೋಕಾಯುಕ್ತ ಪೊಲೀಸರು ಬೇರೆಲ್ಲ ಕೌನ್ಸಿಲರ್‌ಗಳನ್ನು ಬಿಟ್ಟು ಮೇಯರ್ ಆಕಾಂಕ್ಷಿ ಶಾಂತಕುಮಾರಿಯನ್ನೇ ಟಾರ್ಗೆಟ್ ಮಾಡುತ್ತಾರೆಂದರೆ ಅದು ಅಶೋಕ್ ಕೈವಾಡವಾಗಿರಲೇಬೇಕೆಂಬುದು ಶಾಂತಕುಮಾರಿಯ ಕುಡುಕ ಗಂಡನ ವಾದ. ಕೆಲ ಸೋಮಣ್ಣನ ಶಿಷ್ಯರೂ ಗೃಹ ಸಚಿವ ಅಶೋಕ್ ವಿರುದ್ಧವೇ ಕಿಡಿಕಾರುತ್ತಿದ್ದಾರೆ. ಮೇಯರ್ ಪಟ್ಟಕ್ಕಾಗಿ ಅಶೋಕ್ ಮತ್ತು ಸೋಮಣ್ಣನ ಮಧ್ಯೆ ಭುಗಿಲೆದ್ದ ಜಿದ್ದಾಜಿದ್ದಿಯ ಒಂದು ಹಂತ ಶಾಂತಕುಮಾರಿ ಮೇಲಿನ ದಾಳಿಯ ಮೂಲಕ ಪರ್ಯಾವಸಾನಗೊಂಡಂತಾಗಿದೆ. ಅಲ್ಲಿಗೆ ಸೋಮಣ್ಣಗಿಂತ ಅಶೋಕ್ ಕೈಯೇ ಮೇಲಾಗಿದೆ.




...ನಟರಾಜು, ವೆಂಕಟೇಶ್‌ಮೂರ್ತಿ

• ರಾ. ಸೋಮನಾಥ್

ಒಂದೇ ಕಲ್ಲಿಗೆ ಎರಡು ಹಕ್ಕಿ

ಸೋಮಣ್ಣನನ್ನು ಮುಂದಿಟ್ಟುಕೊಂಡು ಮೊದಲು ಮೇಯರ್ ಆಗುವುದು ಆ ನಂತರ ಅದೇ ಸೋಮಣ್ಣನಿಗೆ ಕೈಕೊಟ್ಟು ಗೋವಿಂದರಾಜನಗರದ ಎಮ್ಮೆಲ್ಲೆ ಕ್ಯಾಂಡಿಡೇಟಾಗುವುದು ಶಾಂತಕುಮಾರಿಯ ಉದ್ದೇಶವಾಗಿತ್ತೇ?




ಹೇಗೆ ತಾನೇ ಈ ಬಾರಿ ಬೆಂಗಳೂರಿಗೆ ಮೇಯರ್ ಎಂದುಕೊಂಡು ಶಾಂತಕುಮಾರಿ ಅಡ್ಡಾಡುತ್ತಿದ್ದಳೋ ಅದೇ ಗತ್ತಿನಲ್ಲಿ ಗೋವಿಂದರಾಜನಗರಕ್ಕೆ ತಾನೇ ಭಾವೀ ಎಮ್ಮೆಲ್ಲೆ ಎಂದು ಶಾಂತಕುಮಾರಿ ಪೋಜು ಕೊಡುತ್ತಿದ್ದಳು. ಮುಂಬರುವ ಚುನಾವಣೆಯಲ್ಲಿ ಹೇಗೋ ಸೋಮಣ್ಣ ವಿಜಯನಗರಕ್ಕಾಗಲಿ, ಗೋವಿಂದರಾಜನಗರಕ್ಕಾಗಲಿ ಸ್ಪರ್ಧಿಸುವುದಿಲ್ಲ. ಅದರಲ್ಲೂ ಗೋವಿಂದರಾಜನಗರ ಮಹಿಳಾ ಮೀಸಲಾತಿ ಎಂದಾದರೆ ಅಲ್ಲಿಗೆ ತನ್ನನ್ನು ಬಿಟ್ಟರೆ ಬೇರೆ ಮಹಿಳಾಮಣಿಯರೇ ಗತಿಯಿಲ್ಲ. ಲೇಔಟ್ ಕೃಷ್ಣಪ್ಪ ತನ್ನ ವಿರುದ್ಧ ಯಾರನ್ನೇ ಹಿಡಿ ತಂದು ನಿಲ್ಲಿಸಿದರೂ ತನ್ನ ಮುಂದೆ ಅವರ್‍ಯಾರೂ ಲೆಕ್ಕಕ್ಕಿಲ್ಲ ಎಂದೇ ಶಾಂತಕುಮಾರಿ ಪೋಜುಕೊಟ್ಟಳು. ಅದಕ್ಕೆ ತಕ್ಕಂತೆ ನಾಗರಬಾವಿಯ ಬಿಜೆಪಿ ಕೌನ್ಸಿಲರ್ ಮತ್ತು ಸೋಮಣ್ಣನ ಬಲಗೈ ಬಂಟ ಉಮೇಶ್‌ಶೆಟ್ಟಿ ಕೂಡಾ ಶಾಂತಕುಮಾರಿಗೆ ಫರಾಕು ಹಾಕಲಾರಂಭಿಸಿದರು.

ಇಷ್ಟಾದ ಮೇಲೆ ಸೋಮಣ್ಣನ ಕಡುವೈರಿ ಲೇಔಟ್ ಕೃಷ್ಣಪ್ಪನ ಕಣ್ಣು ಕೆಂಪಾಗದೆ ಇರುತ್ತಾ? ಶಾಂತಕುಮಾರಿಯ ಜೊತೆಗಿದ್ದು ರೋಲ್‌ಕಾಲ್ ಶುರುಹಚ್ಚಿಕೊಂಡಿದ್ದ ಜೈರಾಮು, ರಾಮಕೃಷ್ಣ, ಹನುಮಂತ, ಬಾಬು, ಸೈಕಲ್ ಚಕ್ಳಿ ಮುಂತಾದ ಕುಖ್ಯಾತ ಪುಢಾರಿಗಳೆಲ್ಲ ಅಂತಿಮವಾಗಿ ಗತಿಗೆಟ್ಟು ಲೇಔಟ್ ಕೃಷ್ಣಪ್ಪನ ಮನೆಯಂಗಳದಲ್ಲೇ ಆಶ್ರಯ ಪಡೆದರು. ಇದರಿಂದಾಗಿ ಪ್ರತ್ಯಕ್ಷವೋ-ಪರೋಕ್ಷವೋ ಲೋಕಾಯುಕ್ತ ದಾಳಿಯ ಹಿಂದೆ ಕೃಷ್ಣಪ್ಪನ ಹೆಸರು ಕೇಳಿಬಂದಿದೆ. ಆದರೆ ಗುರಿ ಈಡೇರಿದ್ದು ಮಾತ್ರ ಗೃಹಮಂತ್ರಿ ಅಶೋಕ್‌ರದ್ದೇ. ಸೋಮಣ್ಣನನ್ನು ಮಣಿಸಿದಂತಾಯ್ತು, ತನ್ನ ಭಟ್ಟಂಗಿಗಳನ್ನೇ ಮೇಯರ್‌ಗಿರಿಗೇರಿಸುವುದು ಸಲೀಸಾಯ್ತು, ಒಂದೇ ಕಲ್ಲಲ್ಲಿ ಎರಡು ಹಕ್ಕಿ...!

ಮಂಗಳೂರು: ಪೋಲಿ ಪಾಲೇಮಾರ್ ಮೇಲೆ ಐಟಿ ದಾಳಿ ಮಾಡಿಸಿದ್ದ್ಯಾರು?

ಬಿಜೆಪಿಗರಿಗೆ ಪಾಲೇಮಾರ್ ಈಗ ಮಗ್ಗಲು ಮುಳ್ಳಾಗಿ ಬಿಟ್ಟಿದ್ದಾನೆ. ಸೆಕ್ಸ್ ಗೇಟ್ ಹಗರಣದಲ್ಲಿ ಪಾಲೇಮಾರ್ ಅಪರಾಧಿಯೆಂದು ಸಾಬೀತಾಗುವುದಿಲ್ಲ ಎಂಬುದು ಬಿಜೆಪಿಗರಿಗೆ ಗೊತ್ತು. ಆತ ನಿರಪರಾಧಿಯಾಗಿ ಹೊರಬಂದರೆ ತಮ್ಮ ಆಟ ನಡೆಯದೆಂದು ಭಾವಿಸಿರುವ ಸ್ಥಳೀಯ ಆರೆಸ್ಸೆಸ್-ಬಿಜೆಪಿ-ಕೇಸರಿ ಕೂಟ ಹೊಸ ಷಡ್ಯಂತ್ರ ರೂಪಿಸಿತ್ತು. ಅದೇ ಐಟಿ ರೇಡು.

• ನಹುಷ



ಹೈಟೆಕ್ ಮಾಯಾನಗರಿ ಮಂಗಳೂರಿನ ಹೈಪ್ರೊಫೈಲ್ ದಗಲುಬಾಜಿ ದಲ್ಲಾಳಿ ಕೃಷ್ಣ ಪಾಲೇಮಾರ್‌ನ ಪಾಪದ ಕೊಡಗಳೀಗ ಒಂದೊಂದಾಗಿ ತುಂಬಿ ತುಳುಕಲು ಶುರುವಾಗಿವೆ! ಇಡೀ ರಾಜ್ಯದ ಆಗು-ಹೋಗು ನಿರ್ಧಾರವಾಗುವ ಪರಮ ಪವಿತ್ರ ಶಾಸನಸಭೆಯ ಸಭಾಂಗಣದಲ್ಲಿ ಹಾಡುಹಗಲೇ ನಡೆದ 'ಸೆಕ್ಸ್ ಗೇಟ್' ಹಗರಣದ ಕಿಂಗ್‌ಪಿನ್ ಈ ಪಾಲೇಮಾರನೆಂಬುದು ಜಗಜ್ಜಾಹೀರಾಗಿರುವ ಇತಿಹಾಸ. ಈ ಅಸಹ್ಯ ಭಾನಗಡಿಗೆ ತಿಂಗಳು ತುಂಬುವ ಮೊದಲೇ ಪಾಲೇಮಾರನ ಅಕ್ರಮ ಭೂ ಬಿಸಿನೆಸ್ ಅಡ್ಡೆಗಳ ಮೇಲೆ ಆದಾಯ ತೆರಿಗೆ ದಾಳಿ ನಡೆದುಹೋಗಿದೆ. ಇದರ ಬೆನ್ನಿಗೇ ಸುಳ್ಳು ದಾಖಲೆ ಸೃಷ್ಟಿಸಿ ಶಿಕ್ಷಣ ಸಂಸ್ಥೆಯೊಂದರ ಲಕ್ಷಾಂತರ ರೂಪಾಯಿ ಲಪಟಾಯಿಸಿದ್ದಾನೆಂದು ಪಾಲೇಮಾರ್ ಮೇಲೆ ಕ್ರಿಮಿನಲ್ ಕೇಸೊಂದು ನ್ಯಾಯಾಲಯದಲ್ಲಿ ದಾಖಲಾಗಿದೆ!

ದುಡ್ಡು-ದಾದಾಗಿರಿ-ಅಧಿಕಾರ ಬಲದಿಂದ ಬಾರಾ ಭಾನಗಡಿ ಮುಚ್ಚಿಹಾಕುತ್ತ ಬಂದಿದ್ದ ಈ ಹಿಂದೂ ಸಂಸ್ಕೃತಿಯ ದೀವಟಿಕೆದಾರನ ಎದೆಗೆ ಆ ಅಕ್ರಮ-ಅನ್ಯಾಯ-ಅನಾಚಾರದ ಪ್ರಕರಣಗಳು ಸಾಲು-ಸಾಲಾಗಿ ಗೋರಿಯಿಂದೆದ್ದು ಬಂದು ಒದೆಯಲಾರಂಭಿಸಿವೆ. ಯಾವುದೇ ಸಾಮಾಜಿಕ ಬದ್ಧತೆ, ಜನಪರ ಹೋರಾಟದ ಹಿನ್ನೆಲೆ ಇಲ್ಲದ ಉಂಡಾಡಿ ಪುಂಡ ಪಾಲೇಮಾರ್ "ಸಮಾಜಸೇವಕ"ನ ಪೋಷಾಕು ಖರೀದಿಸಿದ್ದೇ ದೋನಂಬರ್ ದುಡ್ಡಿಂದ. 2000 ದ ದಶಕದಲ್ಲಿ ಬಿಜೆಪಿಗೆ ದುಡ್ಡಿನ ಮುಗ್ಗಟ್ಟು ಇತ್ತು, ಆ ಹೊತ್ತಲ್ಲಿ ಪಾಲೇಮಾರನಂಥ ದಗಾಕೋರರೇ ಆ ಪಕ್ಷಕ್ಕೆ ಫೈನಾನ್ಸಿಯರ್‌ಗಳಾಗಿದ್ದು. ಪಾಲೇಮಾರ್ ಹಡಬೆ ಹಣದ ಚೀಲ ಹಿಡಿದುಕೊಂಡು ಕರಾವಳಿ ಸಂಘಪರಿವಾರದ 'ಡಾನ್' ಕಲ್ಲಡ್ಕ ಪ್ರಭಾಕರ ಭಟ್ಟನ ಬಳಿಗೆ ಉಪಾಯವಾಗಿ ಹೋಗಿ ಸೇರಿಕೊಂಡ. ಪಾರ್ಟಿಗೆ-ಭಟ್ಟನಿಗೆ ಬೇಕು-ಬೇಕಾದಾಗೆಲ್ಲ ಥೇಟ್ ಕಳ್ಳಗೊಬ್ಬರ-ಕಳಪೆ ಕ್ರಿಮಿನಾಶಕದ ವ್ಯಾಪಾರಿ ಐ.ಎಂ. ಜಯರಾಮ ಶೆಟ್ಟಿ (ಮಾಜಿ ಎಂಪಿ) ಸ್ಟೈಲಲ್ಲೇ ಹಣ ಹರಿಸುತ್ತ ಹೋದ ಪಾಲೇಮಾರ್.

ಕೃಷ್ಣ ಪಾಲೇಮಾರನ ಕಳ್ಳ ಅಕ್ಷಯ ಪಾತ್ರೆ ಕಂಡೇ ಸಂಘಪರಿವಾರದ ಪುರೋಹಿತರು ಆತನಿಗೆ ಬಿಜೆಪಿಯಿಂದ ಅಸೆಂಬ್ಲಿಗೆ ಸ್ಪರ್ಧಿಸುವ ಅವಕಾಶವೂ ಕೊಟ್ಟರು. 2000 ದಶಕದಾರಂಭದಲ್ಲಿ ಪಾಲೇಮಾರ್ ಹಿಂದೂತ್ವದ ಅಮಲೇರಿಸಿ ಕೊಂಡಿದ್ದ ಬಿಜೆಪಿ ಪರಿವಾರದ ಗೌರವಾನ್ವಿತ ನಾಯಕನಾಗಿ ಹೋದ. ಅದುವರೆಗೆ ಸುರತ್ಕಲ್ (ಮಂಗಳೂರು ಉತ್ತರ) ಕ್ಷೇತ್ರದ ಶಾಸಕನಾಗಿದ್ದ ಕುಂಬಳೆ ಸುಂದರರಾವ್ ಎಂಬ ಯಕ್ಷಗಾನ ಕಲಾವಿದನ ಆರ್ಥಿಕ ಅಡಚಣೆಗೆಲ್ಲ ಪಾಲೇಮಾರ್ ಉದಾರವಾಗಿ ಸ್ಪಂದಿಸುತ್ತ ಆತನನ್ನು ಪಳಗಿಸಿಕೊಂಡು ಬಿಟ್ಟ. ತುಂಬ ಸಲೀಸಾಗಿ ಆ ಕೋಮುವಾದಿ ಯಕ್ಷಗಾನ 'ನಟ ಭಯಂಕರ'ನನ್ನು ನಿವಾರಿಸಿಕೊಂಡ ಪಾಲೇಮಾರ್ ತಾನೇ ಸುರತ್ಕಲ್‌ನ ಶಾಸಕನಾಗಿ ಅವತರಿಸಿದ!! ಗೋಲ್‌ಮಾಲ್ ಭೂ ಉದ್ಯಮಿಯಾಗಿದ್ದ ಪಾಲೇಮಾರ್ ರಾಜಕಾರಣಿಯಾದ ಪರಿಯಿದು.


ಪಾಲೇಮಾರ್ ಎಂದರೆ ಕಲ್ಲಡ್ಕ ಭಟ್ಟನಿಂದ ಡಿ.ವಿ. ಸದಾನಂದ ಗೌಡನವರೆಗೆ, ವಿ.ಎಸ್. ಆಚಾರ್ಯನಿಂದ ಪೇಜಾವರ ಸ್ವಾಮಿ ತನಕ, ಎ.ಜಿ. ಕೊಡ್ಗಿಯಿಂದ ಧನಂಜಯ ಕುಮಾರ್‌ವರೆಗಿನ ಚೆಡ್ಡಿ-ಕಾವಿ ಕರಾಮತ್ತುದಾರರಿಗೆಲ್ಲ ಅಚ್ಚುಮೆಚ್ಚಿನ 'ಖಜಾಂಚಿ' ಅಂತಾಗಿಹೋದರ. 'ಹಿರಿಯರಿಗೆ' ವಿಧೇಯನಾಗಿರುತ್ತಿದ್ದ ಪಾಲೇಮಾರ್ ಬಿಜೆಪಿಯ ಮತ್ತೊಬ್ಬ ದೋಖಾ ಧೀರ-ಶಿಪ್ಪಿಂಗ್ ಉದ್ಯಮಿ ನಾಗರಾಜ ಶೆಟ್ಟಿಗಿಂತ ಬೆಟರ್ ಎಂಬ ಭಾವನೆ ಕೇಸರಿ ಪಕ್ಷದಲ್ಲಿತ್ತು, ನಾಗರಾಜ ಶೆಟ್ಟಿಯ 'ಗುತ್ತಿನ ಗತ್ತು' ಬಿಜೆಪಿಯ ವೈದಿಕಶಾಹಿಗಳಿಗೆ ತಲೆ 'ಗಿರ್' ಗುಡಿಸುತ್ತಿತ್ತು.

ಆದರೆ ಪಾಲೇಮಾರ್ ಮಂತ್ರಿಯಾಗಿ ಒಂದು ವರ್ಷ ಕಳೆಯುತ್ತಿದ್ದಂತೆಯೇ ಕಲ್ಲಡ್ಕ ಭಟ್ಟನ ಕಣ್ಣು ಕೆಂಪಾಗಿ ಬಿಟ್ಟಿತು. ಪಾಲೇಮಾರ್ ಪಾರ್ಟಿಯಲ್ಲಿ, ಮಂಗಳೂರು ಮಹಾನಗರ ಪಾಲಿಕೆಯಲ್ಲಿ ತನ್ನ ಹಿಡಿತ ಸ್ಥಾಪಿಸಿ ಲ್ಯಾಂಡ್ ಲಿಂಕ್ ಉದ್ಯಮ ಸಾಮ್ರಾಜ್ಯ ವಿಸ್ತರಿಸುತ್ತ ಹೋಗಿದ್ದು ಬಿಜೆಪಿ ಬ್ರಾಹ್ಮಣರಿಗ್ಯಾಕೋ ಸಹಿಸಲಾಗಲಿಲ್ಲ. ಜೊತೆಗೆ ಪಾಲೇಮಾರನೂ ಚೆಡ್ಡಿ ರಿಂಗ್ ಮಾಸ್ಟರ್‌ಗಳಿಗೆ ಕೇಳು-ಕೇಳಿದಾಗೆಲ್ಲ ಕಾಸು ಕೊಡುವ ಪರಿಪಾಠ ನಿಲ್ಲಿಸಿದ್ದು ಆತನ ವಿರುದ್ಧ ಬಿಜೆಪಿಯಲ್ಲಿ ಅಪಸ್ವರ ಎಬ್ಬಿಸಿಬಿಟ್ಟಿತ್ತು, ಪಾಲೇಮಾರನನ್ನು ನಿವಾರಿಸಿಕೊಳ್ಳಲು ಸಮಯ ಸಾಧಿಸುತ್ತಿದ್ದ ಕಲ್ಲಡ್ಕ ಅಂಡ್ ಗ್ಯಾಂಗ್‌ಗೆ 'ಸೆಕ್ಸ್ ಗೇಟ್' ಹಗರಣ ಬ್ರಹ್ಮಾಸ್ತ್ರದಂತೆ ಕೈಗೆ ಸಿಕ್ಕಿತು.

ಯಾವಾಗ ಬ್ಲೂ ಫಿಲ್ಮ್ ಪ್ರಕರಣದಲ್ಲಿ ಪಾಲೇಮಾರ್ ಎಕ್ಸ್‌ಪೋಸ್ ಆಗಿಹೋದನೋ ಆಗ, ಆತ ಜಿಲ್ಲೆಯ ಆಡಳಿತ ಪಕ್ಷದ ರಾಜಕೀಯದಲ್ಲಿ ಮತ್ತು ಸಂಘಪರಿವಾರದ ಒಡ್ಡೋಲಗದಲ್ಲಿ ತಾತ್ಸಾರ-ತಿರಸ್ಕಾರಕ್ಕೆ ತುತ್ತಾಗಬೇಕಾಗಿ ಬಂತು, ಪಾಪ! ಪಾಲೇಮಾರ್ ಪರಿಸ್ಥಿತಿ ಕರಾವಳಿಯ ಬಿಜೆಪಿಯಲ್ಲಿ ಅದೆಷ್ಟು ಹೀನಾಯವಾಗಿ ಹೋಯ್ತೆಂದರೆ, ಆತನೊಂದಿಗೆ ಮಾತಾಡಿದರೆ ಬ್ಲೂಫಿಲ್ಮ್ ಪೆಡ್ಲರ್ಸ್ ಅನ್ನಿಸಿಕೊಳ್ಳಬೇಕಾಗುತ್ತದೆಂಬ 'ಮಡಿ-ಮೈಲಿಗೆ' ಭಾವನೆಯಿಂದ ಆತನನ್ನು ದೂರ ತಳ್ಳುವವರೇ ಜಾಸ್ತಿಯಾಗಿ ಹೋದರು. ಆತ ಆಚೆಯಿಂದ ಬರುತ್ತಿದ್ದಂದರೆ, ಈಚೆಯಿಂದ ಪಾರ್ಟಿ ಪರಾಕ್ರಮಿಗಳು ಜಾಗ ಖಾಲಿ ಮಾಡುತ್ತಿದ್ದಾರೆ. ಹಳ್ಳಕ್ಕೆ ಬಿದ್ದ ತೋಳಕ್ಕೆ ತಲೆಗೊಂದು ಕಲ್ಲು ಎಂಬಂತೆ ಪಾಲೇಮಾರ್‌ನಿಂದಾಗಿ ಪಾರ್ಟಿಗಾದ ಡ್ಯಾಮೇಜ್ ಬಗ್ಗೆಯೇ ಕರಾವಳಿಯ ಚೆಡ್ಡಿ ಪರಿವಾರದಲ್ಲೀಗ ನಿತ್ಯ ನೂತನ ಚರ್ಚೆಗಳು ಸಾಗಿದೆ.

ಆತ ಮಂತ್ರಿಗಿರಿ-ಅಧಿಕಾರ ಬಳಸಿಕೊಂಡು ವೈಯಕ್ತಿಕ ರಿಯಲ್ ಎಸ್ಟೇಟ್ ಉದ್ಯಮ ಉತ್ಕರ್ಷ ಸಾಧಿಸಿದನೇ ಹೊರತು ಒರಿಜಿನಲ್ ಚೆಡ್ಡಿಗಳಿಗೇನೂ ಲಾಭ ಮಾಡಿಕೊಡಲಿಲ್ಲವೆಂದು ಮೂದಲಿಸುವರೇ ಈಗ ಸ್ಥಳೀಯ ಬಿಜೆಪಿಯಲ್ಲಿ ಹೆಚ್ಚಾಗಿದ್ದಾರೆ. ಮ.ನ.ಪಾಕ್ಕೆ ರಾಜ್ಯ ಸರ್ಕಾರದಿಂದ ಎರಡೆರಡು ಬಾರಿ ಎರಡೆರಡು ಕೋಟಿ ವಿಶೇಷ ಅನುದಾನ ಬಂದಾಗ, ಖಾಸಗಿ ಬಸ್ ರೂಟ್ ಸರ್ಕಾರೀಕರಣ ಮಾಡುವಾಗ, ಕೇರಳಕ್ಕೆ ಕರಾವಳಿಯ ಮರಳು ಸಾಗಿಸುವಾಗ, ಮಂಗಳೂರಿನ ಸುತ್ತ ರಿಂಗ್‌ರೋಡ್ ಮಾಡುವಾಗ ಪಾಲೇಮಾರ್ ಪಾಲುದಾರಿಕೆ ದಂಧೆ ನಡೆಸಿದ್ದಾರೆಂದೇ ಬಿಜೆಪಿ ಬಿಡಾರದಲ್ಲೀಗ ದೊಡ್ಡ ಗುಸು-ಗುಸು ಶುರುವಾಗಿದೆ. ಇದೆಲ್ಲಿಗೆ ಹೋಗಿದೆಯೆಂದರೆ, ಸಿಎಂ ಸದಾನಂದ ಗೌಡರೇ ಈ ನೆಚ್ಚಿನ ಅನುಯಾಯಿಯನ್ನೀಗ ಬೇಕಂತಲೇ ಅವೈಡ್ ಮಾಡತೊಡಗಿದ್ದಾರೆ!!

ಕಳೆದ ವಾರ ಪಾಲೇಮಾರ್‌ನ ಲ್ಯಾಂಡ್ ದುರ್ವ್ಯವಹಾರದ ಕೇಂದ್ರದ ಮೇಲೆಲ್ಲ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ದಾಳಿ ಮಾಡಿದ ನಂತರವಂತೂ ಆತ ಪಾರ್ಟಿಯೊಳಗೆ ಇನ್ನಷ್ಟು ಹೈರಾಣಾಗಿ ಹೋಗಿದ್ದಾನೆ. ಕರಾವಳಿ ಜನರಂತೂ ಇಂಥ ತೆರಿಗೆ ವಂಚಕ, ಬ್ಲೂಫಿಲ್ಮ್ ಪುಂಡ ನಮ್ಮ ಮಂತ್ರಿಯಾಗಿದ್ದನಾ? ಈಗಲೂ ಶಾಸಕನಾ? ಎಂದು ಕಂಡ-ಕಂಡಲ್ಲಿ ಕ್ಯಾಕರಿಸಿ ಉಗಿಯುತ್ತಿದ್ದಾರೆ. ಬಿಜೆಪಿಯ ಅಸಲೀ ದೇಶಭಕ್ತಿ-ಪರಿಶುದ್ಧತೆ-ಪ್ರಾಮಾಣಿಕತೆಯಂತೂ ಇಡೀ ಕರಾವಳಿ ಉದ್ದಗಲಕ್ಕೆ ಪಾಲೇಮಾರ್‌ನ ಸರಣಿ ಹಗರಣದಿಂದ ಅನಾವರಣ ಆಗಿಹೋಗಿದೆ!



ಮಂಗಳೂರಿನ ನವಭಾರತ ಸರ್ಕಲ್‌ನ ಸಿಟಿ ಪಾಯಿಂಟ್ ಕಟ್ಟಡದಲ್ಲಿನ ಪಾಲೇಮಾರನ "ಲ್ಯಾಂಡ್ ಲಿಂಕ್ಸ್" ಕಚೇರಿ, ಕೊಡಿಯಾಲ್ ಗುತ್ತಿನಲ್ಲಿರುವ ಆತನ ಮನೆ ಮೇಲೆ ದಾಳಿ ಮಾಡಿದ ಆದಾಯ ತೆರಿಗೆ ಅಧಿಕಾರಿಗಳು ಮೂರ್‍ನಾಲ್ಕು ತಾಸು ದಾಖಲೆಗಾಗಿ ತಡಕಾಡಿ ಸಿಕ್ಕಷ್ಟು ಹೊತ್ತೊಯ್ದಿದ್ದಾರೆ!







ತೆರಿಗೆ ತಪ್ಪಿಸಿ ಕಳ್ಳ ಸಾಮ್ರಾಜ್ಯ ಕಟ್ಟಿಕೊಂಡಿರುವ ಪಾಲೇಮಾರ್ ಮೇಲೆ ಐಟಿ ದಾಳಿಯಾಗಿರುವುದರಲ್ಲಿ ವಿಶೇಷವೇನಿಲ್ಲ, ಉಪ್ಪು ತಿಂದವನು ನೀರು ಕುಡಿಯಲೇಬೇಕು. ಆದರೆ ದಾಳಿಯ ಹಿಂದಿರುವ ಹಿಕಮತ್ತು ಕುತೂಹಲಕರವಾಗಿದೆ. ಅಧಿಕಾರವಿದ್ದಾಗ ಹಣ ಬಲದಿಂದ ಸುತ್ತ ಕೋಟೆ ಕಟ್ಟಿಕೊಂಡಿದ್ದ ಪಾಲೇಮಾರ್ 'ನೀಲಿ ಚಿತ್ರ' ಹಗರಣದಲ್ಲಿ ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದು ಅಧಿಕಾರ ಕಳೆಕೊಂಡ ಬಳಿಕ ಆತನ ಮೇಲೆ ಬಿಜೆಪಿಗರೇ ಮುಗಿಬೀಳುತ್ತಿರುವುದು ಮೋಜಾಗಿದೆ. ಈ ಐಟಿ ದಾಳಿಗೆ ಬಿಜೆಪಿ-ಆರೆಸ್ಸೆಸ್‌ನ ಮಸಲತ್ತುಗಾರರ ಕಿತಾಪತಿಯೇ ಕಾರಣವೆಂಬುದೀಗ ಇಡೀ ಮಂಗಳೂರು ಮಹಾನಗರದಲ್ಲಿ ಬಹಿರಂಗ ರಹಸ್ಯದಂತೆ ತೇಲಾಡುತ್ತಿದೆ. ಎಲ್ಲಿ ನೋಡಿದರೂ ಬಿಜೆಪಿ-ಚೆಡ್ಡಿ ಚಮತ್ಕಾರಿಗಳೇ ಪಾಲೇಮಾರನನ್ನು ಖೆಡ್ಡಾಕ್ಕೆ ಕೆಡವಿದ್ದಾರೆಂಬ ರೋಚಕ ಚರ್ಚೆ ನಡೆದಿದೆ. ಆರೆಸ್ಸೆಸ್‌ನ ಪ್ರಮುಖ ಪುರೋಹಿತನ ಮನದಿಚ್ಛೆಯಂತೆ ಈ ರೇಡು ನಡೆದಿದೆಯಂತೆ!

ಬಿಜೆಪಿ ಡಾನ್-ದೊರೆಗಳಿಗಂತೂ ಪಾಲೇಮಾರ್ ಸಹವಾಸ ಸಾಕಾಗಿಹೋಗಿದೆ. ಆತ ಚೆಡ್ಡಿಗಳ ಕಸಾಯಿ ಪಾಲಿಗೀಗ ಬರಡು ಹಸು. 'ಹಾಲು' ಕೊಡುವಷ್ಟು ದಿನ ಈ ಶೂದ್ರನನ್ನು ಬಳಸಿಕೊಂಡು ಈಗ ಈತನಿಗೆ ಖಾನೆಗೆ ಸಂಘ ಪರಿವಾರದ ಮುಖಂಡರು ದಾರಿ ತೋರಿಸುತ್ತಿದ್ದಾರೆ. ಸೆಕ್ಸ್ ಗೇಟ್ ಭಾನಗಡಿ ನಂತರ ಪಾಲೇಮಾರ್‌ಗೆ ಕರಾವಳಿ ಬಿಜೆಪಿಯಲ್ಲಿ ನೆಲೆ-ಬೆಲೆಯೇ ಇಲ್ಲದಾಗಿದೆ. ಮೊನ್ನೆ ನಡೆದ ಮಂಗಳೂರು ಮಹಾನಗರ ಪಾಲಿಕೆ ಮೇಯರ್ ಆಯ್ಕೆ ವೇಳೆ ಪಾಲೇಮಾರನ ಕ್ಯಾಂಡಿಡೇಟ್ ಗದ್ದುಗೆ ಏರದಂತೆ ಚೆಡ್ಡಿ ಕೇಡರ್ ಕರಾಮತ್ತು ನಡೆಸಿತ್ತು, ಪಾಲೇಮಾರನ ಹಣಿವ ಗಡಿಬಿಡಿಯಲ್ಲಿ ಬಿಜೆಪಿಗೆ ಬಹುಮತವಿದ್ದರೂ ಮೇಯರ್ ಸ್ಥಾನ ದಕ್ಕದಂತಾಗಿತ್ತು, ಬಿಜೆಪಿಯ ರಿಸರ್ವೇಷನ್ ಗೊಂದಲದಲ್ಲಿ ಮೇಯರ್‌ಗಿರಿ ಕಾಂಗ್ರೆಸ್‌ನ ಗುಲ್ಜಾರ್‌ಬಾನುಗೆ ಬಯಸದೇ ಬಂದ ಭಾಗ್ಯದಂತಾಗಿತ್ತು.

ಮಂಗಳೂರು ಬಿಜೆಪಿಯಲ್ಲಿ ಪಾಲೇಮಾರನ ಹುಟ್ಟಡಗಿಸಲು ದಿನಕ್ಕೊಂದು ಹಿಕಮತ್ತು ನಡೆಯುತ್ತಿದೆಯೇನೋ ಖರೆ. ಆದರೆ ಆತನನ್ನು ಅಷ್ಟು ಸುಲಭವಾಗಿ ಮೂಲೆ ಗುಂಪಾಗಿಸಲು ಸಾಧ್ಯವಿಲ್ಲವೆಂಬ 'ಆತಂಕ'ವೂ ಬಿಜೆಪಿಯ ಜನಿವಾರಿ ಯಜಮಾನರನ್ನು ಕಾಡುತ್ತಿದೆ. ಏಕೆಂದರೆ, ಪಾಲೇಮಾರನ 'ಬಿಜಿನೆಸ್' ಲಿಂಕುಗಳೇ ಹಾಗಿದೆ. ಆತನಿಗೆ ಎಲ್ಲ ಪಕ್ಷದ ಅಧಿಕಾರಸ್ಥರೊಂದಿಗೆ ಒಳ ದೋಸ್ತಿಯಿದೆ; ಕೊಪ್ಪರಿಗೆ ಗಟ್ಟಲೆ ಕಪ್ಪು ಕಾಸಿದೆ; ಸಾಕಿ ಕೊಂಡಿರುವ ಪುಂಡರ ದೊಡ್ಡ ದಂಡು ಬೆನ್ನಿಗಿದೆ. ಹೀಗಾಗಿ ಬಿಜೆಪಿಗರಿಗೆ ಪಾಲೇಮಾರ್ ಈಗ ಮಗ್ಗಲು ಮುಳ್ಳಾಗಿ ಬಿಟ್ಟಿದ್ದಾನೆ. ಸೆಕ್ಸ್ ಗೇಟ್ ಹಗರಣದಲ್ಲಿ ಪಾಲೇಮಾರ್ ಅಪರಾಧಿಯೆಂದು ಸಾಬೀತಾಗುವುದಿಲ್ಲ ಎಂಬುದು ಬಿಜೆಪಿಗರಿಗೆ ಗೊತ್ತು, ಆತ ನಿರಪರಾಧಿಯಾಗಿ ಹೊರಬಂದರೆ ತಮ್ಮ ಆಟ ನಡೆಯದೆಂದು ಭಾವಿಸಿರುವ ಸ್ಥಳೀಯ ಆರೆಸ್ಸೆಸ್-ಬಿಜೆಪಿ-ಕೇಸರಿ ಕೂಟ ಹೊಸ ಷಡ್ಯಂತ್ರ ರೂಪಿಸಿತ್ತು, ಅದೇ ಐಟಿ ರೇಡು.

ಈ ಐಟಿ ರೇಡಿನಲ್ಲಿ ಪಾಲೇಮಾರ್ ಸಿಕ್ಕಿಬಿದ್ದರೆ ಡಿಮಾರಲೈಸ್ ಆಗಿ ಒಂಟಿಯಾಗುತ್ತಾನೆ; ಆಗಾತನ ರಾಜಕೀಯ ಅಮಾನವಾಗುತ್ತದೆಂಬ ಲೆಕ್ಕಾಚಾರ ಚೆಡ್ಡಿ ಚಮತ್ಕಾರಿಗಳದು. ಈ ಐಟಿ ದಾಳಿ ಮುಗಿವ ಹೊತ್ತಿಗೆ ಮತ್ತೊಂದು ಗ್ರಹಚಾರ ಪಾಲೇಮಾರ್‌ಗೆ ಶುರುವಾಗಿದೆ. ಮಂಗಳೂರು ನಗರದ ದೇರೇಬೈಲ್ ಕೊಂಚಾಡಿ ಎಂಬಲ್ಲಿ ಶ್ರೀನಿವಾಸ್ ಸಾಲಿಯಾನ್ ಎಂಬಾತ ಕಷ್ಟಪಟ್ಟು ಕಟ್ಟಿದ್ದ 'ವಿದ್ಯಾ ಎಜುಕೇಷನ್ ಟ್ರಸ್ಟ್' ಎಂಬ ಶಿಕ್ಷಣ ಸಂಸ್ಥೆಯನ್ನು ಪಾಲೇಮಾರ್ ದಾದಾಗಿರಿ- ಮೋಸ-ವಂಚನೆಯಿಂದ ಕಬಳಿಸಿದ್ದ; ಆ ಸಂಸ್ಥೆಯ ಹಣವನ್ನು ಸುಳ್ಳು ದಾಖಲೆ ಸೃಷ್ಟಿಸಿ ಲಪಟಾಯಿಸಿದ್ದ. ತನ್ನ ಅನ್ಯಾಯ ಪ್ರಶ್ನಿಸಿದವರ ಮೇಲೆ ಗೂಂಡಾಗಿರಿ ಪ್ರಯೋಗಿಸಿದ್ದ. ಈ ಪಾಪದ ಫಲ ಈಗ ಪಾಲೇಮಾರ್ ಉಣ್ಣಬೇಕಾಗಿ ಬಂದಿದೆ.

ಶ್ರೀನಿವಾಸ್ ಸಾಲಿಯಾನರನ್ನು ಹೊರಗೆ ಹಾಕಿ ಪಾಲೇಮಾರ್ ವಿದ್ಯಾ ಶಿಕ್ಷಣ ಸಂಸ್ಥೆಯನ್ನು ಕಬ್ಜಾ ಮಾಡಿಕೊಂಡಿದ್ದ, ಸಂಸ್ಥೆಯ ವ್ಯವಸ್ಥಾಪಕ ಟ್ರಸ್ಟಿಯಾಗಿದ್ದ ಸಾಲಿಯಾನ್ ಈಗ ಪಾಲೇಮಾರ್ ಮೇಲೆ ಮಂಗಳೂರು ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡಿದ್ದಾರೆ. ನ್ಯಾಯಾಧೀಶರು ಈ ಖಾಸಗಿ ಫಿರ್ಯಾದಿಯನ್ನು ತನಿಖೆಗಾಗಿ ಮಂಗಳೂರು ದಕ್ಷಿಣ ಠಾಣೆಗೆ ರವಾನಿಸಿದ್ದಾರೆ. ಆದರೆ ಶಾಸಕ ಕಂ ಮಾಜಿ ಮಂತ್ರಿಯಾದ ಪಾಲೇಮಾರ್ ವಿರುದ್ಧ ಎಫ್‌ಐಆರ್ ಹಾಕಲು ಪಾಂಡೇಶ್ವರ ಠಾಣೆಯ ಪೊಲೀಸರು ಮೀನ-ಮೇಷ ಎಣಿಸುತ್ತಿದ್ದಾರೆ. ಬಿಜೆಪಿಯಲ್ಲೇ ಕಾಲೆಳೆವವರ ನಡುವೆ ಸಿಕ್ಕಿಬಿದ್ದು ಒದ್ದಾಡುತ್ತಿರುವ ಪಾಲೇಮಾರ್ ಈ ವಂಚನೆ ಕೇಸಲ್ಲಿ ಅಷ್ಟು ಸುಲಭಕ್ಕೆ ಬಚಾವಾಗುವುದು ಕಷ್ಟ.

ಒಟ್ಟಿನಲ್ಲಿ ನೋಡುನೋಡುತ್ತಿದ್ದಂತೆ ಉಲ್ಕೆಯಂತೆ ಮಂಗಳೂರಲ್ಲಿ ಉರಿದು ಭೀತಿ ಮೂಡಿಸಿದ್ದ ಪಾಲೇಮಾರ್ ಈಗ ಬೂದಿಯಾಗಿ ನೆಲಕ್ಕೂ ಬೀಳುತ್ತಿದ್ದಾನೆ. ಮಾಡಿದ್ದುಣ್ಣೋ ಮಹಾರಾಯ!!



ಜೊತೆಜೊತೆಯಾಗಿ ಭಟ್ಟ, ದೀವಿ ಮತ್ತು ಪಾಲೇಮಾರ್....



ಸಾಹಿತ್ಯ ಪರಿಷತ್ ಚುನಾವಣೆ

ಅಭ್ಯರ್ಥಿ-ಮತದಾರರೆ ಇದೇನಿದು ಜಾತಿ ಕಲಹ, ಗುಂಪುಗಾರಿಕೆ?

ಕನ್ನಡ ಸಾಹಿತ್ಯ ಪರಿಷತ್‌ಗೆ ಚುನಾವಣೆ ನಿಗದಿಯಾಗಿದೆ.

ಕರ್ನಾಟಕದಲ್ಲಿ ಎಲ್ಲವೂ ಹೇಗೆ ಕೆಟ್ಟು ಕೆರ ...ದಿದೆಯೋ ಅವೆಲ್ಲಾ ಅನಿಷ್ಟಗಳೂ ಕನ್ನಡ ಸಾಹಿತ್ಯ ...ಷತ್‌ನ ಚುನಾವಣೆಯಲ್ಲೂ ಈಗ ಪ್ರತಿಫಲಿ...ವೆ.

ಜಾತಿವಾದ, ಪ್ರಾದೇಶಿಕವಾದ, ವ್ಯಕ್ತಿವಾದ, ...ಕಾಸು ವಾದ ಅದಾ-ಇದಾ ಯಾವುದಂತ ...ಳುವುದು? ಸೈದ್ಧಾಂತಿಕವಾದ ಒಂದನ್ನು ಬಿಟ್ಟು ...ದೆಲ್ಲಾ ವಾದಗಳು ಈಗಿನ ಕಸಾಪ ಚುನಾವಣೆ...ಲ್ಲಿ ಕಾಣಿಸಿಕೊಳ್ಳುತ್ತಿವೆ.


ನಮ್ಮಲ್ಲಿ ರಾಜಕೀಯ ಚುನಾವಣೆಗಳು ...ಯುವಾಗ ಜಾತಿಗಾರಿಕೆ, ಗುಂಪು ಕಲಹ, ...ತ್ತು ಕಿತಾಪತಿ ಗಾಳಿ ಸುದ್ದಿಗಳೆಲ್ಲಾ ಪ್ರಮುಖವಾಗಿ ...ಲೆದ್ದು ಬರುತ್ತವೆ. ಅದೇ ರೀತಿ ವಕೀಲರ ...ಘ, ಪತ್ರಕರ್ತರ ಸಂಘಗಳ ಚುನಾವಣೆಗಳು ಈಗ ...ಜು ಗಲೀಜಾಗಿ ಹೋಗಿವೆ. ಈಗಿನ ಕಸಾಪ ...ನಾವಣೆಗಳೂ ನಮ್ಮ ಕಾಲಘಟ್ಟದ ಇದೇ ...ತ್‌ನ ತಾರ್ಕಿಕ ಮುಂದುವರಿಕೆಯಂತೆ ಕಂಡರೆ ...ವರಿಗೆ ತಾನೇ ಅಸಹಜ ಅನ್ನಿಸುತ್ತದೆ ಹೇಳಿ?


ಈಗತಾನೆ ತಮ್ಮ ಅಧ್ಯಕ್ಷಾವಧಿ ಮುಗಿಸಿರುವ ...ಲ್ಲೂರು ಪ್ರಸಾದರ ಕಾರ್ಯವೈಖರಿ ಹೇಗಿತ್ತೆಂದು ...ನ್ನು ವಿಶ್ಲೇಷಿಸಿದರೆ ಕಸಾಪದ ಒಟ್ಟಾರೆ ಚಿತ್ರಣ ...ಗುತ್ತದೆ. ಅವರ ಅವಧಿಯಲ್ಲಿ ಒಟ್ಟು ನಾಲ್ಕು ...ಯಶಸ್ವಿ' ಸಮ್ಮೇಳನಗಳಾದವು. ಇವು ಯಾರೇ ...ನೆ, ನಾಣಿ, ಸೀನೂ ಅಧ್ಯಕ್ಷರಾದರೂ ಯಶಸ್ವಿ...ಗಬಲ್ಲ ಸಾಹಿತ್ಯ ಜಾತ್ರೆಗಳು. ಸರ್ಕಾರದ ದುಡ್ಡು, ...ಳಿತ-ಯಂತ್ರಾಂಗದ ಸಹಭಾಗಿತ್ವ, ಜನಸಾಮಾನ್ಯರಲ್ಲಿ ...ತತವಾಗಿ ಬಂದಿರುವ ನಾಡು-ನುಡಿಯ ಬಗೆಗಿನ ...ಮಾನ ಇಂತಹ ಸಮ್ಮೇಳನಗಳನ್ನು ಆರಾಮಾಗಿ ...ಶಸ್ವಿಗೊಳಿಸಬಲ್ಲವು. ಆದರೆ ನಾವು ಕೇಳಬೇಕಾದದ್ದು ...ಪದ ಚಟುವಟಿಕೆಗಳು ಕೇವಲ ಇಷ್ಟಕ್ಕೇ ಸೀಮಿತವಾಗಿ...ಬೇಕೆ ಎಂಬ ಪ್ರಶ್ನೆಯನ್ನು.


ಕಸಾಪಗಿರಲಿ ಅಥವಾ ಮತ್ತಿನ್ಯಾವ ಸಂಸ್ಥೆಗಾಗಲಿ ...ಗಳಿರದ, ಒಂದು vision ಇರದ ನಾಯಕರು ...ಮು ಕುಳಿತರೆ ಕೇವಲ ಕಾಲಹರಣವಾಗುತ್ತದೆಯೇ ... ರಚನಾತ್ಮಕ ಕೆಲಸಗಳಾಗುವುದಿಲ್ಲ.

ಈ ನಲ್ಲೂರು ಪ್ರಸಾದ್ ನಾಲ್ಕು ವರ್ಷದಲ್ಲಿ ಏನು ...ಡಿದರೆಂದು ನೋಡಿದರೆ ನಿರಾಶೆಯಾಗುತ್ತದೆ. ಕಸಾಪ ... ಹಿಂದೆ ಪ್ರಕಟಿಸಿದ್ದ ಕನ್ನಡ ನಿಘಂಟನ್ನು ಅವರ ...ಧಿಯಲ್ಲಿ ಪುನರ್ ಮುದ್ರಿಸಲಾಯಿತಾದರೂ ಹಳೆಯ ...ಷಗಳನ್ನು ಸರಿಪಡಿಸಿ, ಪರಿಷ್ಕರಿಸಿ ಮುದ್ರಿಸಲಿಲ್ಲ. ... ಅಲ್ಲಿ ಭಾಷ ತಜ್ಞರಾದ ಜಿ.ವೆಂಕಟಸುಬ್ಬಯ್ಯ ...ವರಾಧ್ಯ, ಕೃಷ್ಣರಂತಹ ವಿದ್ವಾಂಸರಿದ್ದಾಗಲೂ ಅವರ ...ವು ಕೇಳಿ ಪರಿಷ್ಕರಿಸುವ ಸಾಧ್ಯತೆಯನ್ನು ನಲ್ಲೂರು ...ಲೋಚಿಸಲಿಲ್ಲ, ಸರ್ಕಾರದಿಂದ ಹಣ ತರಿಸಿ ತಾಲ್ಲೂಕು ಮಟ್ಟದ ಸಮ್ಮೇಳನಗಳಿಗೆ ನೆರವಾಗಿದ್ದೊಂದೇ ಅವರ ಸಾಧನೆ ಎನಿಸಿಕೊಂಡಿದೆ.

ಕಸಾಪದ ಹುಟ್ಟು, ಬೆಳವಣಿಗೆಯಲ್ಲೇ ಸರ್ಕಾರಿ ಕೃಪೆ ಹಾಗೂ ಹಂಗಿನ ಇತಿಹಾಸವಿದೆ.







ಕಸಾಪ ಅಸ್ತಿತ್ವಕ್ಕೆ ಬಂದಾಗ ಬೆಂಗಳೂರಿನ ಚಾಮರಾಜಪೇಟೆಯ ನಾನಾರಾಯರೆಂಬುವವರ ಮನೆಯ ಒಂದು ಕೊಠಡಿಯೇ ಅದರ ಕಚೇರಿಯಾಗಿತ್ತು. ನಂತರ ಶಂಕರಪುರಂನಲ್ಲಿ ಒಂದು ಮನೆಯನ್ನು ಬಾಡಿಗೆಗೆ ಪಡೆಯಲಾಯಿತು. ಕೊನೆಗೆ ಈಗಿರುವ ಸ್ಥಳ ಕಸಾಪಗೆ ಸಿಕ್ಕಿತು.

ಈ ಜಾಗ ಕಸಾಪಗೆ ದಕ್ಕಿದ್ದು ಆಗಿನ ಒಡೆಯರ್ ಸರ್ಕಾರದ ಕೇವಲ 'ಕನ್ನಡ ಭಾಷಾಭಿಮಾನ'ದ ಕಾರಣಕ್ಕಲ್ಲ. ಈಗ ಪಂಪ ಮಹಾಕವಿ ರಸ್ತೆ ಎನಿಸಿಕೊಂಡಿರುವ ರಸ್ತೆಗೆ ಆಗ ಹಾರ್ಡಿಂಜ್ ರೋಡ್ ಎಂಬ ಹೆಸರಿತ್ತು. ಸ್ವಾತಂತ್ರ್ಯ ಹೋರಾಟ ನಡೆಯುತ್ತಿದ್ದ ಆ ಕಾಲದಲ್ಲಿ ಬ್ರಿಟಿಷ್ ವಿರೋಧಿ ದೇಶಭಕ್ತರೆಲ್ಲರೂ ಆಗ ಖಾಲಿ ಮೈದಾನವಾಗಿದ್ದ ಈಗಿನ ಕಸಾಪ ಕಟ್ಟಡವಿರುವ ಸ್ಥಳದಲ್ಲೇ ಸಭೆ, ಪ್ರತಿಭಟನೆಗಳನ್ನು ನಡೆಸುತ್ತಿದ್ದರು. ಮೈಸೂರಿನಲ್ಲಿದ್ದ ಬ್ರಿಟಿಷ್ ರೆಸಿಡೆಂಟನಿಗೆ ಇದು ಸಿಟ್ಟು ತರಿಸಿತ್ತು. ಆಗ ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್ ಬ್ರಿಟಿಷ್ ವಿರೋಧಿಗಳಿಗೆ ಪ್ರತಿಭಟನೆಯ ಸ್ಥಳ ತಪ್ಪಿಸಿದಂತೆಯೂ ಆಯಿತು, ಸಾಹಿತ್ಯ ಪರಿಷತ್ತಿಗೆ ಸೈಟು ನೀಡಿ 'ಕನ್ನಡಾಭಿಮಾನಿ ಸರ್ಕಾರ' ಎಂಬ ಕೀರ್ತಿ ಪಡೆದಂತೆಯೂ ಆಯಿತೆಂದು 'ಚಾಣಾಕ್ಷತೆ' ಮೆರೆದು ಆ ಜಾಗವನ್ನು ಕಸಾಪಗೆ ನೀಡಿಬಿಟ್ಟರು.

ನಮ್ಮ ಸಾಹಿತ್ಯಾಭಿಮಾನಿಗಳು, ಕನ್ನಡ ಭಾಷಾ ಪ್ರೇಮಿಗಳು ಮರುಮಾತಾಡದೆ ಅದನ್ನೊಪ್ಪಿಕೊಂಡು ಸ್ವೀಕರಿಸಿಯೂ ಬಿಟ್ಟರು. ಇದೆಲ್ಲಾ ಈಗ ಮುಗಿದ ಕತೆ. ಆದರೂ ಕಸಾಪದ ಹುಟ್ಟಿನಲ್ಲೇ ಅದಕ್ಕೊಂದು ರಾಜಿಯ ಮನೋಭಾವ ಹಾಗೂ ಹಂಗಿನ ವ್ಯಕ್ತಿತ್ವವಿರುವುದಂತೂ ಕಾಣುತ್ತದೆ. ಕಸಾಪದ ಹಳೆಯ ಕಟ್ಟಡ ನಿರ್ಮಾಣಕ್ಕೆ ನೆರವಾದವರ ಹೆಸರುಗಳ ಪಟ್ಟಿ ಓದಿ ನೋಡಿದರೆ, ರಾಜಸೇವಾಸಕ್ತರ, ಬ್ರಿಟಿಷ್ ಸರ್ಕಾರದ ಸೇವಕರ, ಸಾರಾಯಿ ವ್ಯಾಪಾರಿಗಳ, ಬಡ್ಡಿ ವಸೂಲಿ ವೀರರ ಹೆಸರುಗಳೆಲ್ಲಾ ಎದ್ದು ಕಾಣುವಂತಿದೆ.

ಇದಕ್ಕೆ ಹೊಸದಾಗಿ ಸೇರ್ಪಡೆಯಾಗಿದ್ದು ಮಠಾಧೀಶರುಗಳು

ಬಹುಶಃ ಇದು ಶುರುವಾಗಿದ್ದು ಹಂ.ಪ.ನಾಗರಾಜಯ್ಯನವರ ಅಧ್ಯಕ್ಷಗಿರಿಯ ಕಾಲದಲ್ಲಿ, ಈಗಂತೂ ಕಸಾಪ ಸಮ್ಮೇಳನಗಳು, ಅದು ಅಖಿಲ ಭಾರತ ಮಟ್ಟದ್ದಾಗಲಿ, ಜಿಲ್ಲಾ ತಾಲ್ಲೂಕು ಸಮ್ಮೇಳನಗಳೇ ಆಗಲಿ ಯಾರಾದರೂ ಒಬ್ಬ ಮಠಾಧೀಶರನ್ನು ಹಿಡಿದು ತಂದು ವೇದಿಕೆಯ ಮೇಲೆ ಕೂರಿಸುವ ಚಟ ವ್ಯಾಪಕವಾಗಿ ಬೇರು ಬಿಟ್ಟಿದೆ. ಭಾಷೆಯೊಂದು ಧರ್ಮಗುರುಗಳ, ಧರ್ಮದ ಜಾತಿಯ ಹಂಗಿನಲ್ಲಿ ಬೆಳೆದು ಉದ್ಧಾರವಾದ ಉದಾಹರಣೆಗಳು ಇವೆಯಾ?


ಅದೇರೀತಿ ರಾಜಕೀಯ ಪುಢಾರಿಗಳಿಗೂ ಕಸಾಪ ಸಮ್ಮೇಳನಗಳಲ್ಲಿ ವೇದಿಕೆ ಹತ್ತುವ ಚಾಳಿ ಇದೆ.

ಕಸಾಪದ ಅಂತರ್ಯದಲ್ಲೇ ಇವೆಲ್ಲಕ್ಕೂ ಅವಕಾಶ ನೀಡುವಂತಹ ಒಂದು ಕೆಟ್ಟ ಅಭ್ಯಾಸ ಬೆಳೆದುಬಂದಿದೆ. ಹಾಗಾಗಿಯೇ ನಲ್ಲೂರು ಪ್ರಸಾದ್‌ರಿಗೆ ಮಾತೃ ಭಾಷಾ ಶಿಕ್ಷಣದ ವಿಚಾರ ರಾಜ್ಯಾದ್ಯಂತ ಚರ್ಚೆಯಾಗುತ್ತಿರುವಾಗ ಅದಕ್ಕೆ ಕಸಾಪ ಸಹ ದನಿಗೂಡಿಸಬೇಕೆಂದು ಅನ್ನಿಸಲಿಲ್ಲ, ಪಠ್ಯಪುಸ್ತಕಗಳ ಕೇಸರೀಕರಣವಾಗುತ್ತಿದ್ದರೂ ಅದು ತಪ್ಪು ಎನ್ನುವ ವಿವೇಕವೂ ಬರಲಿಲ್ಲ.

ಏಪ್ರಿಲ್ ಕೊನೆಯ ವಾರ ನಡೆಯಲಿರುವ ಚುನಾವಣೆಯಲ್ಲಿ ಏಳುಮಂದಿ ಸ್ಪರ್ಧಿಸುವುದು ಈಗಾಗಲೇ ಖಾತರಿಯಾಗಿದೆ. ಚಂಪಾ, ನಟ ಅಶೋಕ್, ಚಂದ್ರಣ್ಣಗೌಡ, ಪುಂಡಲೀಕ ಹಾಲಂಬಿ, ಜರಗನಹಳ್ಳಿ ಶಿವಶಂಕರ, ಶೇಖರ ಗೌಡ, ಮಾಲಿ ಪಾಟೀಲ್, ಜಯಪ್ರಕಾಶ್ ಗೌಡ ಈಗ ಕಣದಲ್ಲಿದ್ದಾರೆ.

ಒಂದು ಲಕ್ಷ ಚಿಲ್ಲರೆ ಮತದಾರರಿರುವ ಕಸಾಪ ಎಲೆಕ್ಷನ್ ಯಾವುದೇ ರಾಜಕೀಯ ಚುನಾವಣೆಗಿಂತ ಕಮ್ಮಿಯಾಗೇನು ನಡೆಯುತ್ತಿಲ್ಲ.

'ನಾನೊಬ್ಬ ಅಭ್ಯರ್ಥಿ ಸ್ಪರ್ಧಿಸಿದ್ದೇನೆ' ಎಂದು ಮತದಾರರಿಗೆಲ್ಲರಿಗೂ ಕನಿಷ್ಠ ಒಂದೊಂದು ಕರಪತ್ರವನ್ನು ಪೋಸ್ಟ್ ಮಾಡಬೇಕೆಂದರೂ ಐದು ಲಕ್ಷ ರೂಪಾಯಿ ಖರ್ಚಾಗುತ್ತದೆ. ಇನ್ನು ಅಭ್ಯರ್ಥಿಗಳ ರಾಜ್ಯಾದ್ಯಂತ ಓಡಾಟ, ಕಾರು, ಹೋಟೆಲ್ ರೂಂ ಬಾಡಿಗೆ, ಊಟ, ಪ್ರಚಾರ, ಸ್ಥಳೀಯ ಬೆಂಬಲಿಗರ ಮೈಂಟೆನೆನ್ಸ್ ಖರ್ಚುಗಳನ್ನೆಲ್ಲಾ ಲೆಕ್ಕಾ ಹಾಕಿದರೆ ಖರ್ಚು ಹತ್ತು ಲಕ್ಷ ಮೀರಿದರೂ ಆಶ್ಚರ್ಯವಿಲ್ಲ.



ಸಂಪಾದಕೀಯ

ಬಹುಶಃ ಈ ಕಾರಣಗಳಿಗೋ ಏನೋ ಅಭ್ಯರ್ಥಿಗಳು ಜಾತಿಗುಂಪು, ಮಠಾಧೀಶರ ಸಹಕಾರ, ಪುಢಾರಿಗಳ ಬೆಂಬಲಕ್ಕಾಗಿ ಯಾಚಿಸುವುದು?

ಅಭ್ಯರ್ಥಿಗಳು ಇಂತಹ ಕೃಪೆ, ಹಂಗುಗಳಿಂದ ಗೆದ್ದು ಬಂದಲ್ಲಿ ಕಸಾಪ ಬದಲಾಗುವುದು ಹೇಗೆ ತಾನೇ ಸಾಧ್ಯ?

ಅಮೃತರಾಜ್ ಎಂಬ ವ್ಯಕ್ತಿ ತಾನು ಮುಂದೆ ಬೆಂಗಳೂರು ನಗರ ಜಿಲ್ಲಾ ಕಸಾಪಗೆ ಅಧ್ಯಕ್ಷನಾಗಬೇಕೆಂದು ಅನಾಮಧೇಯ ಮತ್ತು ಸಾಹಿತ್ಯದ ಗರೂ ಗಾಳಿಯಿಲ್ಲದ ಒಂದು ಸಾವಿರ ಜನರನ್ನು ಇತ್ತೀಚೆಗೆ ಕಸಾಪ ಮೆಂಬರ್ ಮಾಡಿಸಿ ರುವ ಸುದ್ದಿ ಕೇಳಿ ಬಂದಿದೆ. ಇದೇ ತರ ಜಾತಿ ಆಧಾರದಲ್ಲಿ ಸದಸ್ಯತ್ವ ಮಾಡಿಸುವ ರಹಸ್ಯ ಆಂದೋಲನವೊಂದು ಕಳೆದ ಅನೇಕ ವರ್ಷಗಳಿಂದಲೂ ನಡೆದಿದೆ.

ಕಸಾಪದ ಜಾತಿಯಾಧಾರಿತ ಪ್ರವೃತ್ತಿಯನ್ನು ಕಂಡಿರುವವರು ಈ ಸಾರಿ 'ಲಿಂಗಾಯತರು-ಒಕ್ಕಲಿಗರ ಹೋರಾಟ' ಅನ್ನುತ್ತಿದ್ದಾರೆ. ಕಸಾಪ ಈ ಜಾತಿಗಾರಿಕೆ, ಹಣದ ಚೆಲ್ಲಾಟ ಇತ್ಯಾದಿ ಸಂಕುಚಿತತೆ ಬಿಟ್ಟು ಮೈದುಂಬಿ ಬೆಳೆದು ಇನ್ನಷ್ಟು ಕನ್ನಡದ ಕೆಲಸ ಮಾಡಬೇಕಿದೆ. ಅಭ್ಯರ್ಥಿಗಳು ಹಾಗೂ ಮತದಾರರು ಇದನ್ನು ಅರ್ಥಮಾಡಿಕೊಳ್ಳಲಿ.

• ಪಾರ್ವತೀಶ

'ಲಂಕೇಶ್' ಮನವಿ

ಮುಂದಿನ ಸಂಚಿಕೆಯಿಂದ 'ನನ್ನ ಕನಸಿನ ಕಸಾಪ' ಎಂಬ ಶೀರ್ಷಿಕೆಯಡಿ ಈಗ ಸ್ಪರ್ಧಿಸಿರುವ ಅಭ್ಯರ್ಥಿಗಳು ತಮ್ಮ ಕಾರ್ಯ ಯೋಜನೆಗಳ ಬಗ್ಗೆ ಜನತೆಗೆ ತಿಳಿಸಲು 'ಲಂಕೇಶ್' ಅನುವು ಮಾಡಿಕೊಡುತ್ತಿದೆ. ನಾವಿಲ್ಲಿ ಪ್ರಶ್ನೆಗಳನ್ನು ನೀಡಿದ್ದೇವೆ. ಅಭ್ಯರ್ಥಿಗಳು ನೀಡಲಿರುವ ಉತ್ತರಗಳನ್ನು ನಾವಿಲ್ಲಿ ಯಥಾವತ್ತಾಗಿ ಪ್ರಕಟಿಸಲಿದ್ದೇವೆ.

ಅಭ್ಯರ್ಥಿಗಳಿಗೆ ಚುನಾವಣಾ ಖರ್ಚು ಕಡಿಮೆಯಾಗಲಿ ಹಾಗೂ ಜನರಿಗೂ ಅವರ ಯೋಜನೆಗಳ ಬಗ್ಗೆ ಮಾಹಿತಿ ಸಿಗಲೆಂಬುದು ನಮ್ಮ ಈ ಪ್ರಯತ್ನದ ಹಿಂದಿರುವ ಆಶಯ.

ನನ್ನ ಕನಸಿನ ಕಸಾಪ ಪ್ರಶ್ನೆಗಳು

1. ಕಸಾಪ ಬದಲಾಗಬೇಕು ಅನಿಸುತ್ತಿದೆಯೇ? ಯಾವ ರೀತಿ?
2. ಕನ್ನಡ ಎದುರಿಸುತ್ತಿರುವ ಮತ್ತು ಕನ್ನಡ ಸಾಹಿತ್ಯ ಎದುರಿಸುತ್ತಿರುವ ಸಮಸ್ಯೆಗಳೇನು? ನಿಮ್ಮ ಪ್ರಕಾರ?
3. ಕಸಾಪದೊಳಗೆ ಜಾತಿವಾದ ಬೆಳೆಯುತ್ತಿರುವುದು ಕೆಟ್ಟ ಪ್ರವೃತ್ತಿ ಅಲ್ಲವೇ? ಅದನ್ನು ಹೇಗೆ ನಿವಾರಿಸುತ್ತೀರಿ?
4. ಮಠಾಧೀಶರು, ರಾಜಕಾರಣಿಗಳನ್ನು ಅನಗತ್ಯವಾಗಿ ಸಮ್ಮೇಳನಗಳಲ್ಲಿ ಮೆರೆಸುವ ಪ್ರವೃತ್ತಿಯನ್ನು ನೀವು ನಿಲ್ಲಿಸುತ್ತೀರಾ?
5. ಕನ್ನಡದ ಓದು ಪ್ರಸ್ತುತವಾಗಲೂ ವಿಸ್ತಾರಗೊಳ್ಳಲು, ಉಳಿರುಕೊಳ್ಳಲು ನಿಮ್ಮ ಕಾರ್ಯಕ್ರಮವೇನು?
6. ಕೋಮುವಾದ, ಜಾತಿವಾದ, ಶಿಕ್ಷಣದ ಕೇಸರೀಕರಣವನ್ನು ನೀವು ವಿರೋಧಿಸುತ್ತೀರಾ?

ಲೀಲಾವತಿ ಮತ್ತು ವಿನೋದ್ ರಾಜ್ ಜೀವನ ಪ್ರೀತಿ


ಬಿಡಿ ಚಿತ್ರಗಳು

ಅದೊಂದು ಆಕಸ್ಮಿಕ ಭೇಟಿ.

ಕಳೆದ ವಾರ ನಟ ವಿನೋದ್ ರಾಜ್ ಹಾಗೂ ಹಿರಿಯ ನಟಿ ಲೀಲಾವತಿಯವರ ತೋಟದಲ್ಲಿ ನಾವು ಕೆಲ ಗಂಟೆಗಳ ಕಾಲ ಸುತ್ತಾಡಿ ಬಂದೆವು.

ನೆಲಮಂಗಲದ ಹತ್ತಿರ ಇರುವ ನಮ್ಮ ಕ್ಯಾಪ್ಟನ್ ಗೌರಿಯವರ ತೋಟದಲ್ಲಿ ಈಗ ನಾಟಿ ಕೋಳಿಗಳ ಸಾಕಣಿಕೆ ನಡೆದಿದೆ. ಕೊಂಚ ಬಿಡುವಿದ್ದದ್ದರಿಂದ ನಾವು ಕೆಲವರು ಆ ಕೋಳಿ ಕೃಷಿಯನ್ನು ನೋಡುವ ಹಾಗೂ ಸಾಧ್ಯವಾದರೆ ಒಂದು ಕೋಳಿಯನ್ನು ಸ್ವಾಹ ಮಾಡುವ ಗಹನವಾದ ಉದ್ದೇಶದೊಂದಿಗೆ ಅಲ್ಲಿಗೆ ಹೋಗಿದ್ದೆವು. ಅದೆಲ್ಲಾ ಆದ ಮೇಲೆ ಇನ್ನೂ ಕೊಂಚ ಸಮಯ ಸಿಕ್ಕಿದ್ದರಿಂದ ಲೀಲಾವತಿಯವರ ತೋಟ ನೋಡಿಬರೋಣ ಅನಿಸಿತು. ಅವರ ತೋಟವೂ ನೆಲಮಂಗಲ, ಕುಣಿಗಲ್ ರೋಡಿನ ಬಳಿ ಸೋಲದೇವನಹಳ್ಳಿಯಲ್ಲಿದೆ. ಫೋನ್ ಮಾಡಿ ಕೇಳಿದಾಗ ವಿನೋದ್ ರಾಜ್ ಖುಷಿಯಿಂದಲೇ 'ಓಹೋ ಬನ್ನಿ' ಅಂದರು...


ನಾವು ಹೋದೆವು.



ನಾವಲ್ಲಿ ಕಳೆದ ಎರಡು ಗಂಟೆಗಳು ಅವಿಸ್ಮರಣೀಯ. ಸಿನಿಮಾ ಜಗತ್ತಿನ ಸಂಭ್ರಮ -ವಿಷಾದಗಳು, ಕೃಷಿಯ ಖುಷಿ ಹಾಗೂ ಕಷ್ಟಗಳು, ನಿಸರ್ಗ ಪ್ರೀತಿ, ಮಣ್ಣಿನ ಮೋಹ ಒಟ್ಟಿನಲ್ಲಿ ಏನುಂಟು ಏನಿಲ್ಲ ಎಂಬಂತಿತ್ತದು.

ಈ ವಿನೋದ್ ರಾಜ್ ಬಗ್ಗೆ ನಂತರ ಹೇಳುತ್ತೇನೆ. ಅದಕ್ಕೂ ಮುನ್ನ ಕಲಾವಿದೆ ಲೀಲಾವತಿಯವರ ಕುರಿತು ಹೇಳಬೇಕು. ಅವರಿಗೆ ಈಗ ಎಪ್ಪತ್ತಾರು ವರ್ಷ ವಯಸ್ಸಾಗಿದೆ. ಮುಖದಲ್ಲಿ ಅದೇ ಸೌಮ್ಯ ಭಾವ; ಗಟ್ಟಿಮುಟ್ಟಾಗಿ ಕಾಣುತ್ತಾರೆ. ಅಚ್ಚುಕಟ್ಟಾದ ಶಿಸ್ತಿನ ಜೀವನ ರೂಢಿಸಿಕೊಂಡಿದ್ದಾರೆ. ಮನಸ್ಸಿನಲ್ಲಿ ಅನೇಕ ಆತಂಕ, ಬೇಗುದಿ ತುಂಬಿಕೊಂಡಿದೆಯೆಂಬುದು ನಮಗರ್ಥವಾಗಲು ಹೆಚ್ಚು ಸಮಯ ಬೇಕಾಗುವುದಿಲ್ಲ. ಅದಕ್ಕೆ ಕಾರಣವೂ ಇಲ್ಲದಿಲ್ಲ.

ಮಂಗಳೂರಿನ ಬೆಳ್ತಂಗಡಿಯವರಾದ ಲೀಲಾವತಿ ಚಿತ್ರರಂಗ ಸೇರುವ ಮುನ್ನ ಲೀಲಾಕಿರಣ ಎಂದಾಗಿದ್ದರು. ಇಪ್ಪತ್ತನೇ ವಯಸ್ಸು ತಲುಪುವ ಮುನ್ನವೇ ಸಿನಿಮಾ ಜಗತ್ತಿನಲ್ಲಿ ಬದುಕು ಕಂಡುಕೊಳ್ಳಲು ಮೈಸೂರಿಗೆ ಬಂದ ಲೀಲಾವತಿಯವರಿಗೆ ಅನೇಕ ಕಷ್ಟಗಳು ಕಾದಿದ್ದವು. ಒಮ್ಮೆ ಅತ್ಯಂತ ದಯನೀಯ



ಪರಿಸ್ಥಿತಿಯಲ್ಲಿ ತಿಂಗಳಿಗೆ ಐದು ರೂಪಾಯಿ ಸಂಬಳಕ್ಕೆ ಕಂಡವರ ಮನೆಯ ಪಾತ್ರೆ ತಿಕ್ಕಿ ಅನ್ನ ದುಡಿದುಕೊಂಡದ್ದೂ ಉಂಟು. ಶಂಕರ್ ಸಿಂಗ್‌ರ 'ನಾಗಕನ್ನಿಕಾ' ಸಿನಿಮಾದಲ್ಲಿ ಮೊದಲ ಅವಕಾಶ ಪಡೆದರಾದರೂ 1959ರ 'ಭಕ್ತ ಪ್ರಹ್ಲಾದ' ಅವರಿಗೆ ಹೆಸರು ನೀಡಿತು. ನಟ ಲೋಕೇಶರ ತಂದೆ ಸುಬ್ಬಯ್ಯ ನಾಯ್ಡುರವರ ಪ್ರೋತ್ಸಾಹ, ಕಾಳಜಿಗಳೂ ಆಗ ಲೀಲಾವತಿಯವರನ್ನು ಕಾಪಾಡಿದವು. ನಂತರ 1959-60 ರಲ್ಲಿ ಬಂದದ್ದೇ 'ರಣಧೀರ ಕಂಠೀರವ'! ಡಾ. ರಾಜ್‌ರೊಂದಿಗಿನ ಪ್ರಥಮ ಭೇಟಿ, ಜೋಡಿಯಾಗಿ ನಟಿಸಿದ ಮೊದಲ ಸಿನಿಮಾ ಇತ್ಯಾದಿ ಅನೇಕ ಐತಿಹಾಸಿಕ ಘಟನೆಗಳು ಆ ಸಿನಿಮಾದೊಂದಿಗೆ

▶8

▶7

ಲೀಲಾವತಿ ಮತ್ತು ವಿನೋದ್ ರಾಜ್

ಥಳಕು ಹಾಕಿಕೊಂಡಿವೆ. ರಣಧೀರನ ನಂತರ ಲೀಲಾವತಿಯವರ ವೃತ್ತಿ ಜೀವನ ಅದ್ಭುತ ವೇಗ ಪಡೆಯಿತು. ಈ ನಲವತ್ತು ವರ್ಷಗಳಲ್ಲಿ ಹೆಚ್ಚು ಕಡಿಮೆ ಅವರು ಆರುನೂರು ಸಿನಿಮಾಗಳಲ್ಲಿ ನಟಿಸಿದ್ದಾರೆ. ಈ ಅವಧಿಯಲ್ಲಿ ಲೀಲಾವತಿ ನಮ್ಮಂತ ಲಕ್ಷಾಂತರ ಜನರನ್ನು ಭಾವಪರವಶರನ್ನಾಗಿಸಿ ಅಳಿಸಿ, ನಗಿಸಿ ಒರ್ವ ಕಲಾವಿದೆಯಾಗಿ **fullfillment** ಪಡೆದಿರಲಿಕ್ಕೂ ಸಾಕು.

ಅವರು ನಿಜಕ್ಕೂ ಅದ್ಭುತ ಕಲಾವಿದೆ.


ಇದನ್ನೆಲ್ಲಾ ಮೊನ್ನೆ ಮಾತನಾಡುತ್ತಾ ಇದ್ದಾಗ ಹಣಕಾಸಿನ ವಿಚಾರದಲ್ಲಿ ಲೀಲಾವತಿಯವರು ಬಹಳ ಹಿಂದೆಯೇ ತೆಗೆದುಕೊಂಡ ಮುನ್ನೆಚ್ಚರಿಕೆ ಈಗ ತಾಯಿ-ಮಗ ಇಬ್ಬರನ್ನು ಹೇಗೆ ಕಾಪಾಡುತ್ತಿದೆ ಎಂಬುದೂ ಬಂತು. ಈಗ್ಗೆ ನಲವತ್ತು ವರ್ಷಗಳ ಹಿಂದೆಯೇ ಮದ್ರಾಸ್ ನಗರದ ಹತ್ತಿರ ಒಂದೂವರೆ ಲಕ್ಷ ರೂ. ನೀಡಿ ಹದಿನೇಳೂವರೆ ಎಕರೆ ಜಮೀನು ಕೊಂಡಿದ್ದರಂತೆ ಲೀಲಾವತಿ.

"ಅಮ್ಮ, ನಟಿಯಾಗಿದ್ದ ನಿಮಗೆ ವ್ಯವಸಾಯದಲ್ಲಿ ಇಂಟರೆಸ್ಟ್ ಇತ್ತಾ?" ಅಂತ ಕೇಳಿದೆ ನಾನು.

"ಅದು ಹಾಗಲ್ಲ..." ಎನ್ನುತ್ತಾ ಪಕ್ಕದಲ್ಲೇ ಕುಳಿತಿದ್ದ ವಿನೋದ್‌ರಾಜ್‌ರತ್ತ ಕೈ ತೋರಿಸಿ "ಈ ವಿನೂ ಹುಟ್ಟಿದನಲ್ಲ ಅವನ ಜೀವನದ ಭದ್ರತೆಗಾಗಿ ಆಸ್ತಿ ಮಾಡಿದ್ದು" ಅಂತ ನಕ್ಕರು ಆ ತಾಯಿ.

ಆದರೆ ಭೂಮಿ ಖರೀದಿಸಲು ಲೀಲಾವತಿಯವರಿಗೆ ಅದೊಂದೇ ಕಾರಣವಾಗಿರಲಿಕ್ಕಿಲ್ಲ ಅಂತ ನಮಗನ್ನಿಸಿದ್ದು ಸೋಲದೇವನಹಳ್ಳಿಯ ಅವರ ತೋಟ ನೋಡಿದಾಗ. ಏಳೂವರೆಕರೆಯ ಆ ತೋಟದ ಪ್ರತಿ ಇಂಚಿನ ವಿವರವೂ

ಲೀಲಾವತಿಯವರು ಕಟ್ಟಿಸಿದ ಆಸ್ಪತ್ರೆ



ಈ ತಾಯಿ-ಮಗನಿಗೆ ಗೊತ್ತಿದೆ. "ನೀವೇನು ಬೆಳೆಯುತ್ತೀರಿ"? ಅಂತ ನಾನು ಕೇಳಿದಾಗ "ನಾವೇನು ಬೆಳೆದಿಲ್ಲ ನೋಡಿ ಹೇಳಿ"? ಅಂದರವರು.

ಅವರ ಮಾತು ನಿಜವಾಗಿತ್ತು, ಅವರ ಮಾತಿನಲ್ಲಿ ಹೆಮ್ಮೆ-ತೃಪ್ತಿಯ ಭಾವವೂ ಇತ್ತು, ತೆಂಗು, ಅಡಿಕೆ, ಮಾವು, ಸಪೋಟ, ಪಪ್ಪಾಯ, ದಾಳಿಂಬೆ, ಸೀಬೆ, ಚೆರ್ರಿ ನೂರಾರು ವಿಧದ ಹೂವಿನ ಗಿಡಗಳು,

ಅಷ್ಟೇ ಯಾಕೆ ಆಪಲ್ ...!

ಹೌದು, ಆರೇ ಬರಪೀಡಿತ ನೆಲಮಂಗಲದ ಮಣ್ಣಿನಲ್ಲಿ ಅವರು ಸೇಬನ್ನು ಬೆಳೆಯಲು ಪ್ರಯತ್ನಿಸಿದ್ದಾರೆ. ಕೆಲತಿಂಗಳ ಹಿಂದೆ ಆಂಜಿಯೋ ಪ್ಲಾಸ್ಟಿ ಸರ್ಜರಿ ಮಾಡಿಸಿಕೊಂಡು ಕೊಂಚ ಬಳಲಿದಂತೆ ಕಂಡರೂ ಸಹ ವಿನೋದ್ ಜೊತೆ ಸ್ಕಾರ್ಪಿಯೋ ಗಾಡಿ ಹತ್ತಿ ನಮ್ಮನ್ನು ತೋಟ ತೋರಿಸಲು ಕರೆದೊಯ್ದರು. ಅಪರೂಪದ ಹಣ್ಣು, ಹೂವಿನ ಗಿಡಗಳನ್ನು ತೋರಿಸಿ ಕೆಲವನ್ನು ಕೆಲಸದವರಿಗೆ ಹೇಳಿ ತರಿಸಿ ನಮ್ಮ ಕೈಗಿಟ್ಟು ಮಗುವಿನಂತೆ ಸಂಭ್ರಮಿಸಿದರು ಲೀಲಾವತಿ.

ಮಹಾನ್ ಕಲಾವಿದೆಯೆಂಬ ಕೀರ್ತಿ, ಗೌರವ ಪಡೆದು




ವಿನೋದವೋ, ವಿಷಾದವೋ? ಮೂರು ದಶಕಗಳ ಹಿಂದಿನ ಸಮಯದ ಗೊಂಬೆ ಲೀಲಾವತಿ

ಈಗಲೂ ಸಿನಿಮಾ ಜಗತ್ತಿನೊಂದಿಗೆ ಒಡನಾಟ ಹೊಂದಿರುವ ಲೀಲಾವತಿಯವರಿಗೆ ಮಗ ನಟ ವಿನೋದ್ ರಾಜ್‌ಗೆ ಸಾಕಷ್ಟು ಅವಕಾಶ ಸಿಗದಿರುವ ಬಗ್ಗೆ ಕೊಂಚ ನೋವು ಇರುವಂತೆ ಕಂಡು ಬಂತು. ಅದು ಸಹಜ ಕೂಡ. ಒಳ್ಳೆಯ ಮೈಕಟ್ಟು, ನೃತ್ಯ ಕೌಶಲ್ಯ ಇರುವ ವಿನೋದ್‌ಗೆ ಉತ್ತಮ ಗಾಯನ ಪ್ರತಿಭೆಯೂ ಇದೆ. ಆದರೆ ವಿನೋದ್‌ರ ಸಿನಿಮಾ ಕೆರಿಯರ್ ಸಂಕುಚಿತ ಮನಸ್ಸಿನವರ ಕೈಗೆ ಸಿಕ್ಕು ಹಳಿ ತಪ್ಪಿತು. ದ್ವಾರಕೀಶ್ ಮುಂತಾದವರು ರಾಜ್‌ಕುಮಾರ್ ಮತ್ತು ರಾಜ್ ಕುಟುಂಬಕ್ಕೆ ಮುಜುಗರ ಉಂಟು ಮಾಡಬೇಕೆಂತಲೇ ವಿನೋದರನ್ನು ಸಿನಿಮಾಗೆ ಕರೆತಂದು ಕೆರಿಯರ್ ಹಾಳುಮಾಡಿದರೆಂತಲೂ ಹೇಳಲಾಗುತ್ತದೆ.

ಇಲ್ಲೇ ಒಂದು ವಿಚಾರವನ್ನು ಸರಳವಾಗಿ ಹಾಗೂ ನೇರವಾಗಿ ಹೇಳಿಬಿಡುವುದು ಒಳಿತು.

ನಟ ವಿನೋದ್ ರಾಜ್ ಡಾ. ರಾಜ್‌ಕುಮಾರ್ ಹಾಗೂ ಲೀಲಾವತಿಯವರ ಪುತ್ರ! ಈ ಸಂಗತಿ ಅಸ್ಪಷ್ಟವಾಗಿ ಹಾಗೂ ಕೆಲವೊಮ್ಮೆ ಅರೆಬರೆಯಾಗಿ ತೇಲಾಡುತ್ತಿರುತ್ತದೆ. ಆದರೂ ಲೀಲಾವತಿಯವರು ಹಾಗೂ ವಿನೋದ್ ಅದೆಂತಾ ಸಭ್ಯ, ಸೌಜನ್ಯದ, ಸುಸಂಸ್ಕೃತ, ಪಕ್ವ ಮನಸ್ಸಿನವರೆಂದರೆ ರಾಜ್ ಬದುಕಿರುವವರೆಗೂ ಈ ವಿಚಾರ ಎತ್ತದೆ, ರಾಜ್‌ರಿಗೂ ಮುಜುಗರವಾಗದಂತೆ ಬದುಕು ಸಾಗಿಸಿದರು. ಈಗ್ಗೆ ಹದಿನೇಳು ವರ್ಷಗಳ ಹಿಂದಷ್ಟೇ ಈ ತಾಯಿ-ಮಗ ಮದ್ರಾಸ್ ತ್ಯಜಿಸಿ ಕರ್ನಾಟಕದಲ್ಲೇ ನೆಲೆಸಲು ಬಂದದ್ದು. ಹಾಗೆ ಬಂದವರನ್ನು ಸ್ವಾಗತಿಸಿ ಅವರ ಪಾಡಿಗೆ ಬದುಕಲು ಬಿಡದೆ 'ದೊಡ್ಡವರ' (ರಾಜ್) ಮನೆಗೆ ಕಿರಿಕಿರಿ ಉಂಟು ಮಾಡಲೆಂದೇ ಇವರಿಬ್ಬರೂ ಬೆಂಗಳೂರಿನಲ್ಲಿ ನೆಲೆಸುತ್ತಿದ್ದಾರೆ ಎನ್ನುವಂತೆ ಕೆಲವರು ತಪ್ಪು ಕಲ್ಪನೆ ಮಾಡಿಕೊಂಡರಂತೆ.



ಇದು ನಿಜವಿರಬಹುದಾ ಅನ್ನಿಸುವಂತೆ ತಾಯಿ- ಮಗನಿಗೆ ಕಿರುಕುಳ ನೀಡುವಂತಹ, ಹೆದರಿಕೆ-ಆತಂಕ ಹುಟ್ಟಿಸುವಂತಹ ಹಲವಾರು ಘಟನೆಗಳು ನಡೆದವೆಂತಲೂ ಹೇಳುವವರಿದ್ದಾರೆ. ತೋಟಕ್ಕೆ ಬೆಂಕಿ ಬಿದ್ದದ್ದು, ಆವಾಗೀವಾಗ ಫೋನ್ ಬೆದರಿಕೆ, ಸಿನಿಮಾ ರಂಗದಲ್ಲಿನ ಕಿರಿಕಿರಿ, ಬಲಿಷ್ಠರ ಅಸಹಕಾರ ಇತ್ಯಾದಿ ಘಟನೆಗಳು ನಡೆದೂ, ನಡೆದು ಇವರಿಬ್ಬರೂ ಮಾನಸಿಕವಾಗಿ ಜರ್ಝರಿತರಾಗಿದ್ದಾರೆ.

ಮೊನ್ನೆ ನಾವಲ್ಲಿದ್ದಾಗ ಅವರೇನೂ ಯಾರನ್ನೋ ದೂರುವಂತೆ ಇದನ್ನೆಲ್ಲಾ ಹೇಳಲಿಲ್ಲ, ಕೇವಲ ತಮ್ಮ ಮನಸ್ಸಿನ ಬೇಗುದಿಯನ್ನಷ್ಟೇ ಹಂಚಿಕೊಂಡರು. ಇಷ್ಟಕ್ಕೂ ಅವರಾಗಿಯೇ ನಮ್ಮನ್ನು ಕರೆಸಿಕೊಂಡಿರಲೂ ಇಲ್ಲ,

ಲೀಲಾವತಿಯವರು ಅದೆಂಥಾ ಸಹೃದಯಿಯೆಂದರೆ ಅವರಿರುವ ಹಳ್ಳಿಯ ಜನರಿಗೆ ನೆರವಾಗಬೇಕೆಂದು ತಮ್ಮ ಸ್ವಂತದ 28 ಲಕ್ಷ ರೂಪಾಯಿ ಖರ್ಚು ಮಾಡಿ ಒಂದು ಆಸ್ಪತ್ರೆ ಕಟ್ಟಿಸಿ ಸರ್ಕಾರಕ್ಕೆ ಒಪ್ಪಿಸಿದ್ದಾರೆ. ಆದರೆ ನಮ್ಮ ಸರ್ಕಾರದ ನೀಚ ಅಧಿಕಾರಿಗಳು ಆಸ್ಪತ್ರೆಗೆ ಬೀಗ ಹಾಕಿ ಜನರಿಗೆ ಸೌಲಭ್ಯ ದಕ್ಕದಂತೆ ಮಾಡಿಬಿಟ್ಟಿದ್ದಾರೆ.

ಈ ವಿಪರ್ಯಾಸಕ್ಕೆ ಏನೆನ್ನಬೇಕು ಹೇಳಿ?

ಈ ವಿನೋದ್‌ರಾಜ್ ಹೊರ ನೋಟಕ್ಕೆ ಬೇಗನೆ ಉದ್ವಿಗ್ನತೆಗೆ ಒಳಗಾಗುವ ಯುವಕನಂತೆ ಕಂಡರೂ ಕೂಡ ನಿಜಕ್ಕೂ ಸಹೃದಯಿ. ಕೋಮಲ ಮನಸ್ಸಿನ ಭಾವುಕ ವ್ಯಕ್ತಿ. ವಿನೋದ್‌ರ ವ್ಯಕ್ತಿ ವೈಶಿಷ್ಟ್ಯ ಅದೆಂತಹದೆಂದು ನಿಮಗೆ ಅರ್ಥ ಮಾಡಿಸಲು ನಾನಲ್ಲಿ ಕಂಡು ಆಶ್ಚರ್ಯದ ಘಟನೆ ಬಗ್ಗೆ ಹೇಳಲೇ ಬೇಕು.

ವಿನೋದ್ ಡ್ರೈವ್ ಮಾಡುತ್ತಿದ್ದ ಸ್ಕಾರ್ಪಿಯೋ ಕಾರ್ ತೋಟದ ಒಂದು ಗುಡ್ಡದ ಭಾಗಕ್ಕೆ ಬಂದಾಗ ಗೌರಿಯವರ ಜೊತೆ ಹಿಂದೆ ಕುಳಿತಿದ್ದ ಲೀಲಾವತಿಯವರು ಪುಟ್ಟ ಕಲ್ಲು ಬಂಡೆಯೊಂದನ್ನು ತೋರಿಸುತ್ತಾ "ಅದರ ಕೆಳಗೆ ಒಂದು ಚೇಳಿದೆ. ಅದು ವಿನೂ ಫ್ರೆಂಡ್. ಅವನು ಅದರ ಜೊತೆ ಮಾತಾಡ್ತಾನೆ" ಅಂದರು!

ಮೊದಲಿಗೆ ನಾವದನ್ನು ನಂಬಲಿಲ್ಲ.

ವಿನೋದ್ ಕಾರಿನಲ್ಲಿ ಕುಳಿತಿದ್ದಂತೆಯೇ ಕಾರಿನ ಬಾಗಿಲ



ಮೇಲೆ ಕೈಯಿಂದ ತಟ್ಟಿ ಶಬ್ದ ಮಾಡುತ್ತಾ

"ಏಯ್ ನಾನ್ ಬಂದಿದ್ದೀನಿ ಆಚೆ ಬಾರೊ..." ಅಂದರು. ಒಂದೆರಡು ಕ್ಷಣ ಆಯಿತು. ಐದು ಕ್ಷಣ ಕಳೆಯಿತು. ವಿನೋದ್ ಇನ್ನೊಮ್ಮೆ ಕರೆದರು. ನಾವೂ ಕಾಯುತ್ತಿದ್ದೆವು. ಮರುಕ್ಷಣ ...ಕಪ್ಪು ಬಣ್ಣದ ಚೇಳೊಂದು ಕಲ್ಲಿನ ಅಡಿಯಿಂದ ಹೊರ ಬರಬೇಕೆ..!

ನಮಗೆ ಶಾಕ್ ಹೊಡೆಸಿಕೊಂಡ ಅನುಭವ. ನಾವೆಲ್ಲಾ ಅದನ್ನು ನೋಡಿ ಗದ್ದಲವೆಬ್ಬಿಸುತ್ತಿದ್ದಂತೆ ಚೇಳು ಸರಕ್ಕೆಂದು ಮಾಯವಾಯಿತು.

ಬಹುಶಃ ಅದಕ್ಕೆ ಆತಂಕವಾಯಿತೇನೋ...

ಆಗ ವಿನೋದ್ ನಮಗೆ ಮಾತಾಡದೆ ಕೆಲ ಹೊತ್ತು ಸುಮ್ಮನಿರಲು ಹೇಳಿ ಪುನಃ ತಮ್ಮ ದನಿಯನ್ನು ಮೃದುವಾಗಿಸಿಕೊಂಡು ಚೇಳನ್ನು ಕರೆದರು. ಮನೆಯ ಕಾಲಿಂಗ್ ಬೆಲ್ ಒತ್ತಿದಾಗ ಬಾಗಿಲು ತೆರೆಯುವಂತೆ ಆ ಚೇಳು ನಿಜಕ್ಕೂ ಮತ್ತೆ ಹೊರ ಬಂತು... 'ಏನೂ ವಿನೂ?' ಅನ್ನುವಂತೆ.

ಗೆಳೆಯನೊಬ್ಬನೊಂದಿಗೆ ಹರಟುವಂತೆ ವಿನೋದ್ ಆ ಚೇಳಿನೊಂದಿಗೆ ಒಂದೆರಡು ಮಾತಾಡಿ ಹೊರಟರು. ಆ ಚೇಳಿಗೆ, ಕಲ್ಲಿನಡಿಯ ಅದರ ಮನೆಗೆ ಯಾರೂ ತೊಂದರೆ ಮಾಡದಂತೆ ಕೆಲಸಗಾರರಿಗೆಲ್ಲಾ ಹೇಳಿದ್ದಾರಂತೆ. ಹಸು, ನಾಯಿ, ಗಿಳಿಗಳ ಜೊತೆಗೆ ಮನುಷ್ಯರ ಗೆಳೆತನದ ಬಗ್ಗೆ ಕೇಳಿದ್ದ ನೋಡಿರುವ ನಮಗೆ ಇದು ನಿಜಕ್ಕೂ ಬೆರಗಾಗಿಸುವ ಅನುಭವ. ಈ ಕುಟುಂಬದ ಪ್ರಾಣಿ ಪ್ರೀತಿ ಅಷ್ಟೇ ಅಲ್ಲ, ಅವರ ತೋಟಕ್ಕೆ ತಾಗಿ ಕೊಂಡಂತೆ ಕುರುಚಲು ಕಾಡು ಹರಡಿಕೊಂಡಿದೆ. ಅಲ್ಲಿಂದ ಹಾರಿ ಬರುವ ನವಿಲುಗಳ ನಿತ್ಯ ನರ್ತನ ಮನೆಯ ಆವರಣದಲ್ಲಿ ನಡೆಯುತ್ತಿರುತ್ತದೆ. ಅದಲ್ಲದೆ ಇಪ್ಪತ್ತು ನಾಯಿಗಳನ್ನು ಅವರು ಸಾಕಿದ್ದಾರೆ. ಒಂದೊಂದು ಜೋಡಿಗೂ ಮುದ್ದಾದ ಹೆಸರುಗಳಿವೆ. ಒಂದಕ್ಕೆ ರಾಜ್‌ಕಪೂರ್- ನರ್ಗಿಸ್ ಅಂತೆ. ಪ್ರೀತಿ ಅವುಗಳ ಪರಸ್ಪರ ಒಡನಾಟದ ಕಾರಣಕ್ಕೆ!

"ಇನ್ನೊಂದು ಜೋಡಿಗೆ ರೊಟ್ಟಿ-ಚಟ್ನಿ ಅಂತ ಹೆಸರಿಟ್ಟಿದ್ದೀವಿ." ಅಂದರು ನಸುನಗುತ್ತಾ ಲೀಲಾವತಿಯವರು.

ನಟ ವಿನೋದ್ ರಾಜ್ "ಪಪ್ಪಾಯಿ ಬೆಳೆದು ಈ ಸಾರಿ ಎರಡು ಲಕ್ಷ ರೂಪಾಯಿ ದುಡಿದೆ" ಎಂದರು. ತಾನು ಮಾಡುತ್ತಿರುವ ಕೃಷಿ ಕೆಲಸಗಳ ಬಗ್ಗೆ ಖುಷಿಯಾಗಿ ವಿವರಿಸಿದರು. ಈತ ನಿಜಕ್ಕೂ "ಮಣ್ಣಿನ ಮಗ" ಅನಿಸಿತು ನಮಗೆ.

ನಾವಲ್ಲಿಂದ ಹೊರಡುವಾಗ ಲೀಲಾವತಿಯವರು ಹಿಂದಿಯ ಪ್ರಸಿದ್ಧ ನಟಿ ವಹೀದಾ ರೆಹಮಾನ್ ಬೆಂಗಳೂರಿನಲ್ಲೇ ಇರುವ ಬಗ್ಗೆ ಕೇಳಿದರು.

"ನಾನು ವಹೀದಾ ಫ್ಯಾನ್. ಆಕೇನ ಒಂದು ಸಾರಿ ನೋಡಬೇಕು" ಅಂದರು. ನಾವು ವಹೀದಾರ ಪ್ರತಿಭೆ, ಬೆಂಗಳೂರಿನಲ್ಲಿರುವ ಆಕೆಯ ತೋಟ, ಈಗಿನ ವೃದ್ಧಾಪ್ಯದ ನಿವೃತ್ತ ಬದುಕಿನ ಬಗ್ಗೆ ನಮಗೆ ಗೊತ್ತಿರುವ ವಿಚಾರ ಹೇಳಿ "ಒಮ್ಮೆ ಭೇಟಿ ಮಾಡಿಸಲು ವ್ಯವಸ್ಥೆ ಮಾಡಿಸುತ್ತೇವೆ" ಎಂದು ವಾಗ್ದಾನ ಮಾಡಿ ಬಂದೆವು. ಇದೆಲ್ಲಾ ಮುಗಿಸಿ ಬಂದ ನಂತರ ಮತ್ತೆ ಯೋಚಿಸಿದಾಗ ನನಗನ್ನಿಸಿದ್ದು

ಲೀಲಾವತಿ-ವಿನೋದ್‌ರಾಜ್ ತಮಗೇನೋ ಕೆಡಕು ಸಂಭವಿಸಬಹುದೆಂಬ ಸದಾ ಆತಂಕದಲ್ಲಿರುವುದು ಅನಗತ್ಯ. ಆರ್ಥಿಕವಾಗಿ ನೆಮ್ಮದಿಯಾಗಿರುವ ಇವರು ತಮಗೆ ಸಂತೋಷ ನೀಡುವ ಸಿನಿಮಾ ಕೆಲಸವನ್ನು, ನಂಬಿಕಸ್ಥರನ್ನು ಗುರುತಿಸಿ ಅಂತವರ ಜೊತೆ ಮುನ್ನಡೆಯಬಹುದು. ವಿನೋದ್ ರಾಜ್ ಮುಂದಿನ ದಿನಗಳಲ್ಲಿ 'ಹೀರೋ' ಆಗುವ ಅವಕಾಶ ಪಡೆಯದಿದ್ದರೇನಾಯಿತು ಸದಭಿರುಚಿಯ ಸಿನಿಮಾ ನಿರ್ಮಿಸುತ್ತಾ, ತಾನು ತಮಗೆ ಹೊಂದುವ ಪಾತ್ರಗಳಲ್ಲಿ ನಟಿಸುತ್ತಾ, ಹಾಡುವ ಪ್ರತಿಭೆಯು ಇದೆಯಾದ್ದರಿಂದ ಗಾಯಕನಾಗುವತ್ತಲೂ ಗಮನ ಹರಿಸಬಹುದು.

ಇದರ ಸಾರಂಶ ಹಾಗೂ ನಮ್ಮ ಆಶಯವಿಷ್ಟೇ.

ಈ ಕುಟುಂಬ ಪರಿತ್ಯಕ್ತರಂತೆ, ಅಸಹಾಯಕರಂತೆ ಯಾವ ಕಾರಣಕ್ಕೂ ಬದುಕಕೂಡದು. ಈ ಕಲಾವಿದರ ಕುಟುಂಬ ಇನ್ನೂ ಹೆಚ್ಚಿನ ಮಾನ್ಯತೆ, ಗೌರವ ಹಾಗೂ ಪ್ರೀತಿ ವಿಶ್ವಾಸಗಳಿಗೆ ಅರ್ಹರೆಂಬುದನ್ನು ಕರ್ನಾಟಕದ ಜನತೆ ಹಾಗೂ ಸಿನಿಮಾ ಜನ ಮನಗಾಣಬೇಕು.

ಕೊನೆಯದಾಗಿ,

ಒಂದು ಚೇಳಿನ ಜೊತೆಗೂ ಗೆಳೆತನ ಬೆಳೆಸಬಲ್ಲಷ್ಟು ಸಹನೆ, ಮಾನವೀಯತೆಯ ಗುಣ ಇರುವ ವಿನೋದ್‌ರಾಜ್ ಹೊರಗಿನ ಜನರ ಬಗ್ಗೆ ಯಾವಾಗಲೂ ಅನುಮಾನ, ಆತಂಕದಿಂದಿರಕೂಡದು.



ಕ್ಯಾಪ್ಟನ್‌ಗೌರಿಯವರಿಗೆ ಹೂವಿನ ಗಿಫ್ಟ್

ನಾವು ಹೊರಟಾಗ ಲೀಲಾವತಿಯವರು ತೋಟದಿಂದ ಒಂದು ಹೂ ಗೊಂಚಲನ್ನು ತರಿಸಿ ಗೌರಿಯವರ ಕೈಗಿಟ್ಟರು. **Bird of paradise** ಎನ್ನುವ ಹೆಸರಿನ ಆ ಹೂವಿನ ಸೊಬಗು ನಮ್ಮ ಆಫೀಸಿನ ಎಲ್ಲರಿಗೂ ಇಷ್ಟವಾಯಿತು.

• ಪಾರ್ವತೀಶ

ಅನಿತಾ ಹೇಳಲಿರುವ ಜೈಲಿನ ಕಥೆ




ಅನಿತಾ ಬಿಡುಗಡೆಯಾಗಿದ್ದಾರೆ.

ಶಿವಮೊಗ್ಗದವರಾದ ಅನಿತಾ ಈಗ್ಗೆ ಮೂರು ವರ್ಷಗಳ ಹಿಂದೆ 'ನಕ್ಸಲ್' ಸಂಪರ್ಕಗಳಿರುವ ಶಂಕೆಯ ಮೇಲೆ ರಾಜ್ಯ ಪೊಲೀಸರಿಂದ ಬಂಧನಕ್ಕೊಳಗಾಗಿದ್ದರು. ಆಕೆಗೆ ಜಾಮೀನು ಕೂಡ ಸಿಗದಂತೆ ನೋಡಿಕೊಂಡ ಪೋಲಿಸರು ಎರಡು ವರ್ಷ ಹನ್ನೊಂದು ತಿಂಗಳುಗಳ ಕಾಲ ಆಕೆ ಜೈಲಿನಲ್ಲೇ ಇರುವಂತೆ ಪಿತೂರಿ ನಡೆಸಿದರು. ಆದರೆ ಪೊಲೀಸರು ಮಾಡಿದ್ದ ಯಾವ ಆರೋಪಗಳೂ ಕೋರ್ಟ್‌ನಲ್ಲಿ ಸಾಬೀತಾಗದೆ ಅನಿತಾ ಈಗ ನಿರ್ದೋಷಿಯಾಗಿ ಹೊರ ಬಂದಿದ್ದಾರೆ. ಅನೇಕ ವರ್ಷಗಳಿಂದ ಸಾಮಾಜಿಕ ಹೋರಾಟಗಳಲ್ಲಿ ತೊಡಗಿಕೊಂಡಿರುವ ಅನಿತಾ ಬದ್ಧತೆಯ ಆದರೆ ಕೊಂಚ ದುಡುಕಿನ ಕಾರ್ಯಕರ್ತೆ. ಅದೇನೇ ಇರಲಿ, ಅನಿತಾ ಮೈಸೂರು, ಶಿವಮೊಗ್ಗ, ಚಿಕ್ಕಮಗಳೂರಿನ ಜೈಲುಗಳಲ್ಲಿ ಇದ್ದಾಗ ತಾವು ಕಂಡ, ಅನುಭವಿಸಿದ ವಿಚಾರಗಳನ್ನು ಏಪ್ರಿಲ್ ತಿಂಗಳಿನಿಂದ ಲಂಕೇಶ್ ಓದುಗರೊಂದಿಗೆ ಹಂಚಿಕೊಳ್ಳಲಿದ್ದಾರೆ.

ಬಹುಶಃ ಆಧುನಿಕ ಕರ್ನಾಟಕದ ಇತಿಹಾಸದಲ್ಲೇ ಮಹಿಳೆಯೊಬ್ಬರ ಜೈಲುವಾಸದ ಅನುಭವದ ಪ್ರಥಮ ಬರವಣಿಗೆ ಇದಾಗಬಹುದು. ಜೈಲು ವಾಸದಿಂದ ಅನಿತಾರ ಆರೋಗ್ಯಕ್ಕೆ ಕೊಂಚ ಹಾನಿಯಾಗಿದೆಯಾದರೂ ಅವರು ಈಗಲೂ ಹಿಂದಿನಂತೆಯೇ ಉತ್ಸಾಹದಿಂದ ಸಾಮಾಜಿಕ ಬದ್ಧತೆ ಉಳಿಸಿಕೊಂಡಿದ್ದಾರೆಂಬುದು ಅವರು ಮೊನ್ನೆ ನಮ್ಮ ಕಚೇರಿಗೆ ಬಂದಿದ್ದಾಗ ಗೊತ್ತಾಗುತ್ತಿತ್ತು, ಅನಿತಾ ಏನು ಹೇಳಲಿದ್ದಾರೆಂಬ ಕುತೂಹಲ ನಿಮ್ಮಷ್ಟೇ ನಮಗೂ ಇದೆ.

ಹುಬ್ಬಳ್ಳಿ ಶಿವಮೊಗ್ಗ | ಸಮಾವೇಶವೆಂಬ ಪ್ರಹಸನ



ಯಡಿಯೂರಪ್ಪ ಈಗ ಬಿದ್ದ ಮರ. ಚಿಗುರಿಕೊಳ್ಳಲು ...ವೂ ಇಲ್ಲ ನೀರೂ ಇಲ್ಲ. ಇದ್ದುದ್ದ ಆಸ್ತಿಗಳೆಲ್ಲಾ ಕೋರ್ಟಿನ ...ಕಟೆಯಲ್ಲಿದ್ದರೆ, ಮಕ್ಕಳ ತಲೆಮೇಲೆ ಜೈಲಿನ ನೆರಳು ...ದ್ದಿದೆ. ಇಷ್ಟಾಗಿಯೂ ಯಡಿಯೂರಪ್ಪ ತನ್ನ 70 ನೇ ...ಟ್ಟುಹಬ್ಬವನ್ನು ಹುಬ್ಬಳ್ಳಿಯಲ್ಲಿ ಅದ್ದೂರಿಯಾಗಿ ಆಚರಿಸಿ ...ಂಡರು. ಇದು ಬಿಜೆಪಿಯನ್ನು ತೊರೆಯುವ ಮುನ್ಸೂ...ಚನೆಯೋ ಅಥವಾ ಜೆಡಿಯು ಸೇರಿಕೊಳ್ಳುವ ಇಂಗಿತವೋ ...ಟ್ಟಿನಲ್ಲಿ ಯಡ್ಡಿ ಯುದ್ಧ ಘೋಷಣೆ ಮಾಡಿದ್ದಾರೆ.

ಅಧಿಕಾರ ಸಿಕ್ಕಿದ್ದೆ ಲೂಟಿಗಾಗಿ ಎಂಬಂತೆ ದಶಕದ ...ಹ ತೀರಿಸಿಕೊಳ್ಳಲು ಹಗಲು ರಾತ್ರಿ ಹಣ ಮತ್ತು ...ಲೂಟಿಯಲ್ಲೇ ತಲ್ಲೀನರಾಗಿದ್ದರ ಫಲವಾಗಿ ಪದವಿಯೂ ...ಹೋಯಿತು, ಜೈಲಿನ ಅನುಭವವನ್ನು ಯಡ್ಡಿ ಕಂಡಂತಾ...ಯಿತು. ಇದೆಲ್ಲದರ ಮಧ್ಯೆ ಯಡ್ಡಿಯನ್ನು ಮುಖ್ಯಮಂತ್ರಿಯ ...ದಿಯತ್ತ ಕರೆತಂದಿದ್ದ ಲಿಂಗಾಯತ - ಅದರಲ್ಲೂ ...ಬಲರಾದ ಪಂಚಮಸಾಲಿಗಳು - ಸದ್ದಿಲ್ಲದೆ ಆತನಿಂದ ...ದೂರ ಸರಿದರು.

ಇದನ್ನು ಕಂಡು ವಿಚಲಿತರಾದ ಯಡಿಯೂರಪ್ಪ ಮತ್ತೆ ... ಶಕ್ತಿ ಪ್ರದರ್ಶನದ ಮೂಲಕ ಲಿಂಗಾಯತರ ...ಯಕನಾಗುವ, ಆ ಮೂಲಕ ಮುಖ್ಯಮಂತ್ರಿ ಗಾದಿ ...ಡೆಯುವ ಉದ್ದೇಶದಿಂದ ತನ್ನ ಹುಟ್ಟುಹಬ್ಬವನ್ನ ಚೇಲಾ ...ಮಂತ್ರಿಗಳನ್ನು ಮುಂದಿಟ್ಟುಕೊಂಡು ರಾಜ್ಯದ ನಾಲ್ಕೂ ...ಮೂಲೆಗಳಲ್ಲಿ ನಡೆಸುತ್ತಿದ್ದಾರೆ. ಅದರ ಮೊದಲ ಪ್ರಯೋಗ ...ಹುಬ್ಬಳ್ಳಿಯ ನೆಹರು ಕ್ರೀಡಾಂಗಣದಲ್ಲಿ ಅನಾವರಣಗೊಂಡಾ...ಯಿತು. ಮುಂದಿನದು ಇದೇ ತಿಂಗಳ 31 ರಂದು ಶಿವಮೊಗ್ಗ...ದಲ್ಲಿ ಮತ್ತೊಂದು ಸಮಾರಂಭ ಅರೇಂಜ್ ಆಗುತ್ತಿದೆ.

ಹುಬ್ಬಳ್ಳಿಯಲ್ಲಿ ನಡೆದ ಯಡಿಯೂರಪ್ಪನ 70 ನೇ ...ವರ್ಷದ ಹುಟ್ಟುಹಬ್ಬದ ಅಭಿನಂದನಾ ಸಮಾರಂಭ ಒಂದು ...ಅರ್ಥದಲ್ಲಿ ಹೈಕಮಾಂಡ್ ಮತ್ತು ಆರ್.ಎಸ್.ಎಸ್ ವಿರುದ್ಧ ...ಯುದ್ಧ ಘೋಷಣೆಯೂ ಆಗಿತ್ತು, ಇನ್ನೊಂದು ಅರ್ಥದಲ್ಲಿ ...ಗೆ ಬೆಂಬಲವನ್ನು ನಿರಾಕರಿಸಿರುವ ಪಂಚಮಸಾಲಿ ಸಮು...ದಾಯದ ಪೀಠ ಮತ್ತು ಮುಖಂಡರುಗಳನ್ನು ತನ್ನತ್ತ ...ಸೆಳೆಯುವ ಸಮಾರಂಭವೂ ಆಗಿತ್ತು.

... ಮೊದಲು ತನಗೆ ಮುಖ್ಯಮಂತ್ರಿ ಪದವಿ ಕೊಡಬೇಕು, ...ಇಲ್ಲದಿದ್ದರೆ ಪಕ್ಷದಿಂದಲೇ ಪಲಾಯನ ಎಂಬ ಸೂಚನೆಯನ್ನು ...ಯಡ್ಡಿ ಮತ್ತವನ ಬೆಂಬಲಿಗ ಮಂತ್ರಿ, ಶಾಸಕರು ಸ್ಪಷ್ಟವಾಗಿ ...ನೀಡಿದರು. ಅದಕ್ಕೆಂದು ಅವರು ಸುಮಾರು ಐದು ಕೋಟಿ ...ರೂಪಾಯಿಗಳಲ್ಲಿ ಖರ್ಚು ಮಾಡಿ ಆ ಸಮಾರಂಭವನ್ನು ...ಯೋಜಿಸಿದ್ದರು.

... ಮೂವತ್ತು ವರ್ಷಗಳಿಂದ ಇಡೀ ರಾಜ್ಯ ಸುತ್ತುತ್ತಾ ...ಜನರಲ್ಲಿ ಕೋಮುಭಾವನೆಯ ಕಿಚ್ಚು ತುಂಬಿ, ಸಮಾಜವನ್ನು ...ಒಡೆದು, ಲಿಂಗಾಯತರನ್ನ ಎತ್ತಿಕಟ್ಟಿ ಅಧಿಕಾರದ ಗದ್ದುಗೆ ...ಹಿಡಿದಿದ್ದ ಯಡಿಯೂರಪ್ಪ ಇಂದು ಅದೇ ಜಾತಿ ಲಾಭಿಯಿಂದ ...ಅಧಿಕಾರ ಕಳೆದುಕೊಳ್ಳುವಂತಾಗಿದ್ದಂತೂ ಸತ್ಯ. ರಾಜ್ಯದ ...ಲಿಂಗಾಯತರಿಗೆ ತಾನೊಬ್ಬನೇ ನಾಯಕನಾಗಿ ಉಳಿಯಬೇಕು ...ಎಂಬ ದುರಾಸೆಯೇ ಇಂದು ಆತನಿಗೆ ಮುಳುವಾಗಿ ಪರಿಣ...ಮಿಸಿದೆ. ಲಿಂಗಾಯತರಲ್ಲೆ ಪ್ರಮುಖರೆನಿಸಿಕೊಂಡ ಎಂಭತ್ತು ...ರಷ್ಟು ಪಂಚಮಸಾಲಿಗಳ ಮುಖಂಡರು, ಸ್ವಾಮಿಗಳು ಬಹಿ...ರಂಗವಾಗಿ ಇವ ನಮ್ಮವನಲ್ಲ.. ನಮ್ಮವನಲ್ಲ.. ಎಂದು ...ಹೇಳುತ್ತಿರುವುದೇ ಯಡಿಯೂರಪ್ಪನ ತಳಕ್ಕೆ ಬಿಸಿನೀರು ...ಬಿಟ್ಟಂತಾಗಿದೆ. ಇಷ್ಟೆಲ್ಲಾ ಆದರೂ ಭಂಡ ಧೈರ್ಯದಲ್ಲಿ ಕಳೆದುಕೊಂಡಿದ್ದನ್ನ ಮತ್ತೆ ಪಡೆಯಲು ಹೊರಟಿರುವ ಯಡಿಯೂರಪ್ಪ ತನ್ನ ಹುಟ್ಟುಹಬ್ಬವನ್ನು ವರ್ಷಪೂರ್ತಿ ಆಚರಿಸಿಕೊಳ್ಳುವ ಇರಾದೆಗಿಳಿದಿದ್ದಾನೆ.

ಲೋಕಾಯುಕ್ತ ಸಲ್ಲಿಸಿದ್ದ ವರದಿಗೆ ಸಂಬಂಧಿಸಿದಂತೆ ಒಂದು ಕೇಸ್‌ನಲ್ಲಿ ಹೈಕೋರ್ಟ್ ಕೊಂಚ ಸಮಾಧಾನದ ತೀರ್ಪನ್ನ ನೀಡುತ್ತಿದ್ದಂತೆ ಯುದ್ಧದಲ್ಲಿ ಗೆದ್ದುಬಂದಂತೆ ಚಿಗುರೊಡೆದ ಯಡಿಯೂರಪ್ಪ ಮತ್ತೆ ಮುಖ್ಯಮಂತ್ರಿ ಗಾದಿಯ ಅಪೇಕ್ಷೆಯನ್ನ ಹೆಚ್ಚಿಸಿಕೊಂಡು ದೆಹಲಿ ಹೈಕಮಾಂಡ್‌ಗೆ ಪದೇ ಪದೇ ಸೂಚನೆ ರವಾನಿಸಿದರು. ಆದರೆ ಹೈಕಮಾಂಡ್ ಕ್ಯಾರೆ ಎನ್ನದಿದ್ದಾಗ ಶಕ್ತಿ ಪ್ರದರ್ಶನದ ಮೂಲಕ ಪಕ್ಷವನ್ನು ಬೆದರಿಸುವ ತಂತ್ರಗಾರಿಕೆಯನ್ನು ರೂಪಿಸಿದರು.

ಅದಕ್ಕೆ 50ಕ್ಕೂ ಹೆಚ್ಚು ಶಾಸಕರು ಬೆಂಬಲ ನೀಡಿದರು. ಆದರೆ, ಯಾವಾಗ ಲಿಂಗಾಯತರು ಪೂರ್ತಿಯಾಗಿ ಯಡಿಯೂರಪ್ಪನ ಬೆಂಬಲಕ್ಕೆ ನಿಂತಿಲ್ಲ ಎಂಬುದು ಆರೆಸ್ಸೆಸ್ ಮುಖಂಡರಿಗೆ ಗೊತ್ತಾಯಿತೋ ಅವರು ಸದಾನಂದಗೌಡರ ಬದಲಾವಣೆ ಸಧ್ಯಕ್ಕೆ ಬೇಡ ಎಂಬ ಸಂದೇಶವನ್ನು ಹೈಕಮಾಂಡ್ ರವಾನಿಸಿದರು. ಆವಾಗಲೇ ಯಡಿಯೂರಪ್ಪ ಬಣದಿಂದ ಯುದ್ಧ ಘೋಷಣೆಯ ತಯಾರಿಗಳು ಸದ್ದಿಲ್ಲದೇ ಆರಂಭಗೊಂಡವು.

ಸಿದ್ಧಗಂಗಾ ಮಠದಲ್ಲಿ ಕೋಟಿ ಲಿಂಗ ಸ್ಥಾಪನೆಗಾಗಿ ಮುಖ್ಯಮಂತ್ರಿ ಸದಾನಂದಗೌಡ ಮತ್ತು ರಾಜ್ಯಾಧ್ಯಕ್ಷ ಕೆ.ಎಸ್. ಈಶ್ವರಪ್ಪ ಮುಂದೆ ನಿಂತು ಅಡಿಗಲ್ಲು ಸಮಾರಂಭವನ್ನು ನೆರವೇರಿಸಿದರಲ್ಲದೆ ಆ ಕಾರ್ಯಕ್ರಮದಿಂದ ಯಡ್ಡಿಯನ್ನು ಹೊರಗಿಡಲಾಗಿತ್ತು. ಇದನ್ನು ಅರಿತ ಯಡಿಯೂರಪ್ಪ ಕೋಟಿಲಿಂಗ ಸ್ಥಾಪನೆಯನ್ನು ಕೈಬಿಡುವಂತೆ ಸಿದ್ಧಗಂಗಾ ಶ್ರೀಗಳ ಮೇಲೆ ಒತ್ತಡ ಹೇರಿದರು. ಅದು ಒಂದು ಘಟ್ಟ.

ಇದಾದ ನಂತರ ಗೋಕಾಕ್ ಪಟ್ಟಣದಲ್ಲಿ ಬಾಲಚಂದ್ರ ಜಾರಕಿಹೊಳಿ ಸಾರಥ್ಯದಲ್ಲಿ ಜರುಗಿದ ಪಂಚಮಸಾಲಿ ಸಮಾವೇಶದಲ್ಲಿ ಪಂಚಮಸಾಲಿ ಪೀಠದ ಸ್ಥಿರ ಮತ್ತು ಚರ ಇಬ್ಬರು ಸ್ವಾಮಿಗಳೂ ಸೇರಿದಂತೆ ಆ ಸಮಾಜದ ರಾಜ್ಯಾಧ್ಯಕ್ಷ ಬಸವರಾಜ ದಿಂಡೂರ ಯಡಿಯೂರಪ್ಪನನ್ನ ಬಹಿರಂಗವಾಗಿ ವಿರೋಧಿಸಿದರು. ಅದು ಎರಡನೇ ಘಟ್ಟ.

ಬಿಜೆಪಿ ಹೈಕಮಾಂಡ್‌ಗೆ ಹೈಕೋರ್ಟ್ ಯಡ್ಡಿಯ ಗಣಿ ಹಗರಣದಲ್ಲಿ ಎಫ್‌ಐಆರ್ ರದ್ದುಗೊಳಿಸಿದ್ದಕ್ಕಿಂತ ಆತನಿಂದ ಲಿಂಗಾಯತ ಸಮುದಾಯ ಈಗ ದೂರ ಸರಿದಿರುವುದು ಹೆಚ್ಚಾಗಿ ಪರಿಣಮಿಸಿದೆ. ಇದನ್ನೆಲ್ಲಾ ಅರಿತ ಯಡಿಯೂರಪ್ಪ ಪದವಿ ದೊರೆಯದಿದ್ದರೂ, ಪಲಾಯನದ ಸಿದ್ಧತೆಗಾಗಿ ಅದ್ದೂರಿ ಸಮಾರಂಭಗಳಿಗೆ ಇಳಿದಿದ್ದಾರೆ. ಹುಬ್ಬಳ್ಳಿಯಲ್ಲಿ ಜರುಗಿದಂತೆ ಶಿವಮೊಗ್ಗ, ಗುಲ್ಬರ್ಗಾ, ಮೈಸೂರು, ಮಂಗಳೂರು, ಬಳ್ಳಾರಿಯಲ್ಲೂ ಇಂತಹುದೇ ಜಾತಿ ಬಲಪ್ರದರ್ಶನವನ್ನು ಕೈಗೊಳ್ಳುವ ಸಿದ್ಧತೆಗಳು ಆರಂಭವಾಗಿವೆ.

ಹುಬ್ಬಳ್ಳಿ ಸಮಾರಂಭದಲ್ಲೆ ಯಡ್ಡಿ ಪಲಾಯನದ ನಿರ್ಧಾರ ಪ್ರಕಟಮಾಡುವ ಸಾಧ್ಯತೆ ಇತ್ತು. ಇದಕ್ಕೆಂದು ಸ್ವತಃ ಯಡಿಯೂರಪ್ಪ 15 ಪುಟದ ಭಾಷಣವನ್ನು ತಯಾರು ಮಾಡಿಕೊಂಡು ಬಂದಿದ್ದರಂತೆ. ಆದರೆ ಸಮಾರಂಭದ ದಿನ ಅವರ ಬೆಂಬಲಿಗರಾದ ಶೋಭಾ ಕರಂದ್ಲಾಜೆ, ಬಸವರಾಜ ಬೊಮ್ಮಾಯಿ, ಸಿ.ಎಂ. ಉದಾಸಿ, ಮುರುಗೇಶ ನಿರಾಣಿ, ಉಮೇಶ ಕತ್ತಿ ಸಂಸದರಾದ ಸುರೇಶ ಅಂಗಡಿ, ಪ್ರಭಾಕರ ಕೋರೆ, ಬ್ಲೂಫಿಲ್ಮ್ ಶಾಸಕ ಸಿ.ಸಿ ಪಾಟೀಲರು ಯಡ್ಡಿಯು ಬಿಜೆಪಿಯಿಂದ ಪಲಾಯನ ಮಾಡುವ ನಿರ್ಧಾರವನ್ನು ಪ್ರಕಟಿಸುವುದು ಬೇಡ ಎಂದರಂತೆ. ಆದರೂ ಯಡಿಯೂರಪ್ಪ ವೇದಿಕೆಯಲ್ಲಿ ಏನು ಹೇಳುತ್ತಾರೋ? ಎಂಬ ಭಯ ಅವರ ಚೇಲಾ ಮಂತ್ರಿ-ಶಾಸಕರನ್ನು ಕಾಡಿತ್ತು.

ಯಡ್ಡಿ ತಯಾರಿಸಿದ್ದ 15 ಪುಟದ ಭಾಷಣವನ್ನು ಆತ ಓದುವುದಕ್ಕೂ ಮುಂಚೆ ಅದರಲ್ಲಿದ್ದ ಮುಖ್ಯ ಅಂಶಗಳು ಬಿಜೆಪಿಯ ರಾಷ್ಟ್ರಾಧ್ಯಕ್ಷ ನಿತಿನ್ ಗಡ್ಕರಿಯ ಕಿವಿಗೆ ತಲುಪುವಂತೆ ಯಡ್ಡಿ ಬೆಂಬಲಿಗರಲ್ಲಿ ಕೆಲವರು ನೋಡಿಕೊಂಡರಂತೆ. ಈ ಸುದ್ದಿ ಕೇಳಿಯೇ ಹೌಹಾರಿದ ಗಡ್ಕರಿ, ಯಡ್ಡಿಗೆ ಫೋನ್ ಮಾಡಿ ಕಾಲಾವಕಾಶ ಕೇಳಿದರಂತೆ. ಆದರೆ ಅದ್ಯಾವುದಕ್ಕೂ ಕ್ಯಾರೆ ಎನ್ನದ ಯಡಿಯೂರಪ್ಪ ರಾಷ್ಟ್ರಾಧ್ಯಕ್ಷರ ಫೋನ್ ಕರೆಯನ್ನು ಕಟ್ ಮಾಡಿ "ನಾನು ನಿರ್ಧಾರದಿಂದ ಹಿಂದೆ ಸರಿಯಲ್ಲ" ಎಂದರಂತೆ. ಆದರೂ ಅವತ್ತು ಯಡ್ಡಿ ತಾನು ತಯಾರಿಸಿದ್ದ ಬಂಡಾಯದ ಭಾಷಣವನ್ನು ಓದಲಿಲ್ಲ, ಆದರೆ ಅದಾದ ಹತ್ತೇ ದಿನಗಳ ನಂತರ ರೆಸಾರ್ಟ್ ರಾಜಕಾರಣ ಮಾಡುವ ಮೂಲಕ ಬಂಡಾಯವೆದ್ದರು.

ದೊಡ್ಡ ನೋಟು, ಫುಲ್ ಊಟ, ಫುಲ್ ಎಣ್ಣೆ

ಯಡ್ಡಿಯ ಹುಟ್ಟುಹಬ್ಬದ ಕಂ ಬಲಪ್ರದರ್ಶನದ ಸಮಾರಂಭದಿಂದ ಸ್ವತಃ ಯಡಿಯೂರಪ್ಪನಿಗೆ ಮತ್ತಾತನ ಹಿಂಬಾಲಕ ಶಾಸಕರಿಗೆ ಲಾಭ ತಂದಿತೋ ಇಲ್ಲವೋ? ಆದರೆ, ಉತ್ತರ ಕರ್ನಾಟಕದ ಆರೇಳು ಜಿಲ್ಲೆಗಳಿಂದ





ಕರೆತಂದಿದ್ದ ಸುಮಾರು 50 ಸಾವಿರಕ್ಕೂ ಹೆಚ್ಚು ಜನರಿಗೆ ಲಾಭ ಆಗಿದೆ. ಹೈಟೆಕ್ ವಾಹನಗಳಲ್ಲಿ ಬಂದ ಜನರು 1000 ರೂ., 500 ರೂ. ನೋಟುಗಳನ್ನು ಜೇಬಿಗಿಳಿಸಿಕೊಂಡಿದ್ದಷ್ಟೇ ಅಲ್ಲ ಅವರೆಲ್ಲರಿಗೆ ಫುಲ್ ಊಟ, ಫುಲ್ ಎಣ್ಣೆ ಕೂಡ ಸಿಕ್ಕಿತು.

ಸಮಾರಂಭದ ನಿಗದಿತ ದಿನಕ್ಕಿಂತ ಒಂದು ವಾರ ಮೊದಲಿನಿಂದ ನೆಹರು ಕ್ರೀಡಾಂಗಣ ಸೇರಿದಂತೆ ಹುಬ್ಬಳ್ಳಿಯ ನಾಲ್ಕೂ ದಿಕ್ಕುಗಳಲ್ಲಿ ಬೃಹದಾಕಾರದ ಕಟೌಟು, ಬ್ರೈಂಡಿಂಗ್ಸ್, ಕಾರ್ಯಕರ್ತರ ವಿಶ್ರಾಂತಿಗಾಗಿ ಟೆಂಟ್‌ಗಳನ್ನು ಹಾಕುವ ತಯಾರಿ ನಡೆದಿತ್ತು. ಸುಮಾರು ಐದು ಕೋಟಿ ರೂಪಾಯಿಗಳನ್ನು ಇಡೀ ಸಮಾರಂಭಕ್ಕೆ ಖರ್ಚು ಮಾಡಲಾಯಿತು. ಕದ್ದ ಹಣದಲ್ಲಿ ಕಳ್ಳನ ಜಾತ್ರೆ ಎಂಬಂತೆ ಈ ಸಮಾರಂಭದ ಉಸ್ತುವಾರಿಯನ್ನು ಹೊತ್ತಿದ್ದ ನೀರಿನ ಮಂತ್ರಿ ಬಸವರಾಜ ಬೊಮ್ಮಾಯಿ, ರಸ್ತೆಯ ಮಂತ್ರಿ ಸಿ.ಎಂ ಉದಾಸಿ, ಕೈಗಾರಿಕಾ ಮಂತ್ರಿ ಮುರುಗೇಶ ನಿರಾಣಿ, ತೋಟಗಾರಿಕಾ ಸಚಿವ ಉಮೇಶ ಕತ್ತಿ, ಮಾಜಿ ಮಂತ್ರಿ ಸಿ.ಸಿ.ಪಾಟೀಲ ಮತ್ತು ಇತರರು ಈ ಸಮಾರಂಭದ ಹೆಸರಲ್ಲಿ ಕೈಗಾರಿಕೋದ್ಯಮಿಗಳಿಂದ, ಗುತ್ತಿಗೆದಾರರಿಂದ, ಅಕ್ರಮ ಬಡ್ಡಿ ಕುಳಗಳಿಂದ, ಹಿರಿಯ ಅಧಿಕಾರಿಗಳಿಂದ ದೊಡ್ಡ ಮಟ್ಟದ ವಸೂಲಿ ನಡೆಸಿದರು. ಈಗ ಶಿವಮೊಗ್ಗದ ಸಮಾವೇಶಕ್ಕೆ ಮತ್ತೆ ಹಣ ವಸೂಲಿ ಶುರುವಾಗಿದೆ.

ತಲೆ ಲೆಕ್ಕಾ ತಲೆಕೆಳಗಾಯಿತು

ಪದವಿಗಾಗಿ ನಡೆದ ಮೊದಲ ಶಾಸಕರ ಬಲ ಪ್ರದರ್ಶನದಲ್ಲಿದ್ದ 70 ತಲೆ ಲೆಕ್ಕ ಈಗ ಉಲ್ಟಾ ಹೊಡೆದಿದೆ. ಹುಬ್ಬಳ್ಳಿ ಸಮಾರಂಭಕ್ಕೂ ಮುನ್ನ ಅದು 38 ಕ್ಕೆ ಕುಸಿದಿತ್ತು. ಹುಬ್ಬಳ್ಳಿಯ ಸಮಾರಂಭದಲ್ಲಿ ವೇದಿಕೆ ಹತ್ತಿದವರಲ್ಲಿ ಅತ್ತ ಯಡ್ಡಿಯ ಪರವೂ ಅಲ್ಲ, ಇತ್ತ ಈಶ್ವರಪ್ಪನ ಪರವೂ ಅಲ್ಲ ಎನ್ನುವಂತಹವರ ಸಂಖ್ಯೆಯೇ ಹತ್ತರ ಮೇಲಿತ್ತು, ಆದರಲ್ಲೂ ಸಚಿವ ಜಗದೀಶ ಶೆಟ್ಟರ್ ಹಾಗೂ ಸಂಸದ ಪ್ರಹ್ಲಾದ್ ಜೋಷಿಯ ಬೆಂಬಲಿಗರು "ಈ ಸಮಾರಂಭ ನಮಗೆ ಸಂಬಂಧಿಸಿದ್ದಲ್ಲ" ಎಂಬಂತೆ ನಡೆದಿಕೊಂಡಿದ್ದನ್ನು ಗಮನಿಸಿದರೆ ಉತ್ತರ ಕರ್ನಾಟಕದ ಎಲ್ಲ ಬಿಜೆಪಿ ಶಾಸಕರು ಯಡಿಯೂರಪ್ಪ ಬೆಂಬಲಿಗರಲ್ಲ ಎಂಬುದನ್ನು ಸ್ಪಷ್ಟಪಡಿಸುವಂತಿತ್ತು.

ಟಿಕೇಟಿಗಾಗಿ ಜೈಕಾರ?


ಹೊರಗೆ 'ಯಡ್ಡಿ ನಮ್ಮ ನಾಯಕ' ಎಂದು ಹೇಳಿಕೊಂಡು ತಿರುಗುತ್ತಿರುವ ಯಡ್ಡಿಯ ಬಹುತೇಕ ಚೇಲಾಗಳಿಗೆ ಒಳಗೊಳಗೇ ಟಿಕೇಟಿನ ಚಿಂತೆ ಕಾಡಹತ್ತಿದೆ. "ಮುಂದಿನ ಚುನಾವಣೆಯಲ್ಲಿ ಕಳಂಕಿತರಿಗೆ ಟಿಕೇಟ್ ನೀಡುವ ಕುರಿತು ಚಿಂತಿಸಬೇಕಿದೆ" ಎಂದು ಯಡ್ಡಿಯ ವೈರಿ ಈಶ್ವರಪ್ಪ ಪದೇ ಪದೇ ಹೇಳುತ್ತಿರುವುದು ಯಡ್ಡಿ ಹಿಂಬಾಲಕರನ್ನು ಗುರಿಯಾಗಿಸಿಕೊಂಡೇ ಎನ್ನುವುದನ್ನ ಒತ್ತಿ ಹೇಳಬೇಕಿಲ್ಲ. ಈಶ್ವರಪ್ಪ ಬೀಸಿದ ಚಾಟಿ ಏಟು ವಿವಿಧ ಹಗರಣಗಳಲ್ಲಿ ಮಿಂದೆದ್ದಿರುವ ಕಟ್ಟಾ ಸುಬ್ರಹ್ಮಣ್ಯ ನಾಯ್ಡು, ಕೃಷ್ಣಯ್ಯ ಶೆಟ್ಟಿ, ಕಿಸ್ ಕುಖ್ಯಾತಿಯ ರೇಣುಕಾಚಾರ್ಯ, ವಿ.ಸೋಮಣ್ಣ, ಮುರುಗೇಶ ನಿರಾಣಿ, ಬ್ಲೂ ಫಿಲ್ಮ್ ಶೂರರಾದ ಲಕ್ಷ್ಮಣ ಸವದಿ ಮತ್ತು ಸಿ.ಸಿ ಪಾಟೀಲರಲ್ಲಿ ಈಗಾಗಲೇ ಛಳಿ ಜ್ವರ ಪ್ರಾರಂಭಿಸಿದೆ.

ಇನ್ನು ಅಧಿಕಾರದ ಆಸೆಗಾಗಿ ತಾವು ನಂಬಿದ್ದ ಸಿದ್ಧಾಂತಕ್ಕೆ ತಿಲಾಂಜಲಿ ಬಿಟ್ಟು, ಚೆಡ್ಡಿ ತೊಟ್ಟಿದ್ದರೂ ಪಕ್ಷದ ಗರ್ಭಗುಡಿಯನ್ನು ಪ್ರವೇಶಿಸಲಾಗದೆ, ಮೂಲ ಬಿ.ಜೆ.ಪಿಗರಿಂದ ಆಗಾಗ ಅಸ್ಪೃಶ್ಯತೆಯನ್ನು ಎದುರಿಸುತ್ತಿರುವ ಖದೀಮ ಮಂತ್ರಿ ಸಿ.ಎಂ.ಉದಾಸಿ, ಬಸವರಾಜ ಬೊಮ್ಮಾಯಿ, ಉಮೇಶ ಕತ್ತಿ ತರಹದವರಿಗೆ ಬರುವ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯ ಬಿ-ಫಾರ್ಮ್ ದಕ್ಕಿಸಿಕೊಳ್ಳುವುದು ಸುಲಭದ ಮಾತಲ್ಲ ಎಂಬುದು ಸ್ಪಷ್ಟಗೊಳ್ಳುತ್ತಿದೆ. ಹೀಗಾಗಿ ಅವರ ನಾಯಕ ಯಡಿಯೂರಪ್ಪ ಬಿಜೆಪಿಯಲ್ಲಿ ಮೂಲೆಗುಂಪಾಗುತ್ತಿರುವುದನ್ನ ಕಣ್ಮುಂದೆ ಕಂಡರೂ, ಅನಿವಾರ್ಯವಾಗಿ ಅವನನ್ನೇ ಹೆಗಲ ಮೇಲೆ ಹೊತ್ತು ಕುಣಿದು ಜೈಕಾರ ಹಾಕುತ್ತಿದ್ದಾರೆ. ಹಾಗೆ ಮಾಡುವ ಮೂಲಕ ತಮ್ಮ ಬಣದ ಶಕ್ತಿ ಉಳಿಸಿಕೊಳ್ಳುವುದು ಅನಿವಾರ್ಯವಾದಂತಾಗಿದೆ. ಹೀಗಾಗಿ ಯಡ್ಡಿಯ ಜನ್ಮದಿನದ ಸಮಾವೇಶಗಳು ಯಡ್ಡಿಯ ಪದವಿ ಸಂಕಟದ ಸಮಾರಂಭವಾದರೆ, ಆತನ ಬೆನ್ನಿಗಿರುವ ಮಂತ್ರಿ- ಶಾಸಕರಿಗೆ ಬಿ-ಫಾರ್ಮ್ ಚಿಂತೆಯ ಸಮಾರಂಭವಾಗಿ ಹೊರಹೊಮ್ಮುತ್ತಿರುವುದೂ ಸುಳ್ಳಲ್ಲ.

ಮಾರ್ಚ್ 31 ರ ಶಿವಮೊಗ್ಗ ಸಮಾವೇಶ ಈ ಪ್ರಹಸನದ ಮುಂದುವರೆದ ಭಾಗವೇ ಆಗಿರುತ್ತದೆ.

• ಹುರಳಿಕುಪ್ಪಿ ವಿನಯ


ಶರಣಾದರು ಶೆಟ್ಟರ್!



ಯಡ್ಡಿ ವಿರೋಧಿ ಗುಂಪಿನ ನಾಯಕ ಎಂದೇ ಗುರುತಿಸಿಕೊಂಡಿದ್ದ ಮಂತ್ರಿ ಜಗದೀಶ ...ಶೆಟ್ಟರ್ ಈಗ ಅದೇ ಯಡಿಯೂರಪ್ಪನ ಮುಂದೆ ಶರಣಾಗಿದ್ದಾರೆ. ಪಕ್ಷದಲ್ಲಿ ಯಡ್ಡಿಯ ...ನಂತರದ ಸ್ಥಾನದಲ್ಲಿರಬೇಕಾದ ಜಗದೀಶ ಶೆಟ್ಟರ್ ಅವರನ್ನು ಯಡ್ಡಿ ಸರಿಯಾಗಿ ಪಳಗಿಸಿದ್ದಾರೆ. ...ಪಕ್ಷದ ಅಧ್ಯಕ್ಷ ಸ್ಥಾನ, ಮಂತ್ರಿಗಿರಿ, ಆನಂತರ ಮುಖ್ಯಮಂತ್ರಿ ಗಾದಿ - ಹೀಗೆ ಎಲ್ಲವೂ ...ಶೆಟ್ಟರ್ ಕೈತಪ್ಪುವಂತೆ ಮಾಡಿದ್ದ ಅದೇ ಯಡಿಯೂರಪ್ಪನನ್ನು, ಈಗ ಶೆಟ್ಟರ್ ಅಪ್ಪಿಕೊಳ್ಳುತ್ತಿದ್ದಾರೆ.

ಯಡ್ಡಿ ಮುಂದೆ ಯಾಕೆ ಶೆಟ್ಟರ್ ಸೋಲೊಪ್ಪಿಕೊಂಡರು ಎಂಬ ಪ್ರಶ್ನೆ ಜನರನ್ನು ...ಕಾಡುತ್ತಿದೆ. ಏಕೆಂದರೆ ಜಗದೀಶ ಶೆಟ್ಟರ್ ಅಷ್ಟು ಸುಲಭವಾಗಿ ಸೋಲೊಪ್ಪಿಕೊಳ್ಳುವ ರಾಜಕಾರಣಿಯಲ್ಲ, ಆತ ...ಯಡಿಯೂರಪ್ಪನನ್ನು ಭೀರುಸಬಹುದಿದ್ದರೂ, ತನ್ನ ವಿರೋಧಿಗಳನ್ನು ನಿಧಾನವಾಗಿ ಬೇರು ಸಮೇತ ಕಿತ್ತು ಹಾಕುವ ...ಚಾಣಾಕ್ಷ. ಹುಬ್ಬಳ್ಳಿ ಸಮಾರಂಭದ ಪೂರ್ವಭಾವಿ ಸಭೆಯಲ್ಲಿ ಕಾಟಾಚಾರಕ್ಕೆ ಭಾಗವಹಿಸಿದ್ದ ಶೆಟ್ಟರ್ ಆ ಸಮಾರಂಭದ ...ದಿನದಂದು ಕ್ಷಣಾರ್ಧದಲ್ಲಿ ವೇದಿಕೆಯಿಂದ ಮಾಯವಾಗಿದ್ದರು. ಅಷ್ಟೇ ಅಲ್ಲದೆ ಇಡೀ ಸಮಾರಂಭದ ಉಸ್ತುವಾರಿಯಿಂದ ...ದೂರವಾಗಿ ಉಳಿದ ಶೆಟ್ಟರ್ ತನ್ನ ಬೆಂಬಲಿಗ ಸಂಸದ ಪ್ರಹ್ಲಾದ ಜೋಷಿ ಸೇರಿದಂತೆ ತನ್ನ ಪರವಿರುವ ಶಾಸಕರು ...ಮತ್ತು ಕಾರ್ಯಕರ್ತರು ಕೂಡ ದೂರ ಉಳಿಯುವಂತೆ ನೋಡಿಕೊಂಡಿದ್ದರು. ಇದನ್ನೆಲ್ಲ ನೋಡಿ 'ಹೊರಗೆ ಶರಣು, ...ಒಳಗೆ ಸೆಡ್ಡು' ಎಂಬ ಧೋರಣೆ ಶೆಟ್ಟರದ್ದಿರಬಹುದೇ ಎಂದು ಜನ ಯೋಚಿಸುವಂತಾಗಿದೆ.

ತೊಡೆ ತಟ್ಟಿದ ಜಾರಕಿಹೊಳಿ



ಬಾಲಚಂದ್ರ ಜಾರಕಿಹೊಳಿ ಯಡ್ಡಿ ಮತ್ತವನ ಟೀಂ ವಿರುದ್ಧ ತೊಡೆ ತಟ್ಟಿ ನಿಂತಿದ್ದಾರೆ. ಗೋಕಾಕ್ ಪಟ್ಟಣದಲ್ಲಿ ಜರುಗಿದ ಲಿಂಗಾಯತ ಪಂಚಮಸಾಲಿ ಸಮಾವೇಶಕ್ಕೆ ಹಣದ ಹೊಳೆಯನ್ನೇ ಹರಿಸುವ ಮೂಲಕ ಪಂಚಮಸಾಲಿಗಳನ್ನು ಯಡ್ಡಿಯ ವಿರುದ್ಧ ಎತ್ತಿಕಟ್ಟುವ ಮೊದಲ ಪ್ರಯತ್ನದಲ್ಲಿ ಸಕ್ಸಸ್ ಆಗಿದ್ದಲ್ಲದೇ ಯಡ್ಡಿಯ ಪದವಿ ಕನಸಿಗೂ ತಣ್ಣೀರು ಬಿಟ್ಟಿದ್ದಾರೆ ಜಾರಕಿಹೊಳಿ.

ಜಾರಕಿಹೊಳಿಯ ತಂತ್ರಕ್ಕೆ ಪ್ರತಿ ತಂತ್ರವಾಗಿ ಯಡ್ಡಿ ಬಣ ಹುಟ್ಟುಹಬ್ಬದ ಅಭಿನಂದನಾ ಸಮಾರಂಭವನ್ನು ಹುಟ್ಟುಹಾಕಿ ಕೋಟ್ಯಂತರ ರೂಪಾಯಿ ಸುರಿದು 'ನಾವೂ ಸಕ್ಸಸ್ ಆದೆವು' ಎಂದು ಹೇಳಿಕೊಳ್ಳುವಷ್ಟರಲ್ಲೇ ಬಾಲಚಂದ್ರ ಜಾರಕಿಹೊಳಿ ಬಿಜಾಪುರದಲ್ಲಿ ಹಿಂದುಳಿದ ದಲಿತರ ಸಮಾವೇಶವನ್ನ ಅದ್ದೂರಿಯಾಗಿ ಆಚರಿಸುವ, ಐದು ಲಕ್ಷ ಜನರನ್ನು ಸೇರಿಸುವ ಸುದ್ದಿಯೊಂದನ್ನು ತೇಲಿಬಿಟ್ಟಿದ್ದಾರೆ. ಇದರಿಂದ ಮತ್ತಷ್ಟು ಬೆದರಿರುವ ಯಡ್ಡಿ ಟೀಂ ಶಿವಮೊಗ್ಗ, ಗುಲ್ಬರ್ಗಾ, ಮೈಸೂರು, ಮಂಗಳೂರು ಮತ್ತು ಬಳ್ಳಾರಿಯಲ್ಲೂ ಅದಕ್ಕಿಂತ ಹೆಚ್ಚು ಜನರನ್ನು ಸೇರಿಸುವ ಹಣ ಕೊಟ್ಟಿದೆಯಂತೆ. ಒಟ್ಟಿನಲ್ಲಿ ಈ ಎರಡು ಬಣಗಳ ಜಗಳದಲ್ಲಿ ಸಮಾವೇಶದಲ್ಲಿ ಭಾಗವಹಿಸುವ ಜನರಿಗಂತೂ ಕರೆನ್ಸಿ ಜೊತೆಗೆ ಮನೋರಂಜನೆ ಕೂಡ ಸಿಗುವುದು ಖಚಿತ.

ಕರ್ನಾಟಕದ ಜನತೆಗೆ ಇದು ಸಿಹಿ ಸುದ್ದಿ.

ಎಲ್ಲಾ ರೀತಿಯಲ್ಲೂ ಗಲೀಜು ಎನಿಸಿಕೊಂಡಿದ್ದರೂ ಸಹ ಮಧ್ಯಂತರ ಚುನಾವಣೆಗಳಲ್ಲಿ ಸುದೇಸುದೇ ಗೆಲ್ಲುತ್ತಾ ಬಂದಿದ್ದ ಬಿಜೆಪಿ ಇದೇ ಮೊದಲ ಬಾರಿಗೆ ಮುಖಭಂಗ ಅನುಭವಿಸಿದೆ.

ಚಿಕ್ಕಮಗಳೂರು-ಉಡುಪಿ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಸೋತು ಕಾಂಗ್ರೆಸ್‌ನ ಸಜ್ಜನ ಜಯಪ್ರಕಾಶ್ ಹೆಗ್ಡೆ ಗೆದ್ದಿದ್ದಾರೆ.

ಈ ಗೆಲುವಿನ ಅಂತರ ನಲವತ್ತಾರು ಸಾವಿರ ಓಟುಗಳೆಂಬುದ ಸಂಗತಿ ಹಾಗೂ ಈ ಕ್ಷೇತ್ರದಿಂದ ಗೆದ್ದಿದ್ದ ಹಾಲಿ ಸಿಎಂ ಸದಾನಂದ ಗೌಡ ಈ ಹಿಂದೆ ಕೇವಲ 27 ಸಾವಿರ ಲೀಡ್ ಮಾತ್ರ ಪಡೆದಿದ್ದರೆಂಬುದು ಮುಖ್ಯವಾದ ವಿಚಾರವಾಗಿದೆ.

ಈ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಕಾಪು, ಶೃಂಗೇರಿ, ಮೂಡಿಗೆರೆ, ತರೀಕೆರೆ, ಕುಂದಾಪುರ, ಉಡುಪಿ, ಚಿಕ್ಕಮಗಳೂರು ಹಾಗೂ ಕಾರ್ಕಳಗಳ ಪೈಕಿ ತರೀಕೆರೆ ಹೊರತುಪಡಿಸಿದರೆ ಉಳಿದೆಲ್ಲಾ ಏಳು ವಿಧಾನಸಭಾ ಕ್ಷೇತ್ರಗಳಲ್ಲೂ ಬಿಜೆಪಿ ಶಾಸಕರೇ ಗೆದ್ದು ಬಂದಿದ್ದರು. ಆದರೂ ಇಲ್ಲೆಲ್ಲಾ ಕಾಂಗ್ರೆಸ್‌ನ ಜೆಪಿ ಗಣನೀಯ ಲೀಡ್ ಪಡೆದಿರುವುದು ಕರ್ನಾಟಕದ ನಾಳಿನ ರಾಜಕೀಯದ ದಿಕ್ಸೂಚಿಯಂತೆ ಕಾಣುತ್ತಿದೆ. ಅಷ್ಟೇ ಅಲ್ಲ ಸಂಘ ಪರಿವಾರದ ಭದ್ರಕೋಟೆಯಂತಿದ್ದ ಮಲೆನಾಡು ಹಾಗೂ ಕರಾವಳಿ ಭಾಗದಲ್ಲೇ ಬಿಜೆಪಿ ಹೀನಾಯವಾಗಿ ಸೋತಿರುವುದು ನಾಳಿನ ಟ್ರೆಂಡ್ ಅನ್ನು ತೋರಿಸುವಂತಿದೆ. ಇಲ್ಲಿ ಬಿಜೆಪಿ ಸೋಲಿಗೆ ನಾನಾ ಕಾರಣಗಳಿವೆ. ಶಾಸಕ ರಘುಪತಿ ಭಟ್ಟನ ಪತ್ನಿ ಪದ್ಮಾವತಿಯ ಹತ್ಯೆ, ಸಿ.ಟಿ. ರವಿಯ ಭೂಕಬಳಿಕೆ, ಹಾಲಾಡಿ ಶ್ರೀನಿವಾಸ ಶೆಟ್ಟಿಯ ಬೂಟಾಟಿಕೆ, ರೇವ್ ಪಾರ್ಟಿ ಹಗರಣ, ಸದನದಲ್ಲಿ ಬ್ಲೂಫಿಲ್ಸ್ ವೀಕ್ಷಣೆಯಿ ಪ್ರತಿದಿನದ ಭಿನ್ನಮತೀಯ ರಗಳೆ, ಮಿತಿಯಿರದ ಭ್ರಷ್ಟಾಚಾರ, ಕರಾವಳಿಯಲ್ಲಿ ನಿರಂತರ ಅಶಾಂತಿ... ಇವೆಲ್ಲಾ ಜನ ಸಾಮಾನ್ಯರಲ್ಲಿ ಬಿಜೆಪಿ ಬಗ್ಗೆ ತಿರಸ್ಕಾರ ಮೂಡಿಸಿದ ಫಲವೇ ಈಗಿನ ಸೋಲಾಗಿದೆ.

ಈ ಸೋಲು RSSಗೆ, ಸದಾನಂದ ಗೌಡರಿಗೆ, ಅಷ್ಟೇ ಯಾಕೆ ಬೀದಿ ಬಸವನಂತೆ ಆಡುತ್ತಿರುವ ಯಡ್ಡಿಗೂ ಕಪಾಳಕ್ಕೆ ಹೊಡೆದಂತಾಗಿದೆ. ಈ ಮೂವರ ಪೈಕಿ ಬಿಜೆಪಿ ಸೋಲನ್ನು ಹೃದಯಪೂರ್ವಕವಾಗಿ ಬಯಸಿದ್ದು ಯಡ್ಡಿ ಮಾತ್ರ.

"ನೋಡಿದಿರಾ, ನಾನು ಪ್ರಚಾರಕ್ಕೆ ಹೋಗಲಿಲ್ಲಾಂದ್ರೆ ಬಿಜೆಪಿ ಗತಿ ಏನಾಗುತ್ತೆ?" ಎಂದು ಈ ಸೋಲನ್ನು ಯಡ್ಡಿ ವಿಶ್ಲೇಷಿಸುತ್ತಿದ್ದಾರೆ. ಆದರೆ ವಾಸ್ತವ ಸಂಗತಿ ಏನೆಂದರೆ ಒಂದು ವೇಳೆ ಯಡ್ಡಿ ಪ್ರಚಾರ ಮಾಡಿದಿದ್ದರೂ ಈ ಬಾರಿ



ಜೇಟ್ಲಿ-ಯಡ್ಡಿ 500 ಕೋಟಿಯ ಡೀಲ್!


ಕುಣಿದ ಯಡ್ಡಿ ಮಣಿಯದ ಹೈಕಮಾಂಡ್



• ರಾ. ಸೋಮನಾಥ್

ಆಯ್ತು, ಸುಪ್ರೀಂಕೋರ್ಟಿನ ಗ್ರೀನ್ ಬೆಂಚ್ ತೀರ್ಪಿನವರೆಗೂ ಕಾಯ್ತೀನಿ. ಸಿಬಿಐ ತನಿಖೆ ಆಗಲೇಬೇಕು ಅಂತ ಕೋರ್ಟು ಆದೇಶ ಮಾಡಿದ್ರೆ ಆದ್ರೆ ನನ್ನ ಬದಲು ಶೆಟ್ಟರ್ ಸಿಎಂ ಆಗಲಿ. ಯಾವುದೇ ಕಾರಣಕ್ಕೂ ಸದಾನಂದ ಗೌಡ ಮುಂದುವರಿಯಕೂಡದು. ಪಕ್ಷ ಕಟ್ಟಿದೋನು ನಾನು. ಜನಾ ಓಟು ಕೊಟ್ಟಿರೋದು ನನಗೆ. ಏನು ಮಾಡಬೇಕು ಅನ್ನೋದು ನನಗೆ ಗೊತ್ತಿದೆ. ಈ ಗೌಡನ್ನ ಹೀಗೆ ಮುಂದುವರಿಯಲು ಬಿಟ್ಟರೆ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಎರಡಂಕಿಯಷ್ಟೂ ಎಂಪಿ ಸೀಟುಗಳು ಗಿಟ್ಟಲ್ಲ. ಕೇಂದ್ರದಲ್ಲಿ ಎನ್‌ಡಿಎ ಅಧಿಕಾರ ಹಿಡಿಯಬೇಕು ಅಂದ್ರೆ ಕರ್ನಾಟಕದಿಂದ ಕನಿಷ್ಠ ಇಪ್ಪತ್ತು ಸೀಟಾದರೂ ಬಿಜೆಪಿ ಗೆಲ್ಲಬೇಕು ಮತ್ತು ಕರ್ನಾಟಕದಿಂದ ಕಮ್ಮಿಯೆಂದರೂ 500 ಕೋಟಿ ರೂಪಾಯಿಗಳಷ್ಟು ಎಲೆಕ್ಷನ್ ಫಂಡು ಪಂಪ್ ಆಗಬೇಕು. ನೀವೇ ಹೇಳಿ.... ಈ ಸದಾನಂದ ಗೌಡ, ಈಶ್ವರಪ್ಪ ಸೇರಿಕೊಂಡು ತಿಪ್ಪರಲಾಗ ಹಾಕಿದ್ರೂ ಇದರ ಅರ್ಧದಷ್ಟಾದರೂ ಪೂರೈಸಲು ಸಾಧ್ಯವಾ.....?


ಹೈಕಮಾಂಡ್ ವರಿಷ್ಠ ಅರುಣ್ ಜೇಟ್ಲಿಯವರ ಫೋನ್ ಕರೆಗೆ ಇತ್ತ ನೆಲಮಂಗಲದ ಗೋಲ್ಡನ್ ಪಾಮ್ ರೆಸಾರ್ಟಿನಲ್ಲಿ ಕೂತು ಯಡ್ಡಿ ಮಂಗಳವಾರ ಸಂಜೆ ಉತ್ತರಿಸಿದ ದಾಟಿಯಿದು. ಬುಧವಾರದ ಬಜೆಟ್ ಮಂಡನೆಗಿನ್ನು ಕೆಲವೇ ಗಂಟೆಗಳು ಬಾಕಿಯಿರುವಾಗ ಯಡ್ಡಿಯ ಬಾಯಿಂದ ಇಂಥ ಮಾತುಗಳು ಉದುರುತ್ತವೆಯೆಂದರೆ ಅಲ್ಲಿಗೆ ಕರ್ನಾಟಕ ಬಿಜೆಪಿಗಳ ಒಳಜಗಳ ಸದ್ಯಕ್ಕೆ ಮುಗಿಯಲಾರದು ಎಂಬುದು ಖಚಿತ!



ತನ್ನ ಮುಖ್ಯಮಂತ್ರಿ ಗಾದಿ ಉಳಿಸಿಕೊಳ್ಳಲು ಏನೆಲ್ಲಾ ಹರಸಾಹಸ ಮಾಡಬೇಕೋ ಎಲ್ಲವನ್ನೂ ಮಾಡಿ ಮುಗಿಸಿದ ಸದಾನಂದ ಗೌಡಗೆ ಹುಲ್ಲುಕಡ್ಡಿಯ ಆಸರೆಯಾಗಿ ಉಳಿದದ್ದು ಸುಪ್ರೀಂಕೋರ್ಟಿನ ನ್ಯಾ.ಮೂ. ಕಪಾಡಿಯಾರ ಹಸಿರು ಪೀಠವೊಂದೆ. ಬಳ್ಳಾರಿಯಲ್ಲಿ ನಡೆದ ಗಣಿಲೂಟ ಮತ್ತು ಜಿಂದಾಲ್ ಖದೀಮರಿಂದ ಪ್ರೇರಣಾ ಟ್ರಸ್ಟಿಗೆ ಪಾವತಿಯಾದ ಮೂವತ್ತು ಕೋಟಿಯ ಲಂಚದ ಕುರಿತಂತೆ ಕೇಂದ್ರ ಉನ್ನತಾಧಿಕಾರ ಸಮಿತಿಯ ಮುಖ್ಯಸ್ಥ ಪಿ.ವಿ. ಜಯಕೃಷ್ಣನ್ ಏನಾದರೂ ಸಿಬಿಐ ತನಿಖೆಯ ಅಗತ್ಯವಿಲ್ಲ ಎಂದು ವರದಿ ಕೊಟ್ಟು ಬಿಟ್ಟಿದ್ದರೆ ಈ ಸಲದ ಬಜೆಟ್ ನಿಸ್ಸಂಶಯವಾಗಿ ಯಡ್ಡಿಯ ಪಾಲಾಗುತ್ತಿತ್ತು. ಇಲ್ಲಿ ನಿಗೂಢ ಸೂತ್ರವೊಂದು ತನ್ನಿಚ್ಛೆಯಂತೆ ಗೊಂಬೆ ಆಡಿಸುತ್ತಿರಬೇಕು. ಹಾಗೊಮ್ಮೆ ಸಿಬಿಐ ತನಿಖೆಯ ಅನಿವಾರ್ಯತೆಯಿದೆ ಎಂದು ಸಿಇಸಿ ಶಿಫಾರಸ್ಸು ವರದಿ ಕೊಟ್ಟುಬಿಟ್ಟರೆ ಶೆಟ್ಟರ್ ಮುಖ್ಯಮಂತ್ರಿಯಾಗುವುದು ಶತಸ್ಸಿದ್ಧ. ಸಿಬಿಐ ತನಿಖೆ ಬೇಡ ಎಂದಾದರೆ ಯಡ್ಡಿ ಮುಖ್ಯಮಂತ್ರಿಯಾಗುವುದು ಪಕ್ಕಾ.


ಆದರೆ ಸಿಇಸಿ ಇದ್ಯಾವುದನ್ನೂ ಮಾಡುತ್ತಿಲ್ಲ, ವಿನಾಕಾರಣ ಟೈಮ್‌ಪಾಸ್ ಮಾಡುತ್ತಿದೆ. ಕಳೆದ ಶುಕ್ರವಾರದ ಹೊತ್ತಿಗೆ ಸಿಬಿಐ ತನಿಖೆಗೆ ವಹಿಸುವಂತೆ ಒತ್ತಾಯಿಸಿ ಸಿಇಸಿ ತನ್ನ ವಾದವನ್ನು 'ಹಸಿರುಪೀಠ'ದ ಮುಂದಿಡುತ್ತದೆಯೆಂದೇ ಸದಾನಂದ ಗೌಡ ಖುಷಿಯಾಗಿದ್ದರು. ಆದರೆ ಹಾಗಾಗಲಿಲ್ಲ, ಜಿಜ್ಞಾಸೆ ಈ ವಾರಕ್ಕೂ ಮುಂದುವರಿಯಿತು. ಒಂದೆಡೆ ಸಿಇಸಿಯ ಸಿಬಿಐ ಗುಮ್ಮನ ಭಯವಾದರೆ ಮತ್ತೊಂದೆಡೆ ಸದಾನಂದ ಗೌಡರ ಘಾತದ ದಾವಾನಿಲ. ಇನ್ನು ತಡಮಾಡಿದರೆ ಎಲ್ಲಿ ತನ್ನ ಆಧಿಪತ್ಯದ ಅವಸಾನವಾಗುತ್ತೋ ಎಂದು ಸದಾನಂದ ಗೌಡರನ್ನು ಇಳಿಸುವುದೊಂದೇ ಗುರಿಯಾಗಿಸಿಕೊಂಡ ಯಡ್ಡಿ ಶೆಟ್ಟರ್ ಜೊತೆ ರಾಜಿಯಾದರು. ಹುಬ್ಬಳ್ಳಿಯಲ್ಲಿ ಸಮಾವೇಶ ನಡೆಸಿ ಸದಾನಂದ ಗೌಡರಿಗೆ ಧಿಕ್ಕಾರ ಕೂಗಿಸಿ ಲಿಂಗಾಯತರ ಆಕ್ರೋಶಕ್ಕೆ ಅನುವು ಮಾಡಿಕೊಟ್ಟರು. ಅಲ್ಲಿಂದ ನೇರವಾಗಿ ದೆಹಲಿಗೆ ಹೋಗಿ ಅನಂತ್‌ಕುಮಾರ್ ಕಾಲಿಗೆ ಬಿದ್ದರು. ಉಳಿದದ್ದು ಬಜೆಟ್ ಮಂಡನೆಯ ಹಣಕಹಳೆಯೊಂದೇ.

ಇದಕ್ಕೆಂದು ಯಡ್ಡಿ ಆಯ್ದುಕೊಂಡಿದ್ದು ನೆಲಮಂಗಲದ ಗೋಲ್ಡನ್ ಪಾಮ್ ರೆಸಾರ್ಟನ್ನು. ಕರಂದ್ಲಾಜೆ, ಬೊಮ್ಮಾಯಿ, ಸೋಮಣ್ಣ, ರೇಣುಕಾಚಾರ್ಯ, ಉದಾಸಿ, ಬೆಳಮಗಿ, ಕತ್ತಿ, ನಿರಾಣಿ, ಶೆಟ್ಟರ್ ಮುಂತಾದವರು ಜಮಾಯಿಸಿದ್ದ ರೆಸಾರ್ಟ್ ಹೊಕ್ಕಿಕೊಂಡು ಅಲ್ಲಿಂದಲೇ ಹೈಕಮಾಂಡ್ ವಿರುದ್ಧ ತೊಡೆತಟ್ಟತೊಡಗಿದರು. ಅತ್ತ ದೆಹಲಿಯಲ್ಲಿ ಗಡ್ಕರಿ ಮತ್ತು ಜೇಟ್ಲಿಯನ್ನು ಮೊದಲೇ ಪಳಗಿಸಿಕೊಂಡಾಗಿತ್ತು. ಬಹುಶಃ ಸುಪ್ರೀಂಕೋರ್ಟ್‌ನ ಹಸಿರುಪೀಠದ ಭೀತಿ ಇಲ್ಲದೆ ಹೋಗಿದ್ದರೆ ಜೇಟ್ಲಿ ಸೋಮ ವಾರದ ಹೊತ್ತಿಗೇ ಯಡ್ಡಿ ಪರ ವಕಾಲತ್ತು ವಹಿಸಿಬಿಡುತ್ತಿದ್ದರು.



ಮುಂಬರುವ ಚುನಾವಣೆಯಲ್ಲಿ ಎನ್‌ಡಿಎ ಅಧಿಕಾರ ಹಿಡಿಯಬೇಕೆಂದರೆ ಕರ್ನಾಟಕದಿಂದ ಕನಿಷ್ಠ 20 ಸೀಟಾದರೂ ಗೆಲ್ಲಬೇಕೆಂಬ ಯಡ್ಡಿ ವಾದವನ್ನು ಒಂದು ಹಂತದಲ್ಲಿ ಸುಷ್ಮಾ, ರಾಜನಾಥ್, ವೆಂಕಯ್ಯ ನಾಯ್ಡು ಥರದವರೂ ಒಪ್ಪಿಕೊಂಡಾಗಿತ್ತು. ಅನಂತ್‌ಕುಮಾರ್ ಹೇಳಿಕೇಳಿ ಅಡ್ವಾನಿಯ ಮಾನಸಪುತ್ರ! ಯಡ್ಡಿಯೇ ಕಾಲಿಗೆ, ಬಿದ್ದು ಅಂಗಲಾಚಿದ ಮೇಲೆ ಮೆತ್ತಗಾದ ಅನಂತ್ ತನ್ನ 'ತೀರ್ಥರೂಪು' ಪಿತೃಮೂರ್ತಿಯಾದ ಅಡ್ವಾನಿಯನ್ನು ಒಂದು ಹಂತದಲ್ಲಿ ಯಡ್ಡಿ ವಿರುದ್ಧ ತಣ್ಣಗಾಗಿಸಿಬಿಟ್ಟರು.

ಅಲ್ಲಿಗೆ ಯಡ್ಡಿಯ ಸಿಎಂ ಪಟ್ಟದ ದಾರಿಯ ಕಲ್ಲು ಮುಳ್ಳುಗಳೆಲ್ಲ ಒಂದೊಂದಾಗಿ ನಿವಾರಣೆಗೊಂಡಾಗಿತ್ತು. ಬುಧವಾರದ ಬಜೆಟ್ ಮಂಡನೆಗಿನ್ನು ಕೇವಲ 16 ಗಂಟೆ ಬಾಕಿಯಿತ್ತು, ಗೋಲ್ಡನ್ ಪಾಮ್ ರೆಸಾರ್ಟನಲ್ಲಿ ನಾಲ್ಕು ಡಜನ್ ಶಾಸಕರ ದಂಡೂ ಜಮಾಯಿಸಿತ್ತು, ಉಳಿದದ್ದು ಹೈಕಮಾಂಡಿನ ಗ್ರೀನ್ ಸಿಗ್ನಲ್ ಮಾತ್ರ. ಈ ಹಂತದಲ್ಲೇ ಅರುಣ್ ಜೇಟ್ಲಿಯ ಕರೆ ಬಂದಿದೆ. ಎಲ್ಲಾ ಅಳೆದು ತೂಗಿ ಲೆಕ್ಕಹಾಕಿಯೇ ಜೇಟ್ಲಿ ಹೇಳಿದ್ದರು. ಅದಕ್ಕೂ ಮುನ್ನ ಅಡ್ವಾನಿಯ ಜೊತೆ ಕೂತು ಜೇಟ್ಲಿ ಸುದೀರ್ಘವಾಗಿ



ಚರ್ಚಿಸಿದರು. ಆಗ ಹೈಕಮಾಂಡ್ ವರಿಷ್ಠರಾದ ನಾಯ್ಡು ಸುಷ್ಮಾ, ರಾಜನಾಥ್, ಗಡ್ಕರಿ ಮತ್ತೆ ಜೇಟ್ಲಿ ಕೂತು ಸಾಧ್ಯಾಸಾಧ್ಯತೆ ಕುರಿತು ಸಮಾಲೋಚಿಸಿದರು. ಎತ್ತಿಂದೆತ್ತ ಲೆಕ್ಕ ಹಾಕಿದರೂ ಉಳಿಯುವ ಒಂದೇ ಪ್ರಶ್ನೆಯೆಂದರೆ ಯಡ್ಡಿಯನ್ನೇನಾದರೂ ಮತ್ತೆ ಮುಖ್ಯಮಂತ್ರಿ ಮಾಡಿದಾಕ್ಷಣ ಸುಪ್ರೀಂ ಕೋರ್ಟ್‌ಗೆ ಸಿಬಿಐ ತನಿಖೆಯ ಅನಿವಾರ್ಯತೆ ಕುರಿತ ಸಿಇಸಿ ವರದಿ ಸಲ್ಲಿಸಿಬಿಟ್ಟರೆ ಬಿಜೆಪಿ ಪಾಲಿಗೆ ಅದಕ್ಕಿಂತ ದೊಡ್ಡ ಮುಖಭಂಗ ಉಂಟೆ?

ಅಲ್ಲಿಗೆ ಯಡ್ಡಿಯ ಮುಖ್ಯಮಂತ್ರಿ ಆಕಾಂಕ್ಷೆಯೆಂಬುದು ಸಿಇಸಿಯ ವರದಿಯ ಜೊತೆ ಕೊಂಡಿಹಾಕಿಕೊಂಡಿತ್ತು!

ಯಾರಿಗೂ ಅರ್ಥವಾಗದ ಒಂದು ಪ್ರಶ್ನೆಯೆಂದರೆ ಸಿಇಸಿ ಏಕೆ ಈ ಬಗ್ಗೆ ನಿಧಾನಿಸುತ್ತಿದೆ? ಸಿಬಿಐ ತನಿಖೆ ಬೇಕೆಬೇಡವೇ ಎಂಬ ಬಗ್ಗೆ ಏಕೆ ಸ್ಪಷ್ಟ ನಿರ್ಧಾರ ಪ್ರಕಟಿಸುತ್ತಿಲ್ಲ?

ಈ ಪ್ರಶ್ನೆ ದೊಡ್ಡದಾದಂತೆಲ್ಲ ಬಿಜೆಪಿ ವರಿಷ್ಠರಿಗೆ ಅನುಮಾನ ಶುರುವಾಗಿತ್ತು, ಅದು ಕೇಂದ್ರದ ಕಾಂಗ್ರೆಸ್ ಹೈಕಮಾಂಡ್ ಆಡಿಸುತ್ತಿರುವ ಬುಗುರಿಯಾಟವಿರಬಹುದೆಂಬ ಶಂಕೆ. ಯಡ್ಡಿಯೇನಾದರೂ ಮುಖ್ಯಮಂತ್ರಿಯಾಗಿಬಿಟ್ಟರೆ ಕೇಂದ್ರದಲ್ಲಿ ಬಿಜೆಪಿಯನ್ನು ಹಣಿಯಲು ಯಡ್ಡಿಯ ಮೇಲೆ ಸಿಬಿಐ ಛೂಬಿಡುವುದು. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ವಿರುದ್ಧ ಬಿಜೆಪಿಗಿರುವ ಒಂದೇ ಒಂದು ಅಸ್ತ್ರವೆಂದರೆ ಅದು ಭ್ರಷ್ಟಾಚಾರ. ಹೇಗೂ ಎನ್‌ಡಿಎಗೆ ಭ್ರಷ್ಟಾಚಾರದ ಹೊರತಾಗಿ ಕಾಂಗ್ರೆಸ್ ವಿರುದ್ಧ ಬೇರೆ ಅಸ್ತ್ರಗಳಿಲ್ಲ. ಈಗೇನಾದರೂ ಸಿಇಸಿ ಸಿಬಿಐ ತನಿಖೆಗೆ ಒತ್ತಾಯಿಸಿ ವರದಿ ಮಂಡಿಸಿತೆಂದರೆ ಯಡ್ಡಿ ಮುಖ್ಯಮಂತ್ರಿಯಾಗುವುದು ಕಷ್ಟ.

ಯಿ ಸುನೀಲ್ ಕುಮಾರ್ ಗೆಲ್ಲುತ್ತಿರಲಿಲ್ಲ. ಮತದಾರರು ಜಾಸ್ತಿ ಇರುವ ಕಡೂರು, ತರೀಕೆರೆ, ಗಳೂರು ಟೌನ್ ಏರಿಯಾಗಳಲ್ಲಿ ಲಿಂಗಾಯತ ರರು ಈ ಬಾರಿ ಬಿಜೆಪಿ ದಾಗೇನೂ ಓಟು ಂತೆ ಕಾಣುತ್ತಿಲ್ಲ. ಅಂದರೆ ಅಧಿಕಾರ ಸಿಗಲಿ, ಲಿಂಗಾಯತರು ದು ದೊಡ್ಡ ವೆಂಬಂತೆ ಸಲಾರರು ಎಂಬುದನ್ನು ತೋರಿಸುತ್ತಿದೆ.

ನ್ನು ಆರ್‌ಎಸ್‌ಎಸ್‌ನ ಬಿಡಿ ಲಿಗರೂ ಸಹ ಸೇಲಾಗಿ ಬಿಜೆಪಿ ಜೊತೆ ಎಂಬುದನ್ನು ಈ ಫಲಿತಾಂಶ ಸುತ್ತಿದೆ. ಜೆಡಿಎಸ್ ಬವ 70 ಸಾವಿರ ಓಟುಗಳು ಕಡಿಮೆ ಏನಲ್ಲ. ಖ್ಯೆಯನ್ನು ವಿಧಾನಸಭಾ ಕ್ಷೇತ್ರವಾರು ವಿಭಜಿಸಿ ದರೆ ಮುಂದಿನ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ದಳಕ್ಕೆ ಲಾಭವಾಗುವ ಸಾಧ್ಯತೆ ಕಾಣುತ್ತಿದೆ.

ಚುನಾವಣಾ ಫಲಿತಾಂಶ ನಿಜಕ್ಕೂ ದಾರಿ ದೀಪವಾಗಬೇಕಿರುವುದು ಕಾಂಗ್ರೆಸ್‌ಗೆ. ಕೋಮುವಾದಿಗಳ ವಿರುದ್ಧ ಒಗ್ಗಟ್ಟಿನಿಂದ ನಿಂತು ಹೋರಾಡುವುದು, ಯೋಗ್ಯ ಅಭ್ಯರ್ಥಿಯನ್ನು ಕಣಕ್ಕಿಳಿಸುವುದು, ಬಿಜೆಪಿಯ ದುರಾಡಳಿತದ ಬಗ್ಗೆ ಜನ ರಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನು ಕಾಂಗ್ರೆಸ್ ಸರಿಯಾಗಿ ಮಾಡಿದ್ದೇ ಆದರೆ.....




ಈಗ ಶುರುವಾಗಿರುವ ಬಿಜೆಪಿಯ ಸೋಲನ್ನು ನಾಳಿನ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಸಂಪೂರ್ಣ ಸೋಲನ್ನಾಗಿ ಮಾಡಿಯೇ ಬಿಡಬಹುದು.

ಅಂದ ಹಾಗೆ,

ಕಾಂಗ್ರೆಸ್‌ನ ಜಯಪ್ರಕಾಶ್ ಹೆಗ್ಡೆಯವರ ಗೆಲುವಿನಲ್ಲಿ ಹಾಗೂ ಬಿಜೆಪಿಗಳ ಸೋಲಿನಲ್ಲಿ ಆ ಪ್ರಾಂತ್ಯದ ಪ್ರಗತಿಪರರು, ಕೋಮು ಸೌಹಾರ್ದ ವೇದಿಕೆಯವರು, ದಲಿತ, ಹಿಂದುಳಿದ ಹಾಗೂ ಅಲ್ಪಸಂಖ್ಯಾತ ಸಮುದಾಯಗಳ ಕೊಡುಗೆಯೂ ಇದೆ.

ಕಾಂಗ್ರೆಸ್ ಇದನ್ನು ಮರೆಯಕೂಡದು.

• ಪಾರ್ವತೀಶ



ಇಂಟರ್‌ನೆಟ್‌ನಲ್ಲಿ ಯಡ್ಡಿಯ ಬಂಡಾಯದ ಕುರಿತು ಇಂತಹ ಹತ್ತಾರು ಲೇವಡಿಗಳು ಜನಪ್ರಿಯವಾಗುತ್ತಿವೆ.

ನ್ನ ಪರವಾಗಿ ಶೆಟ್ಟರ್‌ರನ್ನು ಸಿಎಂಗಾದಿಗೆ ತಂದು ಯಡ್ಡಿ ಆಟ ಆರಂಭಿಸುವುದು

ದರಿಂದ ಯಡ್ಡಿಗೂ ಲಾಭ ಬಿಜೆಪಿಗೂ ಲಾಭ. ಸದಾನಂದ ಗೌಡರನ್ನು ಇಳಿಸುವುದರಿಂದ ಮು ಪ್ರತಿಷ್ಠೆಗೂ ಫಲ ಸಿಕ್ಕಂತಾಯ್ತು. ಮತ್ತೊಬ್ಬ ಲಿಂಗಾಯತನನ್ನು ಮುಖ್ಯಮಂತ್ರಿ ವುದರಿಂದ ಸಮಸ್ತ ಲಿಂಗಾಯತರ ವಲಯದಲ್ಲಿ ಯಡ್ಡಿಯ ಕೀರ್ತಿ, ಸಾಮರ್ಥ್ಯ ಟ ವೃದ್ಧಿಸಿದಂತಾಯ್ತು. ಮುಂಬರುವ ಚುನಾವಣೆಯ ಹೊತ್ತಿಗೆ ಯಡ್ಡಿ ಲಿಂಗಾಯತರ ವಾದ್ವಿತೀಯ ಅಧಿಪತಿಯಾಗಿ ತನ್ನದೇ ಕೈಗೊಂಬೆ ಸರ್ಕಾರದ ಮೂಲಕ ವರ್ಚಸ್ವಿಯೂ ಬೇರುಬಿಟ್ಟತೆಂದರೆ ಮುಂದಿನ ಚುನಾವಣೆಯೆಂಬುದು ಕಾಂಗ್ರೆಸ್ ಪಾಲಿಗೆ ವಿನಾಶ ತವಾಗುತ್ತದೆ.

ಗಾಗಬಾರದೆಂದರೆ ಯಡ್ಡಿ ಮತ್ತೆ ಮುಖ್ಯಮಂತ್ರಿಯಾಗಿದ್ದರೇನೆ ಕಾಂಗ್ರೆಸ್ಸಿಗೆ ಲಾಭ. ರೆ ಎನ್‌ಡಿಎ ಮುಂದಿನ ಚುನಾವಣೆಯಲ್ಲಿ ಯುಪಿಎ ವಿರುದ್ಧ ಭ್ರಷ್ಟಾಚಾರ ಅಸ್ತ್ರ ಸಿದ್ಧಮಾಡಿಬಿಟ್ಟಿದೆ. ಅದನ್ನು ವಿಫಲಗೊಳಿಸಬೇಕೆಂದರೆ ಯಡ್ಡಿ ಆ ಹೊತ್ತಿಗೆ ಮುಖ್ಯಮಂತ್ರಿಯಾಗಿರಬೇಕು. ಭ್ರಷ್ಟನೊಬ್ಬ, ಅದರಲ್ಲೂ ಜೈಲಿಗೆ ಹೋಗಿ ಬಂದವನೊಬ್ಬನನ್ನು ಮತ್ತೆ ಕರ್ನಾಟಕದ ಮುಖ್ಯಮಂತ್ರಿಯನ್ನಾಗಿಸಿದ ಬಿಜೆಪಿ ಯಾವ ಮುಖ ಹೊತ್ತು ಕಾಂಗ್ರೆಸ್ ಭ್ರಷ್ಟಾಚಾರವನ್ನು ಎತ್ತಿ ಆಡುತ್ತೆ ಎಂಬ ವಾದ ಕಾಂಗ್ರೆಸ್ಸಿಗಿದ್ದರೇನೇ ಯುಪಿಎಗೆ ಲಾಭ. ಅಲ್ಲಿಗೆ ಎನ್‌ಡಿಎನ ಭ್ರಷ್ಟಾಚಾರದ ಪ್ರಸ್ತಾವನೆಯೇ ತನ್ನ ಅರ್ಥ ಕಳೆದುಕೊಳ್ಳುತ್ತದೆ.



ಇದೆಲ್ಲ ಲೆಕ್ಕಹಾಕಿಯೇ ಕಾಂಗ್ರೆಸ್ ಯಡ್ಡಿ ಮತ್ತೆ ಮುಖ್ಯಮಂತ್ರಿಯಾಗುವಂತೆ ಏನೆಲ್ಲ ಕಾಣಿಕೆ ಸಲ್ಲಿಸಬೇಕೋ ಅದಕ್ಕೆ ಪೂರಕವಾಗೇ ಸಿಇಸಿಯನ್ನು ಬಳಸಿಕೊಳ್ಳುತ್ತಿದೆ ಎಂಬ ಅನುಮಾನ ಬಿಜೆಪಿ ಹೈಕಮಾಂಡ್‌ಗಿದೆ. ಸಿಬಿಐ ತನಿಖೆಯ ಅನಿವಾರ್ಯತೆಯನ್ನು ಮುಂದೂಡಿದಷ್ಟೂ ಯಡ್ಡಿಯ ತಾಳ್ಮೆಗೆಡುತ್ತದೆ. ಇದನ್ನೇ ಬಳಸಿಕೊಂಡು ಯಡ್ಡಿಯ ಕ ರಾಜ್ಯ ಬಿಜೆಪಿಯನ್ನೇ ಛಿದ್ರಗೊಳಿಸಬಹುದು. ತನ್ನನ್ನು ಕೂಡ ಜನಾರ್ದನ ರೆಡ್ಡಿಯ ಬಿಐ ಶಾಶ್ವತವಾಗಿ ಜೈಲುಪಾಲು ಮಾಡಿತೆಂದರೆ ಅದು ತನ್ನ ರಾಜಕೀಯ ಬದುಕಿನ ತೆಯೇ ಸರಿ. ಹಾಗಾಗದಂತೆ ಮಾಡಬೇಕೆಂದರೆ ತಾನು ಕೇಂದ್ರದ ಕಾಂಗ್ರೆಸ್ ಆಶೆಯನ್ನು ಬೇಕು. ಹೈಕಮಾಂಡ್ ಒಪ್ಪದೆ ಹೋದರೂ ತನ್ನನ್ನು ಮುಖ್ಯಮಂತ್ರಿ ಮಾಡಿ ಎನ್ನಬೇಕು. ಗಿ ಹಠ ಹಿಡಿಯಬೇಕು. ಅದಾಗದೇ ಹೋದರೆ ಸದಾನಂದ ಗೌಡರನ್ನು ಇಳಿಸುವ ಬೇಡಿಕೆಯಿಡಬೇಕು.

ಗೊಮ್ಮೆ ಸದಾನಂದ ಗೌಡರನ್ನೇ ಹೈಕಮಾಂಡ್ ಮುಂದುವರಿಸಿದರೆ ಬಂಡಾಯ ಸಬೇಕು. ಪಕ್ಷ ಒಡೆಯಬೇಕು. ಅದಕ್ಕೂ ಮೊದಲೇ ತಾನೇ ಮುಖ್ಯಮಂತ್ರಿಯಾಗಬೇಕು. ಕ ರಾಷ್ಟ್ರಮಟ್ಟದಲ್ಲಿ ಬಿಜೆಪಿಯ ವರ್ಚಸ್ಸನ್ನು ಮಣ್ಣುಗೂಡಿಸಬೇಕು. ಪಕ್ಷ ಒಡೆದರೆ ಕಾಂಗ್ರೆಸ್ಸಿಗೆ ಲಾಭ. ಮುಖ್ಯಮಂತ್ರಿಯಾಗಿ ಮುಂದುವರಿದರೂ ಅದು ಕಾಂಗ್ರೆಸ್ಸಿಗೇ ಈ ಎರಡರಲ್ಲಿ ಕಾಂಗ್ರೆಸ್ ಯಾವುದನ್ನು ಆಯ್ದುಕೊಳ್ಳುತ್ತದೆ ಎಂಬುದರ ಮೇಲೆ ಮಿ ಭವಿಷ್ಯವಷ್ಟೇ ಅಲ್ಲ ಬಿಜೆಪಿ ಸರ್ಕಾರದ ಭವಿಷ್ಯವೂ ನಿಂತಿದೆ.

ಥ ಯಾವ ಮಾರ್ಗ ಬಳಸಿ ರಾಜ್ಯದ ಬಿಜೆಪಿ ಸರ್ಕಾರವನ್ನು ಅಲ್ಲಾಡಿಸಬೇಕೆಂಬುದನ್ನೂ ಸೇ ನಿರ್ಧರಿಸುತ್ತದೆ. ಸಿಇಸಿಯ ವರದಿ ಮತ್ತು ಸಿಬಿಐ ತನಿಖೆಯ ಒಂದೇ ಅಸ್ತ್ರ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಹೇಗೆ ಬಿಜೆಪಿಯನ್ನು ಹಣಿಯಬೇಕೆಂಬುದು ಕಾಂಗ್ರೆಸ್ ಡಾಕುತ್ತಿದೆ.

ದೆಲ್ಲ ಲೆಕ್ಕಹಾಕಿಯೇ ತಾಳ್ಮೆ ಹೊಂದುವಂತೆ ಅರುಣ್ ಜೇಟ್ಲಿ ಯಡ್ಡಿಯನ್ನು ಕಾಡಿಬೇಡುತ್ತಿದ್ದಾರೆ. ಪರಿಸ್ಥಿತಿಯಲ್ಲಿ ಯಡ್ಡಿ ಇಲ್ಲ, ಕೇಳದೆಹೋದರೆ ಬಿಜೆಪಿ ಉಳಿಯುವುದಿಲ್ಲ. ಕೊನೇ ಮಾರ್ಚಿ ಪೂರಾ ಬಜೆಟ್ ಮಂಡಿಸುವ ತನಕ ಸದಾನಂದ ಗೌಡರನ್ನು ಸಹಿಸಿಕೊಂಡಿರಲು ಸಮ್ಮತಿಸಿದ್ದಾರೆ. ಅದಾದನಂತರ ಹೆಚ್ಚೆಂದರೆ ಒಂದೆರಡು ವಾರ ಕಾಯಬಹುದು. ವರೆಗೆ ಸಿಇಸಿಯ ನಿರ್ಧಾರ ನಿಷ್ಕ್ರಿಯವಾದರೆ ಸರಿ.

ದಾಗದೇ ಹೋದರೆ? ಯಡ್ಡಿಯಂತೂ ಸುಮ್ಮನೆ ಕೂರುವುದಿಲ್ಲ. ತ ಒಂಥರಾ ಈಗ ಭ್ರಷ್ಟಾಸುರುದ್ದಾರೆ. ಒಂದೋ ಬೇರೆ ಯಾರ ತಲೆಯ ಮೇಲಾದರೂ ಬೇಕು, ಇಲ್ಲವೇ ತನ್ನ ತಲೆಯ ಮೇಲೇ ಕೈ ಇಟ್ಟುಕೊಳ್ಳಬೇಕು? ಜೆಪಿಯ ಪಾಲಿಗೆ ವಿನಾಶವೆಂಬುದು ಯಡ್ಡಿಯ ಮೂಲಕವೂ ಬರಬಹುದೆಂಬುದು ಬದ್ಧಾನಾಗಲಿ, ಅಡ್ವಾಣಿ ಜೇಟ್ಲಿಗಳಾಗಲಿ ಎಲ್ಲಿ ಗೊತ್ತಿತ್ತು?

ಒಕ್ಕಲಿಗರ ಆತ್ಮವಂಚನೆ ಮತ್ತು ಬಾಲಗಂ ಸ್ವಾಮಿಯ ದುರಾಲೋಚನೆ

ಜನಮರುಳೋ ಜಾತ್ರೆ ಮರುಳೋ ಗೊತ್ತಿಲ್ಲ, ಸದಾನಂದ ಗೌಡರ ಪದಚ್ಯುತಿ ಸನ್ನಿಹಿತವಾಗುತ್ತಿದೆಯೆಂಬ ವಾಸನೆ ಹತ್ತಿದ್ದೇ ತಡ, ಆದಿಚುಂಚನಗಿರಿ ಬಾಲಗಂಗಾಧರನಾಥರ ಒಕ್ಕಲಿಗ ಪ್ರಜ್ಞೆ ಜಾಗೃತಗೊಂಡು ನಿಂತು ಬಿಟ್ಟಿದೆ. 'ಓರ್ವ ಒಕ್ಕಲಿಗ ಮುಖ್ಯಮಂತ್ರಿಯಾಗಿರುವುದನ್ನು ಇವರಿಂದ ಸಹಿಸಲಾಗುತ್ತಿಲ್ಲ, ಅದಕ್ಕೆಂದೇ ಸದಾನಂದ ಗೌಡರನ್ನು ಮುಖ್ಯಮಂತ್ರಿ ಸ್ಥಾನದಿಂದ ಇಳಿಸಲು ಯತ್ನಿಸುತ್ತಿದ್ದಾರೆ. ಒಕ್ಕಲಿಗ ಅಧಿಕಾರಿಗಳನ್ನು ಬೇಕಾಬಿಟ್ಟಿ ಟ್ರಾನ್ಸ್‌ಫರ್ ಮಾಡಿ ಹಿಂಸಿಸುತ್ತಿದ್ದಾರೆ' ಇತ್ಯಾದಿಯಾಗಿ ಭಾಷಣಬಿಗಿದೇಬಿಟ್ಟರು ಬಾಲಗಂ ಸ್ವಾಮೀಜಿ!

ಇಷ್ಟಾಗಿದ್ದೇ ತಡ ಚನ್ನಪಟ್ಟಣದ ಕೆಲ ಒಕ್ಕಲಿಗ ಸಂಘಟನೆಗಳು ಯಡ್ಡಿಯ ಭೂತ ಸುಟ್ಟು ಪ್ರತಿಭಟಿಸಿದರೆ, ದೇವೇಗೌಡರ ಪಾಲಿನ ರಾಜಗುರು ಚಂದ್ರಶೇಖರನಾಥರು ಸಮಾಧಿಯಿಂದೆದ್ದು ಸದಾನಂದ ಗೌಡರನ್ನೇನಾದರೂ ಇಳಿಸಿಬಿಟ್ಟರೆ ಅದು ಒಕ್ಕಲಿಗರಿಗಾದ ಅನ್ಯಾಯ ಎಂಬಂತೆ ಘೋಷಿಸಿಬಿಟ್ಟರು. ಇನ್ನು ಒಕ್ಕಲಿಗರ ಸಂಘದ ಅಧ್ಯಕ್ಷ ಕೆಂಚಪ್ಪ ಗೌಡ ಕೇಳಬೇಕೆ? ಸಂಘದ ಅಷ್ಟೂ ಮಂದಿ ಡೈರೆಕ್ಟರ್‌ಗಳನ್ನು ಕಟ್ಟಿಕೊಂಡಿದ್ದೇ ಸದಾನಂದರ ಸುತ್ತ ನಿಂತು ಪೋಜು ಕೊಡುವುದು,



ಕುಡಿಪುಡಿ ಒಕ್ಕಲಿಗ ಸ್ವಾಮಿಗಳಿಂದ ಹಿಡಿದು ಪುಢಾರಿಗಳ ತನಕ ಪ್ರತಿಯೊಬ್ಬರು ಒಕ್ಕಲಿಗರಿಗಾದ ಅನ್ಯಾಯಕ್ಕೂ ಸದಾನಂದ ಗೌಡ ಸಿಎಂಗಿರಿಗೂ ಸಂಬಂಧ ಕಲ್ಪಿಸಿ ಬೊಬ್ಬೆ ಹಾಕುವುದು ಮುಂದುವರಿದೇ ಇದೆ.

ಇಲ್ಲಿ ಗಮನಿಸಬೇಕಾದ ಒಂದು ಸೂಕ್ಷ್ಮವೇನೆಂದರೆ ಏಕಾಏಕಿ ಸದಾನಂದ ಗೌಡರ ಬೆಂಬಲಕ್ಕೆ ನಿಂತು ಬಾಲಗಂಗಾಧರ ಸ್ವಾಮೀಜಿಯ ಮಾತುಗಳಿಗೆ ಬಾಯಿ ಅವರದಾದರೂ ದನಿ ಮಾತ್ರ ಕುಮಾರಸ್ವಾಮಿ-ದೇವೇಗೌಡರ ಹಾಗೇ ಕೇಳಿಸುತ್ತಿದೆ. ಇದರರ್ಥ ದೇವೇಗೌಡ-ಕುಮಾರಸ್ವಾಮಿ ಹೇಳಬೇಕಿದ್ದನ್ನು ಬಾಲಗಂಗಾಧರಸ್ವಾಮಿ ಮಾತಾಡುತ್ತಿದ್ದಾರೆ!

ದೇವೇಗೌಡರಾಗಲಿ, ಆದಿಚುಂಚನಗಿರಿ ಸ್ವಾಮೀಜಿಯಾಗಲಿ ಸದಾನಂದ ಗೌಡರನ್ನು ಮುಖ್ಯಮಂತ್ರಿ ಮಾಡಿದವರಲ್ಲ. ಸದಾನಂದರನ್ನು ಮುಖ್ಯಮಂತ್ರಿಯಾಗಿಸಿದ್ದು ಯಡಿಯೂರಪ್ಪನೇ ಹೊರತು ಇವರ್‍ಯಾರೂ ಅಲ್ಲ. ತನಗೆ ನಿಯತ್ತಾಗಿರುವವನೊಬ್ಬ ಮುಖ್ಯಮಂತ್ರಿಯಾಗಿದ್ದರೆ ಅದು ತನಗೇ ಅನುಕೂಲವೆಂಬ ಲೆಕ್ಕಾಚಾರ ಯಡ್ಡಿಗಿದ್ದುದರಿಂದಲೇ ಸದಾನಂದ ಮುಖ್ಯಮಂತ್ರಿಯಾಗಿದ್ದು. ಲಿಂಗಾಯತ-ಒಕ್ಕಲಿಗರನ್ನು ದಮನಿಸಲು ಯತ್ನಿಸಿದ್ದೇ ಆಗಿದ್ದರೆ ಯಡ್ಡಿಯೇಕೆ ಸದಾನಂದರನ್ನು ತನ್ನ ಉತ್ತರಾಧಿಕಾರಿ ಮಾಡಬೇಕಿತ್ತು?

'ಏನೇ ಪಕ್ಷನಿಷ್ಠೆ, ಕರ್ತವ್ಯ ನಿಷ್ಠೆ, ಸಿದ್ಧಾಂತ, ಲೆಕ್ಕಾಚಾರಗಳನ್ನೆಲ್ಲ ಬದಿಗಿರಿಸಿ ಮನುಷ್ಯತ್ವದ ಆಧಾರದಲ್ಲಿ ಹೇಳಬೇಕೆಂದರೆ ತನ್ನನ್ನು ಪಟ್ಟಕ್ಕೇರಿಸಿದ ಯಡ್ಡಿಗೆ ನಿಷ್ಠನಾಗಿರಬೇಕಿದ್ದದ್ದು ಸದಾನಂದರ ಧರ್ಮವಾಗಿತ್ತು, ಕನಿಷ್ಠ ಮನುಷ್ಯತ್ವದ ಕಾರಣಕ್ಕಾದರೂ ಸದಾಗೌಡ ಯಡ್ಡಿ ಬಯಸಿದಾಕ್ಷಣ ತನ್ನ ಸ್ಥಾನ ಬಿಟ್ಟುಕೊಡಬೇಕಾಗಿತ್ತು- ಹೀಗೆಂದು ವಾದ ಮಾಡುವ ಲಿಂಗಾಯತರ ಪ್ರಕಾರ ಯಡ್ಡಿಗೆ ಮುಖ್ಯಮಂತ್ರಿಗಾದಿ ಬಿಟ್ಟುಕೊಡದೇ ವಚನ ಭ್ರಷ್ಟನಾಗಿ ಕುಮಾರಸ್ವಾಮಿ ಮಾಡಿದ ದ್ರೋಹಕ್ಕಿಂತಲೂ ಜೊತೆಗಿದ್ದು ಬೆನ್ನಿಗಿರಿದ ಸದಾನಂದ ಗೌಡರು ಮಾಡಿದ ಘಾತವೇ ದೊಡ್ಡ ದೋಖಾ ಮತ್ತು ಅತೀ ಅತೀವ ಅನ್ಯಾಯ!

ಕುಮಾರಸ್ವಾಮಿಯದು ಪಾಲುದಾರಿಕೆಯ ವಂಚನೆಯಾದರೆ ಸದಾನಂದ ಗೌಡ ಮಾಡಿದ್ದು ಸ್ವಾಮಿ ದ್ರೋಹ!

ಅಧಿಕಾರ, ಆಸ್ತಿ, ಐಶ್ವರ್ಯ ಎಂಥವರನ್ನೂ ಭ್ರಷ್ಟಗೊಳಿಸುವುದು ಸಹಜ. ಆದರೆ ತನ್ನ ಸ್ವಾಮಿದ್ರೋಹ, ನಂಬಿಕೆದ್ರೋಹವನ್ನು ಸಮರ್ಥಿಸಿಕೊಳ್ಳಲು ಜಾತಿಯನ್ನು ಬಳಸಿಕೊಳ್ಳುವುದು ಸದಾನಂದ ಗೌಡರ ಆತ್ಮವಂಚನೆ ಮಾತ್ರ. ಯಾವತ್ತು ಆದಿಚುಂಚನಗಿರಿ ಸ್ವಾಮಿಯನ್ನು ಛೂಬಿಟ್ಟು ಸದಾನಂದ ಗೌಡರು ಜಾತಿ ಆಟಕ್ಕಿಳಿದರೋ ಸಹಜವಾಗೇ ಅದು ಲಿಂಗಾಯತರನ್ನು ಮತ್ತಷ್ಟು ಕೆರಳಿಸುತ್ತದೆ, ಒಗ್ಗೂಡಿಸುತ್ತದೆ. ಬೆಳಗಾವಿ ಸಂಸದ ಸುರೇಶ್ ಅಂಗಡಿ ಒಕ್ಕಲಿಗ ಸದಾನಂದ ಗೌಡರನ್ನು ಮುಖ್ಯಮಂತ್ರಿ ಮಾಡಿದ್ದೇ ಲಿಂಗಾಯತ ಎಂಬ ಹೇಳಿಕೆ ಕೊಡುತ್ತಾನೆ. ಕೆಲ ವೀರಶೈವ ಸ್ವಾಮೀಜಿಗಳ ಪ್ರತಿ ಹೇಳಿಕೆಗಳೂ ಹುಟ್ಟಿಕೊಳ್ಳುತ್ತವೆ.

ಬಾಲಗಂಗಾಧರ ಸ್ವಾಮಿಯಾಗಲಿ, ದೇವೇಗೌಡರಾಗಲಿ, ಮುಖ್ಯಮಂತ್ರಿಗಳೇ ಆಗಲಿ ಜಾತಿ ರಾಜಕಾರಣ ಮಾಡುವ ಮೂಲಕ ಲಿಂಗಾಯತರನ್ನು ಮತ್ತಷ್ಟು ಒಗ್ಗೂಡುವಂತೆ ಮಾಡುತ್ತಾರೆ ಮತ್ತು ತಾವು ಇನ್ನಿತರರ ಕಣ್ಣಲ್ಲಿ ಮತ್ತಷ್ಟು ಕುಬ್ಜರಾಗುತ್ತಾರೆ. ಅಷ್ಟಕ್ಕೂ ಇವರ ಒಕ್ಕಲಿಗ ಪ್ರಜ್ಞೆ ಅಥವಾ ಜಾತಿಬುದ್ಧಿ ಬುಗಿಲೇಳುವುದು ತಮ್ಮ ಜನಾಂಗಕ್ಕಾದ ಅನ್ಯಾಯದ ವಿರುದ್ಧವಾಗಿದ್ದರೆ ಆ ಮಾತು ಬೇರೆ. ಬಾಲಗಂಗಾಧರರ ಒಕ್ಕಲಿಗ ಕಾಳಜಿ ತನ್ನ ಜಾತಿಯ ಅಧಿಕಾರಿಗಳ ಎತ್ತಂಗಡಿ ಮತ್ತು ಆಯಕಟ್ಟಿನ ಹುದ್ದೆಗಳ ವಿಷಯಕಷ್ಟೇ ಸೀಮಿತಗೊಂಡಿದೆ. ಬಾಲಗಂಗಾಧರ ಸ್ವಾಮಿಯ ಕಾಲೇಜಿಗೆ ಭೂಮಿ ಕೊಟ್ಟು ಬೀದಿಪಾಲಾದಾವರಿಗೆ ಇವತ್ತಿಗೂ ನ್ಯಾಯಕ್ಕೆ ಪರಿಹಾರ ಕೊಟ್ಟಿಲ್ಲ. ತನ್ನದೇ ಮೆಡಿಕಲ್ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಒಕ್ಕಲಿಗರ ಮಕ್ಕಳಿಗೆ ಪ್ರವೇಶವಿಲ್ಲ, ಕೆಐಎಡಿಬಿ, ಬಿಡಿಎಗಳಿಂದಾಗಿ ಭೂಮಿ ಕಳೆಕೊಂಡು ಬೀದಿಪಾಲಾದ ಒಕ್ಕಲಿಗರ ಮುಂದೆ, ಐ.ಟಿ. ಬಿಟಿ ಕಂಪನಿಗಳಲ್ಲಿ ಒಕ್ಕಲಿಗರಾದ ವಂಚನೆಯ ಮುಂದೆ ಸದಾನಂದ ಗೌಡರಿಗೆ ಯಡ್ಡಿ ಮಾಡಿದ್ದು ಯಾವ ಮಹಾ ದ್ರೋಹ?

ಆತ್ಮವಂಚನೆಗೂ ಮಿತಿ ಬೇಡವೇ?


ಸ್ಥಳೀಯ ಗಿರವಿ ಅಂಗಡಿಗಳ ಮಾಲೀಕರು, ಚಿಕ್ಕ ಪ್ರಮಾಣದಲ್ಲಿ ಜನರನ್ನು ಸುಲಿಯುತ್ತಿದ್ದ ಮಾರ್ವಾಡಿಗಳು, ಚಿಲ್ಲರೆ ಲೇವಾದೇವಿಗಾರರನ್ನು ಒಂದೇ ಏಟಿಗೆ ಕೆಡವಿಹಾಕಿದ ದೊಡ್ಡ ವಂಚಕ ಸಂಸ್ಥೆ ಮಣಪ್ಪುರಂ ಗೋಲ್ಡ್ ಲೋನ್ ಇಷ್ಟರಲ್ಲೇ ಬಡಪಾಯಿ ಜನರಿಗೆ ಮಣ್ಣು ಮುಕ್ಕಿಸಲಿದೆ ಎಂಬ ಸೂಚನೆ ಸಿಕ್ಕಿದೆ.




ಇಂತಹ ಗೋಲ್ಡ್ ಲೋನ್ ಕಂಪೆನಿಗಳನ್ನು ತಮ್ಮ ವಹಿವಾಟನ್ನು ನಡೆಸಲು ಸರ್ಕಾರದಿಂದ ಯಾವುದೇ ಲೈಸೆನ್ಸ್ ಆಗಲಿ, ಅಧಿಕೃತವಾದ ಮಾನ್ಯತೆಯನ್ನಾಗಲಿ ಪಡೆದಿರುವುದಿಲ್ಲ, ಆದ್ದರಿಂದ ಜನರು ಇಂತಹ ವಂಚಕ ಕಂಪನಿಗಳ ಬಗ್ಗೆ ಹುಷಾರಾಗಿರಬೇಕೆಂದು ಇತ್ತೀಚೆಗಷ್ಟೇ 'ಲಂಕೇಶ್' ಎಚ್ಚರಿಕೆ ನೀಡಿತ್ತು.

ಈಗ ಈ ಮಣಪ್ಪುರಂ ಕಂಪೆನಿ ಮಾಡಿರುವ ವಂಚಕ ಕೃತ್ಯಗಳು ಒಂದೊಂದಾಗಿ ತೆರೆದುಕೊಳ್ಳುತ್ತಿವೆ. ಕಳೆದ ಶುಕ್ರವಾರ ಹೈಕೋರ್ಟ್‌ನ ಮುಖ್ಯ ನ್ಯಾಯಾಧೀಶ ವಿಕ್ರಮಜಿತ್ ಸೇನ್ ಅವರನ್ನೊಳಗೊಂಡ ವಿಭಾಗೀಯ ಪೀಠವು ಮಣಪ್ಪುರಂ ಗೋಲ್ಡ್‌ಲೋನ್ ಕಂಪೆನಿಯನ್ನು ನಡೆಸಲು ನೀಡಿರುವ ಅನುಮತಿಯನ್ನು ಪ್ರಶ್ನಿಸಿ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ, ಆರ್‌ಬಿಐ ಗವರ್ನರ್ ಮತ್ತು ರಿಜಿಸ್ಟ್ರಾರ್ ಆಫ್ ಸೊಸೈಟಿಯವರಿಗೆ ನೋಟೀಸು ಜಾರಿ ಮಾಡಿದೆ.

ಜನರಿಗೆ ಮಣ್ಣು ಮುಕ್ಕಿಸುತ್ತಿರುವ ಮಣಪ್ಪುರಂ



ದೇಶದ 22 ರಾಜ್ಯಗಳಲ್ಲಿ ಸುಮಾರು 2,916 ಶಾಖೆಗಳನ್ನು ಹೊಂದಿರುವ ಮಣಪ್ಪುರಂ ಗೋಲ್ಡ್ ಲೋನ್ ಕಂಪೆನಿಯ 524 ಬ್ರಾಂಚ್‌ಗಳು ಕರ್ನಾಟಕದಲ್ಲೇ ಇವೆ. ಇಷ್ಟೊಂದು ಶಾಖೆಗಳನ್ನು ಹೊಂದಿರುವ ಈ ದೈತ್ಯ ಸಂಸ್ಥೆ ಇತ್ತ ರಿಜಿಸ್ಟ್ರಾರ್ ಆಫ್ ಸೊಸೈಟಿಯಿಂದ ಮಾತ್ರ ಅನುಮೋದನೆಗೊಂಡಿದ್ದರೆ ಅತ್ತ ಆರ್‌ಬಿಐನಿಂದ ನಾನ್ ಬ್ಯಾಂಕ್ ಫೈನಾನ್ಸ್ ಇನ್‌ಸ್ಟಿಟ್ಯೂಷನ್ ಎಂಬ ಸರ್ಟಿಫಿಕೇಟು ಪಡೆದಿದೆ. ಇದನ್ನು ಕೇಳಿ ಇಷ್ಟು ಸಾಲದೆ ವಹಿವಾಟು ನಡೆಸಲು ಅನ್ನಿಸಬಹುದು. ಆದರೆ ವಾಸ್ತವವಾಗಿ ಈ ಕಂಪನಿ ರಿಜಿಸ್ಟ್ರಾರ್ ಆಫ್ ಸೊಸೈಟಿ ಮತ್ತು ಆರ್‌ಬಿಐ ಅನ್ನು ಹೇಗೆ ಏಮಾರಿಸಿದೆ ಎಂದರೆ ಒಂದೆಡೆ ರಿಜಿಸ್ಟ್ರಾರ್ ಆಫ್ ಸೊಸೈಟಿಯವರು ಮಣಪ್ಪುರಂ ಕಂಪನಿಯನ್ನು ಆರ್‌ಬಿಐ ನಿಯಂತ್ರಿಸುತ್ತಿದೆ ಎಂದು ಭಾವಿಸಿದ್ದರೆ ಇನ್ನೊಂದೆಡೆ ಆರ್‌ಬಿಐನವರು ಇದು ರಿಜಿಸ್ಟ್ರಾರ್ ಆಫ್ ಸೊಸೈಟಿಯಿಂದ ಈ ಕಂಪನಿ ರೆಗ್ಯುಲೇಟ್ ಆಗುತ್ತಿದೆ ಎಂದು ನಂಬಿದ್ದರು. ಇದರ ಲಾಭವನ್ನು ಪಡೆದ ಮಣಪ್ಪುರಂ ಜನರನ್ನು ಸಲೀಸಾಗಿ ವಂಚಿಸುತ್ತಿತ್ತು!



GROUNDS FOR INTERIM PRAYER

The Manappuram finance limited and the Muthoot finance are still charging the exorbitant interest on the gold loan in the entire state of Karnataka and looting the gold loan borrower. And therefore in order to safe guard the public from further exploitation the petitioner most humbly prays this Honourable high court to pass an interim order by ordering the Manappuram finance limited and the Muthoot finance to charge the interest on the gold loan as per the government order dated 28-03-2003 and stop collecting the exorbitant interest from the existing loan borrower and also from the fresh gold loan seeker in the interest of justice and equity.

PRAYER

Wherefore for the reasons stated above it is prayed that this hon'ble court be pleased to

1. Issue a writ in the nature of directing the respondents to register the complaint against the MANAPPURRAM FINANCE LIMITED AND THE MUTHOOT FINANCE in the interest of justice and equity.

2. Issue a writ in the nature of mandamus directing the GOVERNOR (Reserve Bank Of India) to regulate the lending rate of interest on the gold loan financed by the non banking finance companies and keep a regular vigil on them.

ನ್ಯಾಯಾಲಯದ ಆದೇಶ ಪ್ರತಿ

ಪ್ರಾಹಿಬಿಷನ್ ಆಫ್ ಎಕ್ಸಾರ್ಬಿಟೆಂಟ್ ಇಂಟರೆಸ್ಟ್ ಆಕ್ಟ್ ಮತ್ತು 2003ರಲ್ಲಿ ಕರ್ನಾಟಕ ಸರ್ಕಾರ ಹೊರಡಿಸಿರುವ ಸುತ್ತೋಲೆಯ ಪ್ರಕಾರ ಯಾವುದೇ ಸೆಕ್ಯೂರ್ಡ್ ಲೋನ್ - ಅಂದರೆ ಒಡವೆ, ಆಸ್ತಿಗಳ - ಮೇಲೆ ನೀಡುವ ಸಾಲಕ್ಕೆ ಶೇ. 14ಕ್ಕಿಂತ ಹೆಚ್ಚು ಬಡ್ಡಿಯನ್ನು ವಿಧಿಸುವಂತಿಲ್ಲ, ಹಾಗೆಯೇ ಅವೆರಡೂ ಕಾನೂನುಗಳ ಬಡ್ಡಿಯನ್ನು ವಿಧಿಸುವಂತಿಲ್ಲ, ಹಾಗೆಯೇ ಯಾವುದೇ ಆಧಾರಗಳಿಲ್ಲದೆ ನೀಡುವ ಸಾಲಗಳಿಗೆ ವಾರ್ಷಿಕ ಪ್ರಕಾರ ಬಡ್ಡಿ 16%ಗಿಂತ ಹೆಚ್ಚಿರಬಾರದು. ಆದರೆ ಮಣಪ್ಪುರಂನ ಜಾಹೀರಾತುಗಳಲ್ಲಿ ರೂಪದರ್ಶಿ ಪುನೀತ್ ರಾಜ್‌ಕುಮಾರ್ ಅವರ ಬಾಯಿಂದ "ನೂರು ರೂಪಾಯಿಗೆ ಕೇವಲ 1 ರೂ. ಬಡ್ಡಿ" ಎಂದು ಪ್ರಚಾರ ಮಾಡಿಸಲಾಗುತ್ತಿದೆ. ಪುನೀತ್ ಜಾಹೀರಾತಿನಲ್ಲಿ ಹೇಳುವ ಲೆಕ್ಕದ ಪ್ರಕಾರ ಮಣಪ್ಪುರಂನಿಂದ ಪಡೆದ ಸಾಲದ ಮೇಲಿನ ವಾರ್ಷಿಕ ಬಡ್ಡಿ 12 ಪರ್ಸೆಂಟ್ ಮಾತ್ರ ಆಗಬೇಕು. ಆದರೆ ಮಣಪ್ಪುರಂನ ತನ್ನಿಂದ ಸಾಲ ಪಡೆದವರಿಗೆ ಶೇ 34ಕ್ಕಿಂತಲೂ ಹೆಚ್ಚು ಬಡ್ಡಿ ವಿಧಿಸುತ್ತಿದೆ.

ಕರ್ನಾಟಕ ಮನಿ ಲೆಂಡಿಂಗ್ ಆಕ್ಟ್ (161) ಪ್ರಕಾರ ಚಿನ್ನವನ್ನು ಅಡವಿಟ್ಟು ಅದರ ಮೇಲೆ ಸಾಲ ಪಡೆದವರು ಬಡ್ಡಿ ಕಟ್ಟದಿದ್ದರೆ ಅವರಿಗೆ ಒಂದು ವರ್ಷ ಕಾಲಾವಧಿ ಮತ್ತು ಗಡುವು ನೀಡಬೇಕಾಗುತ್ತದೆ. ಆದರೆ ಮಣಪ್ಪುರಂನಲ್ಲಿ ಚಿನ್ನವನ್ನು ಅಡಮಾನವಿಟ್ಟವರು ಒಂದೇ ಒಂದು ತಿಂಗಳು ಬಡ್ಡಿ ಕಟ್ಟದಿದ್ದರೆ ಕೂಡಲೇ ನೊಟೀಸು ಜಾರಿಯಾಗುತ್ತದೆ. ಹಾಗೆ ಅಡವಿಟ್ಟ ಚಿನ್ನವನ್ನು ಒಂದು ದಿನ ಬಿಡಿಸಿಕೊಳ್ಳಲು ಹೋದರೆ ತಾವು ಕೊಟ್ಟ ಹಣಕ್ಕೆ ರಸೀದಿಯೇ ಕೊಡುವುದಿಲ್ಲ.


ಮಣಪ್ಪುರಂ ಕಂಪನಿಯ ವಂಚನೆ ಹಲವು ಬಗೆಯದ್ದು. ಉದಾಹರಣೆಗೆ ತಮ್ಮಲ್ಲಿ ಅಡಮಾನವಿಡುವ ಬಂಗಾರ ಅಪ್ಪಟವೋ ಇಲ್ಲವೋ ಎಂದು ಎರಡೆರಡು ಬಾರಿ ಅದನ್ನು ಪರೀಕ್ಷೆಗೆ ಒಳಪಡಿಸುತ್ತಾರೆ. ಈ ರೀತಿ ಟೆಸ್ಟ್ ಮಾಡುವಾಗ ಚಿನ್ನವನ್ನು ಉಜ್ಜಲಾಗುತ್ತದೆ. ಒಂದೊಂದು ಬಾರಿ ಉಜ್ಜಿದಾಗಲೂ ಚಿನ್ನದ ತೂಕದಲ್ಲಿ ಸಣ್ಣ ಪ್ರಮಾಣದ ಇಳಿಕೆ ಉಂಟಾಗುತ್ತದೆ. ಹೀಗೆ ಎರಡು ಬಾರಿ ಪರೀಕ್ಷಿಸುವ ನೆಪದಲ್ಲಿ ಜನರ ಚಿನ್ನವನ್ನು ಮಣಪ್ಪುರಂ ಕದಿಯುತ್ತಿದೆ ಎಂಬ ದೂರುಗಳು ಸಹ ಹೇಳಿಬರುತ್ತಿವೆ.

ಮಣಪ್ಪುರಂನ ಈ ಎಲ್ಲಾ ರೀತಿಯ ವಂಚನೆಗಳನ್ನು ಬಯಲಿಗೆಳೆಯಲೆಂದೇ ಬೆಂಗಳೂರಿನ ನಾಗರಿಕ ಸುರೇಶ್ ಬಾಬು ಎಂಬುವವರು ಈ ಕಂಪೆನಿಯ ವಿರುದ್ಧ ಕಾನೂನು ಸಮರಕ್ಕೆ ನಿಂತಿದ್ದಾರೆ. ಈ ಹಿಂದೆ ಇದೇ ಸುರೇಶ್ ಬಾಬು ಈ ಕಂಪನಿಯಲ್ಲಿ ತಮ್ಮ ಒಡವೆಯನ್ನು ಅಡವಿಟ್ಟು ಅನ್ಯಾಯಕ್ಕೊಳಗಾಗಿದ್ದರು. ಆದ್ದರಿಂದ ತಮ್ಮಂತೆಯೇ ಇತರರೂ ಮೋಸಹೋಗಬಾರದೆಂದು ಅವರೀಗ ನ್ಯಾಯಾಲಯದ ಮುಂದೆ ಸಾರ್ವಜನಕ ಹಿತಾಸಕ್ತಿ ಮೊಕದ್ದಮೆಯನ್ನು ಹೂಡಿದ್ದಾರೆ. ಮಣಪ್ಪುರಂ ವಿರುದ್ಧ ಸುರೇಶ್ ಬಾಬು ನೀಡಿರುವ ದೂರು ಭಾರತೀನಗರ ಪೊಲೀಸ್ ಠಾಣೆಯಲ್ಲಿ ಮಾರ್ಚ್ 5. 2012ರಂದು ಕ್ರೈಂ ನಂ.40/2012 ಸೆಕ್ಷನ್ ಅಡಿಯಲ್ಲಿ ದಾಖಲಾಗಿದೆ. ಅದರಲ್ಲಿ ಮಣಪ್ಪುರಂ ಸಂಸ್ಥೆಯ ಚೇರ್ಮನ್ ವಿ.ಪಿ. ನಂದಕುಮಾರ್ ಮತ್ತು ಶಾಖಾ ಮುಖ್ಯಸ್ಥ ರವೀಂದ್ರ ಬಾಬು ವಿರುದ್ಧ 420 ಕೇಸು ಬುಕ್ ಆಗಿದೆ. ಹೈಕೋರ್ಟ್ ಈ ಪ್ರಕರಣವನ್ನು ವಿಚಾರಣೆ ನಡೆಸುವಂತೆ ಬೆಂಗಳೂರು ಪೋಲಿಸರಿಗೆ ಆದೇಶಿಸಿದೆ. ಆದರೂ ಇನ್ನೂ ಮಣಪ್ಪುರಂ ವಂಚಕರನ್ನು ಬಂಧಿಸುವ ಕಾರ್ಯ ನಡೆದಿಲ್ಲ.

• ಅರುಣ್ ಕುಮಾರ್.ಜಿ

ಮುಂಡಾಮೋಚಿಕೊಂಡರೂ ಪ್ರಶ್ನಿಸುವಂತಿಲ್ಲ

ಮಣಪ್ಪುರಂ ಒಂದು 'ನಾನ್ ಬ್ಯಾಂಕ್ ಫೈನಾನ್ಸ್ ಕಂಪೆನಿ ಲಿಮಿಟೆಡ್' ಆಗಿರುವುದರಿಂದ, ಒಂದು ವೇಳೆ ಈ ಸಂಸ್ಥೆ ದಿವಾಳಿಯಾದರೂ ಅದರ ಜವಾಬ್ದಾರಿಯನ್ನು ಆ ಕಂಪೆನಿಯ ಮಾಲೀಕರ ಮೇಲಾಗಲಿ, ಅದರ ಆಡಳಿತ ಮಂಡಳಿಯ ಸದಸ್ಯರ ಮೇಲಾಗಲಿ ಹೊರಿಸುವಂತಿಲ್ಲ.



ಯಾವಾಗ ಮಣಪ್ಪುರಂ ಕಂಪನಿ ಸಾಮಾನ್ಯ ಜನರನ್ನು ಯಾಮಾರಿಸಲು ಹೊರಟಿದೆ ಎಂದು ಗೊತ್ತಾಯಿತೋ ಆಗ ರಿಸರ್ವ್ ಬ್ಯಾಂಕ್ "ಮಣಪ್ಪುರಂ ಫೈನಾನ್ಸ್ ಲಿಮಿಟೆಡ್ ಅಥವಾ ಇದೇ ಸಮೂಹದ ಮಣಪ್ಪುರಂ ಆಗ್ರೋ ಫಾರ್ಮ್‌ಗಳಲ್ಲಿ ಠೇವಣಿ ಇಟ್ಟರೆ ಅದಕ್ಕೆ ಸಾರ್ವಜನಿಕರೇ ಹೊಣೆಗಾರರು" ಎಂದು ಎಚ್ಚರಿಸಿತು.

ಪರಿಸ್ಥಿತಿ ಹೀಗಿರುವಾಗ, ಮಣಪ್ಪುರಂನ ವಂಚನೆಯ ಜಾಲದ ಆಳ ಮತ್ತು ಅಗಲ ಗೊತ್ತಿಲ್ಲದೆ ಮುಂಡಾಮೋಚಿಸಿಕೊಂಡ ಜನ ಯಾರಬಳಿ ನ್ಯಾಯ ಕೇಳಬೇಕು?




ಜನರಿಗೆ ಅನ್ಯಾಯವಾದರೆ ಸ್ಟಾರ್‌ಗಳಿಗೇನು?

ಬಾಲಿವುಡ್ ನಟ ಶಾರುಖ್ ಖಾನ್ ಐಐಪಿಎಂ ಎಂಬ ಕಾಲೇಜಿನ ಬ್ರಾಂಡ್ ಅಂಬಾಸಡರ್ ಆಗಿದ್ದ. ಈ ಕಾರ್ಯಕ್ಕೆ ಶಾರುಖ್‌ಗೆ ಐಐಪಿಎಂನಿಂದ ಕೋಟ್ಯಂತರ ರೂಪಾಯಿ ಸಂಭಾವನೆ ಕೂಡಾ ಸಿಗುತ್ತಿತ್ತು. ಜೊತೆಗೆ ಆ ಕಾಲೇಜಿನ ವಾರ್ಷಿಕ ಲಾಭದಲ್ಲಿ ಶೇರು ಕೂಡಾ ದೊರೆಯುತ್ತಿತ್ತು.

ವಿಚಿತ್ರವೆಂದರೆ ಈ ಕಾಲೇಜು 'ಶಾಪ್ಸ್ ಅಂಡ್ ಬ್ಯುಸಿನೆಸ್ ಎಸ್ಟಾಬ್ಲಿಷ್‌ಮೆಂಟ್ ರೂಲ್' ಅಡಿಯಲ್ಲಷ್ಟೇ ನೋಂದಣಿಗೊಂಡಿತ್ತು. ಅಂದರೆ ಅಂಗಡಿ ಮತ್ತು ಇತರೇ ವ್ಯಾಪಾರ ವಹಿವಾಟಗಷ್ಟೇ ಅದರ ಮಾನ್ಯತೆ ಸೀಮಿತವಾಗಿತ್ತು. ಆದರೆ 'ಅಂಗಡಿ' ಲೈಸೆನ್ಸ್‌ನಡಿ ಕಾಲೇಜು ನಡೆಸುತ್ತಿದ್ದ ಐಐಪಿಎಂ ಭರ್ಜರಿ ಲಾಭ ಮಾಡುತ್ತಿತ್ತು.

ಈ ಸಂಸ್ಥೆಯ ಮೋಸವನ್ನು ಮನಗಂಡವರೊಬ್ಬರು ಮೂರ್‍ನಾಲ್ಕು ತಿಂಗಳ ಹಿಂದಷ್ಟೇ ಇದರ ವಿರುದ್ಧ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ದಾವೆಯನ್ನು ಹೂಡಿದಾಗಷ್ಟೇ ಈ ಕಾಲೇಜಿನ ಹಿಂದಿನ ಅಸಲಿಯತ್ತು ಬಹಿರಂಗಗೊಂಡದ್ದು. ಆಗ ನ್ಯಾಯಾಲಯವು ಐಐಪಿಎಂ ಸಂಸ್ಥೆಯನ್ನು ನಡೆಸುತ್ತಿರುವವರಿಗೂ, ಆ ಸಂಸ್ಥೆಯ ರೂಪದರ್ಶಿಯಾಗುವ ಮೂಲಕ ಅದರ ವಂಚನೆಯಲ್ಲಿ ಪರೋಕ್ಷವಾಗಿ ಭಾಗಿಯಾಗಿದ್ದ ಶಾರುಖ್ ಖಾನ್‌ಗೂ ಛೀಮಾರಿ ಹಾಕಿತ್ತು. ಇದಾದ ಮಾರನೇ ದಿನದಿಂದಲೇ ಆ ಸಂಸ್ಥೆಯ ಜಾಹೀರಾತುಗಳಿಂದ ಶಾರುಖ್ ಗಾಯಬ್ ಆದ!



ಯಾವುದೇ ಒಂದು ಸಂಸ್ಥೆ ಅಥವಾ ಪ್ರಾಡಕ್ಟ್‌ಗೆ ಬ್ರಾಂಡ್ ಅಂಬಾಸಿಡರ್ ಆಗುವ ಮುನ್ನ ಸಿನಿಮಾ ನಟನಟಿಯರು 'ಇಂಡೆಂಮ್ನಿಟಿ ಅಗ್ರಿಮೆಂಟ್' ಒಂದನ್ನು ಮಾಡಿಕೊಂಡಿರುತ್ತಾರೆ. ಆ ಅಗ್ರಿಮೆಂಟಿನಲ್ಲಿ 'ಕಂಪೆನಿಯ ವಿರುದ್ಧ ಯಾವುದೇ ರೀತಿಯ ಕಾನೂನು ತೊಡಕುಗಳಾದರೆ, ಕಂಪೆನಿ ನಷ್ಟಕ್ಕೀಡಾದರೆ ಅಥವಾ ಸಾರ್ವಜನಿಕರಿಗೆ ಈ ಕಂಪೆನಿಯಿಂದ ನಷ್ಟವಾದರೆ ಅದಕ್ಕೆ ನಾವು ಹೊಣೆಗಾರರಲ್ಲ. ನಮಗೂ ಅದಕ್ಕೂ ಸಂಬಂಧವಿಲ್ಲ' ಎಂದು ನಮೂದಿಸಿಕೊಂಡಿರುತ್ತಾರೆ.

ವಂಚಕ ಕಂಪನಿಗಳಿಂದ ಕೋಟಿಗಟ್ಟಲೇ ಹಣ ಪಡೆದು ಅವುಗಳಿಗೆ ರೂಪದರ್ಶಿಗಳಾಗುವ ಸಿನಿಮಾ ಹೀರೋ, ಹೀರೋಯಿನ್ನುಗಳೇನೋ ತಮ್ಮ ಸಂಭಾವನೆಗೆ ತಕ್ಕಂತೆ ಪೋಸು ಕೊಟ್ಟು ಕೃತಾರ್ಥರಾಗುತ್ತಾರೆ. ಆದರೆ ಜಾಹೀರಾತುಗಳಲ್ಲಿ ಅವರನ್ನು ನೋಡಿಯೇ ಅವರನ್ನು ನಂಬಿ ಅವರು ಪ್ರತಿನಿಧಿಸುವ ಕಂಪನಿಗಳು ತೋಡಿರುವ ಹಳ್ಳಕ್ಕೆ ಬೀಳುವ ಪಾಪದ ಜನ ಬಕ್ರಾಗಳಾಗುತ್ತಾರೆ.


ಕವಿ, ಕಲಾವಿದರು ದೇಶಾತೀತರು ಕಾಲಾತೀತರು. ...ರ್ಷವಿನ ಕ್ರಾಂತಿ ಮತ್ತು ಪ್ರೀತಿಯ ಕವಿ ಫೈಜ್‌ರ ...ಶತಮಾನೋತ್ಸವವನ್ನು ಭಾರತ ಹಾಗೂ ಪಾಕಿಸ್ತಾನದಲ್ಲಿ ...ಅಲ್ಲ ಜಗತ್ತಿನೆಲ್ಲೆಡೆ ಆಚರಿಸಲಾಗುತ್ತಿದೆ. ಮತ್ತೆ ಬರಹ, ...ನ್ಯಾಸ, ವಿಚಾರ ಸಂಕಿರಣಗಳ ಮೂಲಕ ಈ ವಿಶ್ವ ...ರು ಬದುಕು ಬರಹದ ಸಮೀಕ್ಷೆ ನಡೆಯುತ್ತಿದೆ. ಫೈಜ್ ...ಸ್ತಾನದಲ್ಲಿ ಪ್ರಗತಿಶೀಲ ಸಾಹಿತ್ಯ ಚಳವಳಿಯ ...ಚೂಣಿಯ ಕವಿಯಾಗಿದ್ದರು. ಹಾಗಾಗಿ ಪ್ರಗತಿಶೀಲ ...ಷ್ಯ ಪ್ರಗತಿಶೀಲ ಸಾಹಿತ್ಯ ಚಳವಳಿಯ ಮರುಮೌಲ್ಯ ...ಯನ ಕೂಡ ಅನಿವಾರ್ಯವಾಗಿದೆ. ಈ ಸಂದರ್ಭದಲ್ಲಿ ...ರ್ ತಮ್ಮ ಗುರುಗಳಾಗಿದ್ದ ಪತರಸ್ ಬುಖಾರಿ ನೆನೆದು ...ವ ಲೇಖನದಲ್ಲಿನ ಒಂದು ಪುಟ್ಟ ಟಿಪ್ಪಣಿಯು ನನ್ನನ್ನು ...ವ ಕಾಡಿತು.

...ಕಲೆಗಾಗಿ ಕಲೆ ಎನ್ನುವವರು ಹಾಗೂ ಬದುಕಿಗಾಗಿ ...ಎನ್ನುವವರ ನಡುವಣ ವಾಗ್ವಾದ ಇಂದು ನಿನ್ನೆಯದಲ್ಲ ...ಶೀಲ ಸಾಹಿತ್ಯ ಚಳವಳಿ ಆರಂಭವಾದಾಗಿನಿಂದ ಈ ...ತ್ಮಕ ಜಗಳ ಶುರುವಾಯಿತೆಂದು ಹೇಳಬಹುದು. ...ನಿ ಖಡ್ಗವಾಗಬಲ್ಲದು ಹಾಗೂ ಸಾಹಿತ್ಯದಿಂದ ...ಬಾವಣೆ ತರುವುದು ಸಾಧ್ಯವೆಂದು ಪ್ರಗತಿಶೀಲರು ...ವಾದಿಸಿದರು. ಸಾಹಿತ್ಯದಿಂದ ಎಂದೂ ಎಲ್ಲಿಯೂ ...ತಿಯಾದ ಉದಾಹರಣೆಗಳಿಲ್ಲವೆಂದು ಅವರ ...ರಾಳಿಗಳು ವಾದಿಸಿದರು. ಕಲೆಗಾಗಿ ಕಲೆ ಎನ್ನುವವರು ...ವ ಉದ್ದೇಶವಿಲ್ಲದೇ ಬರೆಯುವವರೆಂದು ಪ್ರಗತಿಶೀಲರು ...ದರು.

...ಪ್ರಗತಿಶೀಲ ಸಾಹಿತ್ಯ ಚಳವಳಿ ಆರಂಭವಾದದ್ದು ಉರ್ದು ...ತು ಹಿಂದಿಯಲ್ಲಿ, ದೇಶ ವಿಭಜನೆಯ ನಂತರ ಎರಡೂ ...ಗಳ ಎರಡೂ ಭಾಷೆಯ ಸಾಹಿತ್ಯಲೋಕದಲ್ಲಿ ಈ ...ತ್ಯ ಚಳವಳಿ ತನ್ನ ಉಚ್ಛ್ರಾಯಕ್ಕೇರಿತು. ಪಾಕಿಸ್ತಾನದಲ್ಲಂತೂ ...-ಧಾರ್ಮಿಕ ನಿರಂಕುಶ ಪ್ರಭುತ್ವ, ಪ್ರಗತಿಶೀಲ ...ತಿಗಳ ದಂಡು ತನ್ನ ಮೇಲೆ ಏರಿಬರುವ ಸನ್ನಾಹದಲ್ಲಿದೆ ...ದು ಭಾವಿಸಿದಂತಿತ್ತು. ಈ ದಂಡಿನಲ್ಲಿದ್ದವರೆಲ್ಲ ...ನಿಸ್ಟರಲ್ಲದಿದ್ದರೂ ಕಮ್ಯುನಿಸ್ಟರೆಲ್ಲ ಅದಕ್ಕೆ ಒತ್ತಾಸೆಯಾಗಿ ...ದ್ದಾರೆನ್ನುವುದು ಅದರ ಗ್ರಹಿಕೆಯಾಗಿತ್ತು. ಅಧಿಕಾರದ ...ಣಿ ಹಿಡಿದವರು ಭಾರಿ ಜಮೀನುದಾರರು. ಅವರ ... ಸಹಜವಾಗಿತ್ತು. ನೇರವಾಗಿ ಅಧಿಕಾರ ಸೂತ್ರ ...ಮುದಿದ್ದರೂ ತನ್ನ ಅಸ್ತಿತ್ವಕ್ಕೆ ಕುತ್ತು ಬರಲಿದೆಯೆಂದು ...ಹಿತಶಾಹಿ ವರ್ಗ ತಲ್ಲಣಗೊಂಡಿತ್ತು. ಪ್ರಗತಿಶೀಲ ...ರೆ ಕಾಫಿರರ ಪಡೆಯೆಂದು ಭಾವಿಸಿದ್ದ ಮುಲ್ಲಾ ಮೌಲವಿ ...ಭಯವೂ ಸ್ವಾಭಾವಿಕವಾಗಿತ್ತು.

...ಅಂತೂ ಪಾಕಿಸ್ತಾನ ರಣರಂಗವಾಗಿ ಬಿಟ್ಟಿತು. ...ಶೀಲರ ಮುಖವಾಣಿಯಂತಿದ್ದ 'ಪಾಕಿಸ್ತಾನ್ ಟೈಮ್ಸ್' ...ಕೆ ಪ್ರಭುತ್ವ ಕೆಂಗಣ್ಣು ಬೀರಿತು. ಈ ಪತ್ರಿಕೆ ಓದುವವರು ...ದ್ರೋಹಿಗಳೂ ಕಾಫಿರರೂ ಎಂದು ಪ್ರಚಾರ ...ತಲಾಯಿತು. ಜಾಹಿರಾತುದಾರರು, ಲೇಖಕರು ಹಾಗೂ ...ಗರಿಂದಲೇ ಯಾವುದೇ ಪತ್ರಿಕೆ ಬೆಳೆಯಬಲ್ಲದು. ...ಸ್ತಾನ್ ಟೈಮ್ಸ್' ಸಂಪೂರ್ಣವಾಗಿ ಜಾಹಿರಾತುದಾರರನ್ನು ...ಲಂಬಿಸಿರಲಿಲ್ಲ, ಕಾರಣ ಸ್ಪಷ್ಟವಿತ್ತು. ಪ್ರಗತಿಶೀಲ ...ಧರ್ಮದ ಲೇಖಕರು ಮಾತ್ರ ಪತ್ರಿಕೆಗೆ ಲೇಖನಗಳನ್ನು ...ಪ ಕಳುಹಿಸುತ್ತಿದ್ದರು. ಇನ್ನು ಪ್ರಜ್ಞಾವಂತ ಓದುಗರು ...ನ ಪತ್ರಿಕೆ ಖರೀದಿಸತೊಡಗಿದರು. ಪತ್ರಿಕೆ ಯಾವತ್ತಾದರೂ ...ಬಿಡಬಹುದು ಎಂದು ಎಲ್ಲರಿಗೂ ಅನಿಸತೊಡಗಿತು.

...ಪತ್ರಿಕೆಯ ಸಂಪಾದಕರಾಗಿದ್ದ ಸುಪ್ರಸಿದ್ಧ ಕವಿ ಫೈಜ್ ...ಮದ್ ಫೈಜ್‌ರ ಗುರುಗಳಾದ ಪತರಸ್ ಬುಖಾರಿ ...ಪ ದಿನ ತನ್ನ ಶಿಷ್ಯನ ಪತ್ರಿಕಾ ಕಾರ್ಯಾಲಯಕ್ಕೆ ...ರು. ಬಂದವರೇ ತನ್ನ ಶಿಷ್ಯನಿಗೆ ಎದೆಗುಂದಬೇಡ ...ರು. ಶಿಷ್ಯನಿಗೆ ಅಚ್ಚರಿ. ಕಾರಣ ಬುಖಾರಿ ಕಮ್ಯುನಿಸ್ಟ್ ...ಧಿಯೇನಾಗಿರಲಿಲ್ಲ. ಆದರೆ ಪ್ರಗತಿಶೀಲ ಸಾಹಿತ್ಯ ಸಾಹಿತ್ಯವೇ ಅಲ್ಲವೆನ್ನುತ್ತಿದ್ದವರು. ಅವರ ತಕರಾರೆಂದರೆ ವೈಚಾರಿಕ ಬದ್ಧತೆ ಸೃಜನಶೀಲತೆಗೆ ಮಾರಕವಾಗುತ್ತದೆ ಎನ್ನುವುದಾಗಿತ್ತು. ಕನ್ನಡದ ಬೀಚಿ ಅವರಂತೆ ಪತರಸ್ ಬುಖಾರಿ ಗೀಚಿದ್ದೆಲ್ಲವೂ ಹಾಸ್ಯ ಸಾಹಿತ್ಯವಾಗುತ್ತಿತ್ತು. ಯಾವತ್ತೂ ತಾವೂ ನಗುತ್ತ ಇತರರನ್ನೂ ನಗಿಸುತ್ತಲಿದ್ದ ಅವರ ಮನಸ್ಸು ತನ್ನ ಪ್ರತಿಭಾವಂತ ಶಿಷ್ಯನ ಪತ್ರಿಕೆಗೆ ಒದಗಿದ ದುಸ್ಥಿತಿ ಕಂಡು ಮೊದಲ ಬಾರಿಗೆ ಮುದುಡಿತೇನೋ. ಅದಕ್ಕೇ ಶಿಷ್ಯ ವಾತ್ಸಲ್ಯವೆನ್ನುವುದು, ಅಲ್ಲವೆ? ಉರ್ದು ಸಾಹಿತ್ಯದ ಆ ಹಿರಿಯ ಹಾಸ್ಯ ಸಾಹಿತಿ ಬುಖಾರಿ ತನ್ನ ಶಿಷ್ಯನ ಮುಖದಲ್ಲಿ ನಗೆ ನವಿಲು ಮತ್ತೆ ನರ್ತಿಸುವಂತಾಗಲೆಂದು ದಿನವೂ ಕಾರ್ಯಾಲಯಕ್ಕೆ ಬರಲು ತೀರ್ಮಾನಿಸಿದರು.



ವಾಚಕರವಾಣಿಯ ಮಹಿಮೆ

ಎಂ.ಎ ಓದುತ್ತಿದ್ದಾಗ ಫೈಜ್ ಕ್ಲಾಸಿಗೆ ಚಕ್ಕರ್ ಹೊಡೆಯುತ್ತಿದ್ದರೂ ಪ್ರಥಮ, ದ್ವಿತೀಯ ಸ್ಥಾನ ಗಿಟ್ಟಿಸುತ್ತಿದ್ದ ವಿದ್ಯಾರ್ಥಿಗಳಿಗಿಂತಲೂ ಹೆಚ್ಚಿನ ಜ್ಞಾನ ಸಂಪಾದನೆ ಮಾಡಿದವರೆನ್ನುವುದು ಅವರ ಗುರುಗಳಿಗೂ ಗೊತ್ತಿತ್ತಂತೆ. ಹಾಗಾಗಿ ಒಬ್ಬಿಬ್ಬರು ಪ್ರಾಧ್ಯಾಪಕರಿಗೆ ಪಾಠ ಮಾಡುವ ಮನಸ್ಸಿರದಿದ್ದರೆ ಫೈಜ್ ಅವರಿಗೇ ಪಾಠ ಮಾಡಲು ಹೇಳುತ್ತಿದ್ದರು. ಪ್ರೊ. ಬುಖಾರಿ ಮಾತ್ರ ಬಲು ಕಟ್ಟುನಿಟ್ಟಿನ ಅಧ್ಯಾಪಕರಾಗಿದ್ದರು. ಆದರೆ ಗಾಂಭೀರ್ಯವನ್ನು ಬಲವಾಗಿ ದ್ವೇಷಿಸುತ್ತಿದ್ದ ಅವರು ತಾವು ಮಾತ್ರ ನಗು ನಗುತ್ತ ಇರಬೇಕೆಂದವರಲ್ಲ. "ವಿದ್ಯಾರ್ಥಿ ಜೀವನ ಮುಗಿದ ಮೇಲೆ ಶಿಕ್ಷಕನಾಗಬೇಕು. ವಿದ್ಯಾರ್ಥಿ ಹಾಗೂ ಶಿಕ್ಷಕ - ಹೀಗೆ ದ್ವಿಪಾತ್ರ ವಹಿಸುವವನು 'ಒಡೆದ ವ್ಯಕ್ತಿತ್ವ'ಕ್ಕೆ ಬಲಿಯಾಗಬಹುದು" ಎಂದು ಅವರು ಫೈಜ್‌ರನ್ನು ಎಚ್ಚರಿಸಿದ್ದರಂತೆ!

ಒಂದು ದಿನ ಅವರು ಪತ್ರಿಕೆ ಸೊರಗುತ್ತಿರುವುದಕ್ಕೆ ಕಾರಣಗಳನ್ನು ಶೋಧಿಸುವುದರಲ್ಲಿ ತಲ್ಲೀನರಾದರು. ದೇಶದ ಪ್ರತಿಷ್ಠಿತ ಪತ್ರಿಕೆಯ ವಾಚಕರ ವಾಣಿ ಅಂಕಣಕ್ಕೆ ಓದುಗರ ಓಲೆಗಳೇ ಬರುತ್ತಿಲ್ಲವಲ್ಲವೆಂದು ಅವರು ಕಳವಳಕ್ಕೀಡಾದರು! ಸಂಪಾದಕೀಯದಷ್ಟೇ ವಾಚಕರವಾಣಿಯೂ ಮಹತ್ವದ್ದಷ್ಟೇ ಅಲ್ಲ, ಪತ್ರಿಕೆಯ ಅನಿವಾರ್ಯ ಅಂಗವೆಂದು ಅವರು ಭಾವಿಸಿದ್ದರು. ಸಂಪಾದಕೀಯ ಪತ್ರಿಕೆಯ ತಲೆಯಾದರೆ ವಾಚಕರವಾಣಿ ಅದರ ಮೂಗು. ಪತ್ರಿಕೆಯ ಮೂಗು ಕತ್ತರಿಸುವ ಹುನ್ನಾರ ಯಾರದಿರಬಹುದೆಂದು ಯೋಚನೆಗೆ ತೊಡಗಿದರು. ಇದಕ್ಕೆ ಪ್ರತಿ ತಂತ್ರ ಹೆಣೆದೇ ತೀರಬೇಕೆಂದು ಬುಖಾರಿ ಟೊಂಕಕಟ್ಟಿ ನಿಂತರು.

ಹೆಚ್ಚಿಗೇನೂ ತಲೆ ಕೆಡಿಸಿಕೊಳ್ಳದೇ ಬುಖಾರಿ ತನ್ನ ಶಿಷ್ಯನ ಬಳಿ ಹೋದರು. "ಅರೆ ಫೈಜ್, ನನಗೆ ಬರೆಯಲು ಕಾಗದ ಕೊಡಪ್ಪ" ಎಂದರು. ಫೈಜ್‌ರಿಗೆ ಏನೂ ತೋಚದೆ ತಮ್ಮ ಗುರುಗಳನ್ನು ದಿಟ್ಟಿಸಿ ನೋಡಿದರು. ಕಾಗದ ಇಸಿದುಕೊಂಡ ಬುಖಾರಿ ಕಾರ್ಯಾಲಯದ ಒಂದು ಮೂಲೆಯಲ್ಲಿ ಕುಳಿತುಕೊಂಡು ಏನೋ ಗೀಚತೊಡಗಿದರು. ಬುಖಾರಿ ಅವರ ಒಳಗಿನ ಸೃಜನಶೀಲ ಸಾಹಿತಿ ಕ್ರಿಯಾಶೀಲನಾಗಿ ಬಿಟ್ಟಿದ್ದ. ಸ್ವಲ್ಪ ಹೊತ್ತು ಕಳೆದ ಮೇಲೆ ಅವರು ಮತ್ತೆ ತಮ್ಮ ಶಿಷ್ಯನ ಬಳಿ ಹೋದರು. ತಮ್ಮ ಬರಹವನ್ನು ಸಂಪಾದಕರಿಗೆ ಒಪ್ಪಿಸಿದರು. ಅವರು ತಮ್ಮ ಗುರುವಿನ ಬರಹ ಓದಿ ಬಿದ್ದು ಬಿದ್ದು ನಗಲಾರಂಭಿಸಿದರು.

"ಲಾಹೋರ್ ಏಷ್ಯಾದ ಪ್ಯಾರಿಸ್ ಎನಿಸಿಕೊಂಡಿತ್ತು. ಅನಾರಕಲಿ ಮಾರ್ಕೆಟ್‌ನಲ್ಲಿ ಚೆಲುವೆಯೊಬ್ಬಳು ಜಿಂಕೆಯಂತೆ ಚೆಂಗನೆ ನೆಗೆಯುತ್ತ ಸಾಗಿದ್ದಳು. ತನ್ನ ಕಡುಕಪ್ಪಾದ ಕೇಶರಾಶಿಯೂ ತನ್ನಂತೆಯೇ ಸ್ವಚ್ಛಂದವಾಗಿ ಹಾರಾಡುತಿರಲಿ ಎಂದು ಅವಳು ಬಯಸಿದ್ದಳೇನೋ. 'ಸಾವನ ಕೀ ಘಟಾ ಛಾಯಿ....' ಎಂದು ಕಪ್ಪು ಮುಸಸ್ಸುಗಳು ನವಿಲಾಗಿ ನರ್ತಿಸತೊಡಗಿದವು. ಆದರೆ ಅಂಗಡಿಯೊಂದರಲ್ಲಿ ಕುಳಿತುಕೊಂಡಿದ್ದ ಮೌಲವಿಯೊಬ್ಬರು ದಿಗ್ಗನೆ ಎದ್ದು ಹೊರ ಬಂದರು. ಆ ಮನಮೋಹಕ ದೃಶ್ಯ ಕಂಡು ಅವರು ಹಿರಿಹಿರಿ ಹಿಗ್ಗಬೇಕು ಎನ್ನುವಿರಾ? ಇಲ್ಲ, ಪರ್ದಾ ಧರಿಸದೆ ತಿರುಗುತ್ತಿರುವ ಆ ಹೆಣ್ಣು ಇಸ್ಲಾಂ ಧರ್ಮಕ್ಕೆ ಕಳಂಕಪ್ರಾಯಳಾಗಿದ್ದಾಳೆ ಎಂದ ಮೌಲವಿ ಸಾಹೇಬರ ಪಿತ್ತ ನೆತ್ತಿಗೇರಿತು. ಕೈಯಲ್ಲಿದ್ದ ಕತ್ತರಿಯಿಂದ ಯುವತಿಯ ಮುಂಗುರುಳನ್ನು ಕತ್ತರಿಸಿಬಿಟ್ಟರು. ಆ ಮೌಲವಿಯ ಅಧಿಕ ಪ್ರಸಂಗದ ಕೃತ್ಯವನ್ನು ಪ್ರಜ್ಞಾವಂತರು ಖಂಡಿಸಲೇಬೇಕು.." ಹೀಗೆ ಅದು 'ಓದುಗನೊಬ್ಬ' ವಾಚಕರ ವಾಣಿಗೆ ಬರೆದ ಬಲು ಅಪರೂಪದ ಪತ್ರವಾಗಿತ್ತು.

ಫೈಜ್ ಪತ್ರವನ್ನು ಪ್ರಕಟಿಸಬಹುದು ಎಂದರು. ಮರುದಿನ ಬುಖಾರಿ ಪತ್ರಿಕೆ ಕಾರ್ಯಾಲಯಕ್ಕೆ ಬಂದವರೇ ಮತ್ತೆ ಬರವಣಿಗೆಗೆ ತೊಡಗಿದರು. ಅಂದು ಅವರು ಎರಡು ಓದುಗರ ಓಲೆಗಳನ್ನು ಸೃಷ್ಟಿಸಿದ್ದರು. ಜತೆಗೆ ಅವರು ಸೃಷ್ಟಿಸಿದ್ದ ಒಬ್ಬ ಓದುಗ ಮೌಲಾನಾ ಅವರ ಕೃತ್ಯವನ್ನು ಖಂಡಿಸಿದ್ದರೆ ಇನ್ನೊಬ್ಬ ಅದನ್ನು ಸಮರ್ಥಿಸಿಕೊಂಡಿದ್ದ. ತಮ್ಮೆದುರು ಹಾಜರುಪಡಿಸಲಾದ ಆ ಇಬ್ಬರು ಓದುಗರ ಓಲೆಗಳನ್ನೂ ಸಂಪಾದಕರು ಪ್ರಕಟಿಸದೆ ವಿಧಿ ಇರಲಿಲ್ಲ. ಮೂರನೆಯ ದಿನ ಬುಖಾರಿ ಒಟ್ಟು ನಾಲ್ಕು ಜನ ಓದುಗರನ್ನೂ ನಾಲ್ಕು ಓದುಗರ ಓಲೆಗಳನ್ನೂ ಸೃಷ್ಟಿಸಿದರು. ಆ ಪೈಕಿ ಇಬ್ಬರು 'ಮೌಲಾನಾ ಕೈಂಚಿ'ಯ ಕೃತ್ಯವನ್ನು ಬಲವಾಗಿ ಸಮರ್ಥಿಸಿಕೊಂಡಿದ್ದರೆ ಉಳಿದ ಇಬ್ಬರು ಅದನ್ನು ಉಗ್ರವಾಗಿ ಖಂಡಿಸಿದ್ದರು. ನಾಲ್ಕೂ ಓಲೆಗಳು ಪ್ರಕಟಗೊಂಡವು. ನಾಲ್ಕನೆಯ ದಿನ ಬುಖಾರಿ ಎಂಟು ಜನ ಓದುಗರನ್ನು ಹಾಗೂ ಎಂಟು ಓಲೆಗಳನ್ನು ಸೃಷ್ಟಿಸಿದರು. ಅವರಲ್ಲಿ ಅರ್ಧದಷ್ಟು ಜನ ಮೌಲಾನಾ ಕೈಂಚಿಯ ಕಟ್ಟಾ ಸಮರ್ಥಕರಾಗಿ ಇನ್ನರ್ಧ ಜನ ಅವರ ಕಟು ವಿರೋಧಿಗಳಾಗಿ ತಮ್ಮ ತಮ್ಮ ಅನಿಸಿಕೆಗಳನ್ನು, ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದರು. ಎಲ್ಲಾ ಪತ್ರಗಳಿಗೂ ತಮ್ಮ ಶಿಷ್ಯನಿಂದ ಪ್ರಕಟಣೆಗೆ ' ಅನುಮತಿ ಸಿಕ್ಕಿತು.

ಮರುದಿನ ಬುಖಾರಿ ಪತ್ರಿಕೆಯ ಕಾರ್ಯಾಲಯಕ್ಕೆ ಬರುತ್ತಲೇ ದಂಗು ಬಡಿದು ನಿಂತುಬಿಟ್ಟರು. ತಮ್ಮ ಗುರುಗಳನ್ನು ಹೃತ್ಪೂರ್ವಕ ಸ್ವಾಗತಿಸಿದ ಫೈಜ್ ತಮ್ಮೆದುರು ರಾಶಿಯಾಗಿ ಬಿದ್ದಿದ್ದ ಓದುಗರ ಓಲೆಗಳತ್ತ ಅವರ ಗಮನ ಸೆಳೆದರು. "ಜನಾಬ್, ಇನ್ನು ನೀವು ನಮ್ಮ ಪತ್ರಿಕೆಯ ವಾಚಕರವಾಣಿಯ ಮುಖ್ಯಸ್ಥರು" ಎಂದರು. "ಏನೋ ಮಹಾರಾಯಾ, ನಮಾಜ ಮಾಡಾಕ ಹ್ವಾದ್ರ ಮಸೀದಿ ಕೊರಳಿಗೆ ಬಿದ್ಹಾಂಗಾಯ್ತಲ್ಲೋ" ಎಂದರು ಬುಖಾರಿ. ಇನ್ನು ಓದುಗರನ್ನಾಗಲೀ ಓದುಗರ ಓಲೆಗಳನ್ನಾಗಲೀ ಸೃಷ್ಟಿಸುವ ಆಗತ್ಯವಿರಲಿಲ್ಲ. ಆದರೆ ಅಸಲಿ ಓದುಗರ ಓಲೆಗಳ ಸುರಿಮಳೆ ವಾರಗಟ್ಟಲೆ ಮುಂದುವರಿಯಿತು. ಪತ್ರಿಕೆಯ ನಕಲಿ ಓದುಗರು ಹುಟ್ಟು ಹಾಕಿದ ವಿವಾದವನ್ನು ಅಸಲಿ ಓದುಗರು ಅದರ ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ದರು.

ಪಾಕಿಸ್ತಾನದಲ್ಲಿ ಹೀಗೆ ಅಧಿಕೃತವಾದ ಮಹಿಳಾ ವಿಮೋಚನಾ ಆಂದೋಲನಕ್ಕೆ ಪರೋಕ್ಷವಾಗಿ ಕಾರಣೀಭೂತರಾದ ತಮ್ಮ ಗುರುವಿಗೆ ಫೈಜ್ ನುಡಿ ನಮನ ಸಲ್ಲಿಸಿದ ಪರಿ ಇದು. ಅನಂತರ ಬುಖಾರಿ ಅವರಂತೆಯೇ ಬದ್ಧ ಸಾಹಿತಿಗಳ ಕಟ್ಟಾ ವಿರೋಧಿಗಳು ಸಹ ಲೇಖನಿ ಖಡ್ಗವಾಗಲಾರದೆಂದು ಹೇಳುವುದಕ್ಕೆ ಹಿಂದೆ ಮುಂದೆ ನೋಡಿರಬೇಕು. ಸಾಹಿತ್ಯ ಸಮಾಜವನ್ನು ಬದಲಾಯಿಸಲಾರದೆಂದು ಹೇಳುವವರು ಸಹ ಎದೆ ಎದೆ ಬಡಿದುಕೊಂಡರೋ ಬಾಯಿ ಬಾಯಿ ಬಡಿದುಕೊಂಡರೋ ತಿಳಿಯದು.

• ಹಸನ್ ನಯೀಂ ಸುರಕೋಡ

ಸಾವಿನ ಬೆಲೆ

(1)
ಸೋತ ಪ್ರತಿ ಸೋಲನ್ನ
ಮರಳಿ ಗೆಲ್ಲಲಾಗುವುದಿಲ್ಲ
ಅವುಗಳನ್ನು ಜನ್ಮತಃ
ಕಾಪಿರೈಟ್‌ಗಳ ಹಾಗೆ ಕಾಪಿಟ್ಟು
ಬಾದ್ಯತೆಗಳ ಹಾಗೆ ಬಳಸಬೇಕು
ನಾಳಿನ ಗೆಲುವುಗಳಿಗೆ ಅವು
ಉದ್ದೀಪನ ಮದ್ದಿನಂತಾಗಬಹುದು.

(2)
ನೆನಪುಗಳನ್ನು ಮರಳಿ ಕಟ್ಟಿ
ಕೆಡವಲಾಗುವುದಿಲ್ಲ, ಅವುಗಳನ್ನು
ಸದಾ ಸ್ನೇಹಿತರಂತೆ ಜೊತೆಗಿಟ್ಟುಕೊಂಡಿರಬೇಕು
ನಾಳಿನ ಕ್ಷಣಗಳನ್ನು ಆಯ್ದುಕೊಳ್ಳುವಾಗ
ಅವು ದಾರಿಯ ಪಣಜೆಗಳಾಗಿ
ಕೈಹಿಡಿದು ನಡೆಸಬಲ್ಲವು.

(3)
ಯಶಸ್ಸುಗಳನ್ನು ಹಾಗೆ
ಯಾರು ಪುಕ್ಕಟೆಯಾಗಿ ಹಂಚುವುದಿಲ್ಲ
ಅದಕ್ಕಾಗಿ ಬುದ್ಧಿ ಮತ್ತು ಬೆವರುಗಳನ್ನು
ಯೋಗ್ಯ ಬೆಲೆಗೆ ಮಾರುವುದನ್ನು
ಸಹನೆಯನ್ನು ಅಡವಿಟ್ಟು ಕಾಯಲು ಕಲಿತಿರಬೇಕು
ಆಗ ಮಾತ್ರ ಯಶಸ್ಸಿನ ಅಂತಿಮ ಕ್ಷಣಗಳನ್ನು
ಅದ್ಭುತವಾಗಿ ಗುಟುಕರಿಸಬಹುದು.

(4)
ಸಾವು ಬದುಕಿಗೆ ಖಂಡಿತ ಉತ್ತರವಾಗಲಾರದು
ಹಾಗಾದ ಮಾತ್ರಕ್ಕೆ ಸಾವನ್ನು ಬಾಯಿಮುಚ್ಚಿಸಿ
ಕೂರಿಸಲಾಗದು
ಅವುಗಳ ಪಾಡಿಗೆ ಅವನ್ನು ಬಿಟ್ಟುಬಿಡುವುದು ಜಾಣತನವೇ
ಆದರೆ ಸಾಯಲಿಕ್ಕಾಗಿಯೇ ಬದುಕುವುದು
ಸಾವಿಗೆ ಸೂಕ್ತ ಬೆಲೆಯಾಗಲಾರದು.

• ಸ್ಟೈನ್‌ಜಾನ್ಸ್ ಕೊಟ್ಟೂರು



ಹಾಸನ: ಶಿಲ್ಪಾಳ ಹತ್ಯೆ ಕೊಂದವನು ಡ್ರೈವರ್ ನವೀನ್



ಶಿಲ್ಪಾ ಇನ್ನೊಂದು ತಿಂಗಳಲ್ಲಿ ಹಸೆಮಣೆ ಏರಿ ಹೊಸ ಬದುಕಿಗೆ ಹೆಜ್ಜೆ ಇಡಬೇಕಾಗಿದ್ದ ಹೆಣ್ಣುಮಗಳು. ಮೇ 09ಕ್ಕೆ ಆಕೆಯ ಮದುವೆಯೂ ಫಿಕ್ಸ್ ಆಗಿತ್ತು, ಲಗ್ನಪತ್ರಿಕೆಯ ಮೇಲೆ ವಧುವರರ ಹೆಸರುಗಳೂ ಅಚ್ಚಾಗಿ ಹಂಚಿಕೆಯಾಗಿದ್ದವು. ಆದರೆ ದುರದೃಷ್ಟವಶಾತ್ ಕೊಲೆಯಾಗಿ ಹೋಗಿದ್ದಾಳೆ. ಅದೂ ಆಕೆ ಕೆಲಸ ಮಾಡುತ್ತಿದ್ದ ಹಾಸನ ಕೆ.ಎಸ್.ಆರ್.ಟಿ.ಸಿ ಡಿಪೋದಲ್ಲಿ, ಹಗಲು ಹೊತ್ತಿನಲ್ಲೇ ಈ ಹತ್ಯೆ ನಡೆದಿದೆ.

ಆಕೆಯ ಹೆಸರು ಶಿಲ್ಪಾ. ವಯಸ್ಸಿನ್ನು 23 ವರ್ಷ ಅಷ್ಟೆ. ಹಾಸನ ತಾಲ್ಲೂಕಿನ ಕಟ್ಟಾಯ ಹೋಬಳಿಯ ಮೂಡಲಕೊಪ್ಪಲು ಗ್ರಾಮದ ಚಂದ್ರಪ್ಪ ಎಂಬುವವರ ಮಗಳು. ಕಷ್ಟಪಟ್ಟು ಓದಿದ್ದ ಶಿಲ್ಪಾ ಈಗ್ಗೆ ಮೂರು ವರ್ಷಗಳ ಹಿಂದೆಯೇ ಹಾಸನದ ಕೆ.ಎಸ್.ಆರ್.ಟಿ.ಸಿ. ಪ್ರಾದೇಶಿಕ ಕಾರ್ಯಾಗಾರದಲ್ಲಿ ತಾಂತ್ರಿಕ ಸಹಾಯಕಿಯ ಕೆಲಸ ಗಿಟ್ಟಿಸಿಕೊಂಡಿದ್ದಳು. ಅದರ ಜೊತೆಗೆ ಕಾರ್ಯಾಗಾರದಲ್ಲೇ ಇದ್ದ ಆರೋಗ್ಯ ಕೇಂದ್ರದಲ್ಲಿ ವೈದ್ಯರ ಸಹಾಯಕಿಯಾಗಿಯೂ ಕೆಲಸ ಮಾಡಿಕೊಂಡಿದ್ದಳು. ಉತ್ತಮ ನಡತೆಯ ಕಾರಣದಿಂದಾಗಿ ಚಿಕ್ಕ ವಯಸ್ಸಿನವಳಾಗಿದ್ದರೂ ತಾನು ಕೆಲಸ ಮಾಡುತ್ತಿದ್ದ ವಾತಾವರಣದಲ್ಲಿ ಗೌರವದಿಂದ ಕಾಣಲ್ಪಡುತ್ತಿದ್ದಂತವಳು. ಶಿಲ್ಪಾಗೆ ಬರುವ ಮೇ 9, 10ರಂದು ಹಾಸನ ತಾಲ್ಲೂಕಿನ ಅಂಕಪುರ ಸಮೀಪದ ತಮ್ಲಾಪುರ ಗ್ರಾಮದ ಯುವಕ ಉದಯಕುಮಾರ್‌ನ ಜೊತೆಗೆ ಮದುವೆಯೂ ಫಿಕ್ಸ್ ಆಗಿತ್ತು.

ಆದರೆ ಮಾರ್ಚ್ 20 ಆಕೆಯ ಜೀವನದ ಕೊನೆಯ ದಿನವಾಗಿ ಹೋಗಿದೆ. ಎಂದಿನಂತೆ ಕೆಲಸಕ್ಕೆ ಬಂದ ಶಿಲ್ಪಾ ಕಾರ್ಯಾಗಾರದ ಬೃಹತ್ ಗೇಟ್‌ನಲ್ಲಿ ಸೆಕ್ಯೂರಿಟಿಗಳಿಂದ ತಪಾಸಣೆಗೊಳಪಟ್ಟು ಕೆಲಸದಲ್ಲಿ ನಿರತಳಾಗಿದ್ದಳು. ಆಗ ಸುಮಾರು ಮಧ್ಯಾಹ್ನ 12.30ರ ಸಮಯ, ಕಾರ್ಯಾಗಾರಕ್ಕೆ ವೈದ್ಯರು ಬರುವ ಸಮಯವಾದ್ದರಿಂದ ವೈದ್ಯರ ಕೊಠಡಿ ಕಡೆಗೆ ಹೊರಟಿದ್ದಳು. ಆದರೆ ಹೊಂಚು ಹಾಕಿ ಕೂತಿದ್ದ ಡ್ರೈವರ್ ನವೀನ್ ಒಮ್ಮೆಲೆ ಶಿಲ್ಪಾ ಮೇಲೆರಗಿ ಆಕೆಯ ಕುತ್ತಿಗೆಯನ್ನು ಕೊಯ್ದಿದ್ದಾನೆ. ಅಂದಹಾಗೆ ಗೌಡ್ವೇನಹಳ್ಳಿ ಮೂಲದ ಈ ನವೀನ್ ಶಿಲ್ಪಾಳನ್ನು ಈ ಮೊದಲು ಪ್ರೀತಿಸುತ್ತಿದ್ದ. ಆದರೆ ಅದು ಒನ್‌ವೇ ಪ್ರೀತಿಯಾಗಿತ್ತು, ಆಕೆ ಒಪ್ಪದೆ ಈಗ ಬೇರೆ ಮದುವೆಗೆ ಸಿದ್ಧವಾಗಿದ್ದರಿಂದ ಆಕ್ರೋಶಗೊಂಡ ನವೀನ್ ಈ ಕೃತ್ಯಕ್ಕೆ ಮುಂದಾಗಿದ್ದ. ಇಂತಹದ್ದೊಂದು ಅನಾಹುತ ನಡೆಯಬಹುದೆನ್ನುವುದರ ಸುಳಿವೇ ಇರದಿದ್ದ ಶಿಲ್ಪಾ ಒಮ್ಮೆಲೇ ಆಘಾತಗೊಂಡಿದ್ದಳು. ಕುತ್ತಿಗೆಯನ್ನು ಸೀಳಿದ್ದರಿಂದ ರಕ್ತ ಉಕ್ಕಲು ಆರಂಭಿಸಿತ್ತು, ಜೀವ ಉಳಿಸಿಕೊಳ್ಳಲು ಶಿಲ್ಪಾ ರಕ್ತದ ಮಡುವಿನಲ್ಲೂ ಕುತ್ತಿಗೆಯನ್ನು ಅದುಮಿಕೊಂಡು ಹೊರಬಂದು ಚೀರಿಕೊಂಡು ನೆಲಕ್ಕುರುಳಿದ್ದಾಳೆ. ಇದೆಲ್ಲಾ ಕೇವಲ ಸೆಕೆಂಡ್‌ಗಳ ಲೆಕ್ಕಾಚಾರದಲ್ಲಿ ಜರುಗಿಹೋಗಿತ್ತು, ಇವನ್ನು ಗಮನಿಸಿದ ಸಹ ಸಿಬ್ಬಂದಿ ಕೂಡಲೇ ಶಿಲ್ಪಾಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರಾದರೂ ತೀವ್ರ ರಕ್ತಸ್ರಾವ ಮತ್ತು ಮಾನಸಿಕ ಆಘಾತದಿಂದಾಗಿ ಶಿಲ್ಪಾಳ ಪ್ರಾಣಪಕ್ಷಿ ಹಾರಿಹೋಗಿತ್ತು.





ಪೊಲೀಸರಿಗೆ ಘಟನೆ ನಡೆದ ಸ್ಥಳದಲ್ಲಿ ನಾಲ್ಕು ಮೊಬೈಲ್‌ಗಳು ಮತ್ತು ಕೊಲೆಗೆ ಬಳಸಿದ ಚಾಕು ಸಿಕ್ಕಿದೆ. ಸ್ಥಳ ಪರಿಶೀಲಿಸಿದ ಪೊಲೀಸ್ ನಾಯಿ ರಾಣಿ ಹಾಸನದ ರೈಲ್ವೆ ನಿಲ್ದಾಣದವರೆಗೆ ಹೋಗಿ ಬಂದಿದೆ. ಅಂದರೆ ಕೊಲೆ ಮಾಡಿದ ಆರೋಪಿ ನೇರವಾಗಿ ರೈಲ್ವೆ ನಿಲ್ದಾಣಕ್ಕೆ ಬಂದಿದ್ದಾನೆ. ಆ ಸಮಯಕ್ಕೆ ಸರಿಯಾಗಿ ಮೈಸೂರಿನಿಂದ ಶಿವಮೊಗ್ಗಕ್ಕೆ ಪ್ಯಾಸೆಂಜರ್ ರೈಲು ಹೊರಡುತ್ತದಾದ್ದರಿಂದ ಕೊಲೆಗಾರ ಅದರಲ್ಲಿ ಪರಾರಿಯಾಗಿರಬಹುದೆಂದು ಪೊಲೀಸರು ಅಂದಾಜಿಸಿದ್ದಾರೆ.

ಕೆ.ಎಸ್.ಆರ್.ಟಿಸಿ ಪ್ರಾದೇಶಿಕ ಕಾರ್ಯಾಗಾರದ ಒಳಹೊಕ್ಕುವುದು ಸುಲಭದ ಮಾತೇನಲ್ಲ, ಅಲ್ಲಿನ ಸಿಬ್ಬಂದಿಗಳನ್ನೂ ತಲಾಷ್ ಮಾಡಿದ ನಂತರವಷ್ಟೆ ಒಳಗೆ ಬಿಡುವ ಸಿಸ್ಟಮ್ ಇದೆ. ಆದರೂ ಮಹಿಳಾ ಉದ್ಯೋಗಿಯನ್ನು ಭೀಕರವಾಗಿ ಕೊಲೆಮಾಡಿದ ನವೀನ್ ನಿರಾಯಾಸವಾಗಿ ಅಲ್ಲಿಂದ ತಪ್ಪಿಸಿಕೊಂಡು ಹೊರ ನಡೆದಿದ್ದಾನೆಂದರೆ, ಕೊಲೆಗೆ ಕಾರ್ಯಾಗಾರದ ಒಳಗೇ ಸಾಥ್ ನೀಡಲಾಗಿತ್ತೆ? ಪೊಲೀಸರು ಶಿಲ್ಪಾಳ ಕೊಲೆ ಕೇಸಿನ ತನಿಖೆ ಮುಂದುವರೆಸಿದ್ದಾರೆ. ಜಿಲ್ಲಾ ಎಸ್ಪಿ ಅಮಿತ್ ಸಿಂಗ್ ತಮ್ಮ ನೇತೃತ್ವದಲ್ಲಿ ಎರಡು ತಂಡ ಮಾಡಿ ಈ ಪ್ರಕರಣದ ತನಿಖೆ ಆರಂಭಿಸಿದ್ದಾರೆ.

-ವೇಣುಕುಮಾರ್

ಲಂಕೇಶ್ ಕಾರ್ಯಕ್ರಮ ಬೇರೆ ಬೇರೆ ಜಿಲ್ಲೆಗಳಲ್ಲೂ ನಡೆಯಲಿ



ಮಾರ್ಚ್ 11ರ ಭಾನುವಾರ ಮಂಗಳೂರಿನಲ್ಲಿ 'ಲಂಕೇಶ್ 77' ಕಾರ್ಯಕ್ರಮಕ್ಕೆ ಹೋಗಬೇಕು ಎಂದು ಶುಕ್ರವಾರವೇ ಅಂದುಕೊಂಡಿದ್ದೆ. ಮೈಸೂರಿನ ಗೆಳೆಯ ಸತೀಶ್‌ಗೆ ಫೋನ್ ಮಾಡಿ ಇಬ್ಬರೂ ಮಂಗಳೂರಿಗೆ ಹೋಗುವುದೆಂದು ತೀರ್ಮಾನಿಸಿದೆವು. "ಶನಿವಾರ ರಾತ್ರಿ ನೀನು ಮೈಸೂರಿನಿಂದ ಮಂಗಳೂರಿನ ರೈಲಿನಲ್ಲಿ ಬಾ. ನಾನು ಹಾಸನಕ್ಕೆ ಬರುತ್ತೇನೆ" ಎಂದೆ.

ನಾನು ತುಮಕೂರಿನಿಂದ ಅರಸೀಕೆರೆಗೆ ರೈಲಿನಲ್ಲಿ ಹೋಗುತ್ತಿರಬೇಕಾದರೆ ಸಾಮಾನ್ಯ ಬೋಗಿಗಳಲ್ಲಿ ಕಾಲಿಡಲೂ ಜಾಗವಿರಲಿಲ್ಲ, ಸತೀಶ್ ಮತ್ತು ನಾನು ಅದು ಹೇಗೋ ಪ್ರಯಾಣ ಮಾಡಿ ಮಂಗಳೂರು ತಲುಪಿದೆವು. ಮಂಗಳೂರಿನಲ್ಲಿ ಇಬ್ರಾಹಿಂ ಬ್ಯಾರಿ ಎಂಬುವವರನ್ನು "ಸಂತ ಅಲೋಶಿಯಸ್ ಕಾಲೇಜು ಎಲ್ಲಿದೆ?" ಎಂದು ಕೇಳಿದೆವು. "ಅಲ್ಲಿ ಏನು ಕಾರ್ಯಕ್ರಮವಿದೆ?" ಎಂದು ಅವರು ಕೇಳಿದರು. ನಾವು "ಲಂಕೇಶರ ಕಾರ್ಯಕ್ರಮ" ಎಂದಾಗ "ನಾನೂ ಲಂಕೇಶರ ಅಭಿಮಾನಿ. ಬನ್ನಿ" ಎಂದು ಅವರು ನಮ್ಮನ್ನು ತಮ್ಮ ಕಾರಿನಲ್ಲಿ ಕೂಡಿಸಿಕೊಂಡು ವಸತಿಗೃಹದ ಹತ್ತಿರ ಬಿಟ್ಟರು. ಸ್ನಾನ ಮುಗಿಸಿ, ತಿಂಡಿ ತಿಂದು ಕಾರ್ಯಕ್ರಮದತ್ತ ಹೊರಟೆವು.

ವಿಶಾಲವಾದ ಅಲೋಶಿಯಸ್ ಕಾಲೇಜು. ಮೋಹಕ ಮಂಗಳೂರಿನ ಸೆಖೆ ತುಂಬಾ ಜಾಸ್ತಿಯಾಗಿತ್ತು, ಗೌರಿಯವರು ಎಲ್ಲರನ್ನು ಬರಮಾಡಿಕೊಳ್ಳುತ್ತಿದ್ದರು. ಕಾರ್ಯಕ್ರಮ ಉದ್ಘಾಟನೆ ಮಾಡಿದ ದೇವನೂರು ಅವರು ಗೌರಿಯವರು ಕೇಳಿದ ಐದು ವರಗಳಿಗೆ ತಥಾಸ್ತು ಎಂದುಬಿಟ್ಟರು. ದೇವನೂರು, ಗೌರಿ, ಜಿ.ರಾಜಶೇಖರ್, ಫಣಿರಾಜ್, ಕಲ್ಕುಳಿ ವಿಠಲ್ ಹೆಗಡೆ, ಪಿ.ಸಿ ಮೋಹನ್, ಸಾರಾ ಅಬೂಬುಕ್ಕರ್, ಫಕೀರ್ ಮಹಮದ್ ಕಟ್ಪಾಡಿ, ಬಿ.ಎಂ. ಬಷೀರ್, ಕೆ.ಎಲ್. ಅಶೋಕ್, ಎ.ಕೆ.ಸುಬ್ಬಯ್ಯ ಇನ್ನೂ ಅನೇಕ ವಿಚಾರವಂತರು ಮಂಗಳೂರಿನ ಸಮಸ್ಯೆ ಕರಾವಳಿಯಲ್ಲಿನ ಕೋಮುವಾದ, ಹಿಂಸೆ, ಇತ್ಯಾದಿಗಳ ಬಗ್ಗೆ ಮಾತನಾಡಿದರು. ಇದೆಲ್ಲವನ್ನು ಕೇಳಿ ಈ ಸಮಸ್ಯೆಗಳು ನಮ್ಮ ಊರುಗಳಲ್ಲಿ ಕೊಂಚ ಕಡಿಮೆ ಅನ್ನಿಸುತ್ತಿತ್ತು.

ಮಂಗಳೂರಿನ ಆಯೋಜಕರ ಆತಿಥ್ಯ ತುಂಬಾ ಚೆನ್ನಾಗಿತ್ತು, ಬಂದಿದ್ದ ಅತಿಥಿಗಳಿಗೆ ವ್ಯವಸ್ಥಿತವಾಗಿ ಸತ್ಕಾರ ನೀಡಿದರು.

ನಾನು ತಮ್ಮಲ್ಲಿ ಕೋರುವುದು ಏನೆಂದರೆ ವರ್ಷಕ್ಕೆ ಎರಡು ಬಾರಿಯಾದರೂ ಪ್ರತಿ ಜಿಲ್ಲೆಗಳಲ್ಲಿ ಈ ರೀತಿಯ ಕಾರ್ಯಕ್ರಮ ಮತ್ತು ಅಲ್ಲಿನ ಸಮಸ್ಯೆಗಳ ಬಗ್ಗೆ ತಾವು ವಿಚಾರ ಸಂಕಿರಣಗಳನ್ನು ಏರ್ಪಡಿಸಬೇಕು. ಕಾರ್ಯಕ್ರಮದ ಖರ್ಚುವೆಚ್ಚಗಳನ್ನು ಅಲ್ಲಿನ ಜನರೇ ಭರಿಸಲಿ. ಲಂಕೇಶರ ಆಶಯಗಳು, ವಿಚಾರಗಳು ಜನಸಾಮಾನ್ಯರಿಗೆ ತಲುಪುವಂತೆ ಆಗಲಿ.

ಅಂದಿನ ನಾಟಕ ನೋಡಲು ಸಾಧ್ಯವಾಗಲಿಲ್ಲ ಕ್ಷಮಿಸಿ. ಮಂಗಳೂರು ಬಿಟ್ಟು ಮೈಸೂರಿನ ವಿಕ್ರಮ್ ಕ್ಯಾಸ್ಟ್ರೋರವರ ಕಾರಿನಲ್ಲಿ ಬರುವಾಗ ಕಾರ್ಯಕ್ರಮದ ಅನೇಕ ವಿಷಯಗಳನ್ನು ನಾವೆಲ್ಲ ವಿನಿಮಯ ಮಾಡಿಕೊಂಡೆವು.

ಕೊನೆಯದಾಗಿ ಅನ್ನಿಸಿದ್ದು: ಮಂಗಳೂರಿನಲ್ಲಿ ಲಂಕೇಶರ ಆಶಯಗಳ ಕುರಿತು ಕಾರ್ಯಕ್ರಮ ನಡೆದಿದ್ದರೆ ಅದಕ್ಕೆ ಹತ್ತಿರ ಇರುವ, ಅಲ್ಪಸಂಖ್ಯಾತರೇ ಹೆಚ್ಚಾಗಿ ವಾಸಿಸುವ ಗೋವಾದಲ್ಲಿ ಕೋಮುವಾದಿ ಬಿಜೆಪಿ ಅಧಿಕಾರಕ್ಕೆ ಬಂದಿದೆ.

ಇದು ನನಗೆ ಶಾಕ್ ನೀಡಿದೆ.

• ಸಿ. ಶಿವಕುಮಾರ್, ತುಮಕೂರು

ಓದುಗರ ಅನಿಸಿಕೆ

ದನಿ ಇಲ್ಲದವರಿಗೆ ದನಿ ಬರುತ್ತಿರುವಾಗ...

'ಬ್ಯಾರಿ' ಸಿನಿಮಾಗೆ ಸ್ವರ್ಣಕಮಲ ಪ್ರಶಸ್ತಿ ಬಂದಿದೆ. ಆದರೆ ಸಿನಿಮಾವನ್ನು ನಿರ್ಮಿಸಿರುವ ಚೊಕ್ಕಬೆಟ್ಟು ಅಲ್ತಾಫ್ ಹುಸೇನ್ ಆ ಸಿನಿಮಾದ ಕತೆಯನ್ನು ಖ್ಯಾತ ಲೇಖಕರಾದ ಸಾರಾ ಅಬೂಬಕ್ಕರ್ ಅವರ 'ಚಂದ್ರಗಿರಿ ತೀರದಲ್ಲಿ' ಕಾದಂಬರಿಯಿಂದ ಕದ್ದಿದ್ದಾನೆ ಎಂಬ ಆರೋಪ- ವಿವಾದ ಎದ್ದಿದೆ. ಲೇಖಕರೇ ಹೀಗೆ ಆರೋಪಿಸಿ ಮಾರ್ಚ್ 21, 2012 ರ ಗೌರಿ ಲಂಕೇಶ್ ಪತ್ರಿಕೆಯಲ್ಲಿ ದೂರಿರುತ್ತಾರೆ ಮತ್ತು ನ್ಯಾಯಾಲಯ ಕೂಡ ತನಗೆ ನ್ಯಾಯ ದೊರಕಿಸಲಿಲ್ಲವೆಂದು ಕಿಡಿ ಕಾರಿದ್ದಾರೆ.



ಈ ಸಂಬಂಧವಾಗಿ ಬಿ.ಎಂ.ಬಷೀರ್ ಇದೇ ಪತ್ರಿಕೆಯ ಮಾರ್ಚ್ 28, 2012 ರ ಸಂಚಿಕೆಯಲ್ಲಿ 'ಬ್ಯಾರಿ' ಚಿತ್ರಕಥೆಯನ್ನು ಕದ್ದದ್ದು ಎನ್ನುವುದರಲ್ಲಿ ನನಗೆ ಯಾವ ಅನುಮಾನವೂ ಇಲ್ಲ, ಇದರಿಂದ ಸಾರಾ ಅಬೂಬಕ್ಕರ್‌ಗೆ ಅನ್ಯಾಯವಾಗಿರುವುದು ನೂರಕ್ಕೆ ನೂರರಷ್ಟು ನಿಜ. ಆದರೆ ಅದರಿಂದ ಒಂದು ಸಮುದಾಯ ಪಡೆದ ಲಾಭಕ್ಕೆ ಹೋಲಿಸಿದರೆ ಮೇಡಂಗೆ ಆದ ಅನ್ಯಾಯವನ್ನು ನಾನು ಸಹಿಸಿಕೊಳ್ಳಬಲ್ಲೆ ಮತ್ತು ಇಷ್ಟು ದೊಡ್ಡ ಲಾಭವಾಗುವುದಾದರೆ ಆಗಾಗ ಇಂತಹ ಸಣ್ಣಪುಟ್ಟ ಅನ್ಯಾಯಗಳು ನಡೆದರೂ ಪರವಾಗಿಲ್ಲ ಅನಿಸುತ್ತದೆ ಎಂದಿದ್ದಾರೆ.

ಬಿ.ಎಂ. ಬಷೀರ್ ಈ ಸಂದರ್ಭದಲ್ಲಿಯೆ ಬ್ಯಾರಿ ಸಮುದಾಯ ಮತ್ತು ಅವರ ಭಾಷೆ, ಸಂಸ್ಕೃತಿ 'ಅಸ್ಪೃಶ್ಯ' ಎಂಬಂತಿದ್ದು ಸಾರಾ, ಕಟ್ಪಾಡಿ, ಬೋಳುವಾರ್ ಮುಂತಾದವರ ಸೃಜನಶೀಲ ಬರವಣಿಗೆಯ ಮೂಲಕ ತಲೆ ಎತ್ತಿ ಬೆಳೆಯುತ್ತಿರುವ ಬಗೆಯನ್ನೂ ಹೇಳಿದ್ದಾರೆ. ಹಾಗೆ ನೋಡಿದರೆ, ಸಾರಾ ಅವರ 'ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು' ಎಂಬ ಲೇಖನವೇ ಈ ಸಮುದಾಯದ ಅದರಲ್ಲೂ ಹೆಣ್ಣು ಮಕ್ಕಳ ಕಲಿಯುವ ಹಕ್ಕಿನ ಬಗ್ಗೆ ಮೊದಲು ದನಿ ಎತ್ತಿದ್ದು. ಇದು ಆ ಸಮುದಾಯದ ಮೇಲ್ಪಂಕ್ತಿಯಾಗಿ ಪರಿಣಮಿಸಿದ್ದು, ಅದೀಗ ಇತಿಹಾಸ.

ಬಿ.ಎಂ. ಬಷೀರ್ ಹೇಳಿರುವಂತೆ ಒಂದು ಸಮುದಾಯ ಪಡೆದ ಲಾಭವನ್ನು ನೋಡಿ ಸಾರಾ ಅವರು ತಮಗಾದ ಅನ್ಯಾಯವನ್ನು ಸಹಿಸಿಕೊಳ್ಳುವ ಒಂದು ಸಣ್ಣ ಉದಾರತೆಯನ್ನು ತೋರಬೇಕಾಗಿದೆ. ಹಾಗೆಂದು ಕೃತಿಚೌರ್ಯ ಮಾಡಿದವರಿಗೆಲ್ಲಾ ಸುಲಭವಾಗಿ ವೀಸಾ ಪಾಸ್‌ಪೋರ್ಟ್ ನೀಡಿ ಎಂದು ನಾನು ವಾದಿಸುತ್ತಿಲ್ಲ. ಕದಿಯುವ ವಿಚಾರಕ್ಕೆ ಬಂದಾಗ ಒಂದು ಉದಾಹರಣೆ ಕೊಡಬಹುದು. ದೇವನೂರರ 'ಒಡಲಾಳ'ದಲ್ಲಿ ಸಾಕವ್ವನ ಪರಿವಾರ ಹಸಿವಿಗೆ ತತ್ತರಿಸಿ ಹೋಗಿ ಗೌಡನ ಹೊಲದಲ್ಲಿ ಕಡಲೆಕಾಯಿ ಗಿಡ ಕದ್ದು ಕಿತ್ತು ತಂದು ತಿಂದು ಹಾಕುತ್ತಾರೆ. ಇದು ಕ್ಷಮ್ಯ. ಯಾಕೆಂದರೆ ಹಸಿವು ದಲಿತ ಸಮಾಜದ ಅಗ್ನಿ ಪ್ರಶ್ನೆ. ಆದರೆ 'ಕುಸುಮಬಾಲೆ'ಯಲ್ಲಿ ಆಡ ಹುಡುಗ ದನ ಕಾಯಲು ಹೋಗಿ ಎಲ್ಲಾ ದನಗಳನ್ನು ಒಂದು ದಿನ ಸಂತೆಗೆ ಹೊಡೆದು ಮಾರಿ ಹಣ ತಂದು ತಾಯಿಗೆ ನೀಡುತ್ತಾನೆ. ಇದು ಸ್ವಾರ್ಥ, ಅಕ್ಷಮ್ಯ. ಇಲ್ಲಿ ಸಮುದಾಯದ ಪ್ರಶ್ನೆಯೇ ಇಲ್ಲ, ಇದು ಅಪಮಾರ್ಗ ಎಂಬುದನ್ನು ಕೃತಿಯ ಗತಿಯೇ ಮುಂದೆ ಧ್ವನಿಸುತ್ತದೆ.



ಹಾಗೇ 'ಬ್ಯಾರಿ' ಸಿನಿಮಾ ವಿವಾದವೂ ಸಹ. ಅಲಕ್ಷಿಸಲ್ಪಟ್ಟ ಈ ಒಂದು ಸಮುದಾಯ ರಾಷ್ಟ್ರಮಟ್ಟದಲ್ಲಿ ತನ್ನ ಐಡೆಂಟಿಟಿಯನ್ನು ಸ್ಥಾಪಿಸಿಕೊಂಡದ್ದು ಕಡಿಮೆ ಸಾಧನೆಯಲ್ಲ. ಸಾರಾ, ಕಟ್ಪಾಡಿ, ಬೋಳುವಾರ್ ಇವರು ರಾಜ್ಯ ಮಟ್ಟದಲ್ಲಿ, ಸ್ತ್ರೀವಾದಿ ನೆಲೆಯಲ್ಲಿ, ಅಲ್ಪಸಂಖ್ಯಾತರ ನೆಲೆಯಲ್ಲಿ ಹೇಗೆ ತಮ್ಮ ಸೃಜನಶೀಲ ಬರವಣಿಗೆಯಿಂದ ಸಮುದಾಯದ ಅಸ್ಮಿತೆಯನ್ನು ಸ್ಥಾಪಿಸಿಕೊಂಡರೂ ಹಾಗೆ ಅಲ್ತಾಫ್ ಹುಸೇನ್ ಚೊಕ್ಕ ಬೆಟ್ಟು (ಕದ್ದಂತೆಯೇ ಆಗಲಿ) 'ಬ್ಯಾರಿ' ಸಿನಿಮಾ ಮೂಲಕ ರಾಷ್ಟ್ರಮಟ್ಟದಲ್ಲಿ ತಮ್ಮ ಸಮುದಾಯವನ್ನು ಕಾಣಿಸಿದ್ದಾನೆ.

ಭಾಷಾ ಮಾಧ್ಯಮಕ್ಕೆ ಎಷ್ಟಾದರೂ ಒಂದು ಮಿತಿ ಇರುತ್ತದೆ. ಆದರೆ ದೃಶ್ಯ ಮಾಧ್ಯಮದ ಮಾಂತ್ರಿಕತೆಯೇ ಬೇರೆ. ಚೊಕ್ಕಬೆಟ್ಟು ಪ್ರಯತ್ನ ಅಭಿನಂದನೀಯ. ಈಗಲಾದರೂ ಆ ಸಮುದಾಯದ ಹಿರಿಯರು ಚೊಕ್ಕಬೆಟ್ಟು ಅವರನ್ನು ಕರೆತಂದು ಆತನನ್ನು ಸಾರಾ ಅವರ ಕಾಲ ಮೇಲೆ ಕೆಡವಿ ಕ್ಷಮೆ ಕೇಳಿಸಬಹುದು. ಹಾಗೇ 'ಸಹನಾಧರಿತ್ರಿ' ಎಂಬಂತೆ ಇವರೂ ಕ್ಷಮಿಸುವ ಉದಾರತೆಯನ್ನು ತೋರಬಹುದು. ತಮ್ಮ ಸಮುದಾಯಕ್ಕಾಗಿ ಈ ಬಗೆಯ ನಿರಹಂಕಾರ ಗುಣ ಪರಸ್ಪರ ಇರಬೇಕಾದುದು ಸರಿಯಲ್ಲವೆ?

• ಪ್ರೊ. ಶಿವರಾಮಯ್ಯ, ಬೆಂಗಳೂರು

ಪುರುಷನ ದೌರ್ಜನ್ಯಕ್ಕೆ ಜಾತಿ, ವರ್ಗ ಎಂಬ ಭೇದಭಾವವಿಲ್ಲ

ಕಳೆದ ವಾರದ 'ಕಂಡಹಾಗೆ'ಯಲ್ಲಿ ಜಾತಿ ಎನ್ನುವ ಕ್ರೂರ ವ್ಯವಸ್ಥೆಗೆ ...ಯಾದ ಹೆಣ್ಣಿನ ಕಥೆಯನ್ನು ಗೌರಿಲಂಕೇಶರು ಬರೆದಿದ್ದರು. ಜಾತಿ ...ವಸ್ಥೆಯು. ಪುರುಷ ದೌರ್ಜನ್ಯದ ಅಂತಹ ಹಲವಾರು ಕಥೆಗಳು ನಮ್ಮ ...ಬೆಳಕಿಗೆ ಬರುವುದೇ ಇಲ್ಲ. ಇಂತಹ ದೌರ್ಜನ್ಯಗಳಿಗೆ ವರ್ಗ, ಜಾತಿ ಎಂಬ ...ವ ಎನ್ನುವುದೇ ಇಲ್ಲ. ಏಕೆಂದರೆ ಖ್ಯಾತ ಲೇಖಕಿ, ದಲಿತ ಪರ ಚಿಂತಕಿ ...ೀನಾ ಕಂದಸಾಮಿಯನ್ನೂ ಈ ದೌರ್ಜನ್ಯ ಬಿಡಲಿಲ್ಲ ಅನ್ನುವುದು ನಮ್ಮ ...ಸಮಾಜದ ದುರಂತವೋ ಏನೋ? ತಾನು ಪ್ರೀತಿಸಿ ಮದುವೆಯಾದ ...ತ ಸ್ಯಾಡಿಸ್ಟ್ ಆಗಿ ವರ್ತಿಸಿದ ರೀತಿಯನ್ನು ಲೇಖಕಿ ಕಂದಸಾಮಿ 'ಔಟ್‌ಲುಕ್' ...ಪತ್ರಿಕೆಯಲ್ಲಿ ಬರೆದದ್ದನ್ನು ಓದಿದಾಗ ದಿಗ್ಭ್ರಮೆಯಾಯಿತು.

ಕಳೆದ ವರ್ಷ ಮಂಗಳೂರಿನಲ್ಲಿ ಫ್ಯಾಸಿಸ್ಟ್ ಶಕ್ತಿಗಳು ಪತ್ತೆ ಪತ್ತೆ ...ಗಳ ಮೇಲೆ ದಾಳಿ ಮಾಡಿದಾಗ, ಪ್ರಗತಿಪರ ...ಸಂಘಟನೆಗಳು ಮತ್ತು ಜನರು ಅದರ ವಿರುದ್ಧ ...ಪ್ರತಿಭಟನಾ ಸಭೆಯನ್ನು ಏರ್ಪಡಿಸಿದ್ದೆವು. ...ಸಭೆಗೆ ಮೀನಾ ಕಂದಸಾಮಿಯನ್ನೂ, ...ಪರ ಗಂಡನನ್ನೂ (ಅವನೂ ಪ್ರಗತಿಪರ ...ತ ಅನಿಸಿಕೊಂಡವನು) ಆಹ್ವಾನಿಸಿದ್ದೆವಲ್ಲದೆ, ...ರಿಬ್ಬರನ್ನೂ ನಮ್ಮ ಸಂಗಾತಿಗಳಿಗೆ ...ಪರಿಚಯಿಸಿದ್ದೆವು. ಅವತ್ತು ಮೀನಾ ಅವರು ಹಲವರನ್ನು ಭೇಟಿಯಾಗಿ ...ಬಗ್ಗೆ ವರದಿಯನ್ನು ತಯಾರಿಸುತ್ತಿದ್ದರು. ಅವರ ಈ ಕಾಳಜಿ ನನ್ನಂತಹ ...ೇಕರಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸಿತ್ತು.

ಒಂದು ಪತ್ರ

...ಐದಾರು ತಿಂಗಳ ಹಿಂದೆ ಮೀನಾ ಮದುವೆಯಾಗಿ ದೂರದ ...ನಿಂದ ಗಂಡ ಕೆಲಸ ಮಾಡುತ್ತಿದ್ದ ಮಂಗಳೂರಿಗೆ ಬಂದಿದ್ದರು. ...ವರಿಗೆ ಮಂಗಳೂರು ಅನ್ನವುದು ಫ್ಯಾಸಿಸ್ಟ್ ಶಕ್ತಿಗಳ ಕೈಯಲ್ಲಿ ...ಆಗುತ್ತಿರುವ ಊರು. ಇಲ್ಲಿ ಮುಸ್ಲಿಮರ, ಕ್ರಿಶ್ಚಿಯನ್ನರ ಮೇಲೆ ನಿರಾತಂಕವಾಗಿ, ನಿರಂತರವಾಗಿ ಹಲ್ಲೆ ನಡೆಯುತ್ತಿದ್ದವಲ್ಲದೆ, ಪಬ್‌ಗೆ ಹೋದ ಹುಡುಗಿಯರನ್ನು ಅಡ್ಡಾಡಿಸಿ ಹೊಡೆದು ಅಪಖ್ಯಾತಿಗೆ ಒಳಗಾದ ಊರಿನ ಬಗ್ಗೆ ಯಾರಲ್ಲಾದರೂ ಸಹಜವಾಗಿ ಭಯ ಇದ್ದೇ ಇರುತ್ತದೆ.


...ಮೀನಾ ಕಂದಸಾಮಿ

ಅಂತಹ ಊರಿಗೆ ಬಂದು ಗಂಡನೊಂದಿಗೆ ಜೀವನ ನಡೆಸುವಾಗ ಮೀನಾ ಅವರು ಹಲವಾರು ವಿಷಯಗಳಲ್ಲಿ ರಾಜಿ ಮಾಡಿಕೊಂಡು, ...ಹೊಂದಾಣಿಕೆಯಿಂದ ಇರಲು ಪ್ರಯತ್ನಿಸುತ್ತಿದ್ದರು. ಮೊದಮೊದಲು ...ೀತಿಯಿಂದ (?) ಇದ್ದ ಗಂಡ ಆನಂತರ ಅವನ ನಿಜರೂಪ ...ತೆರಗೆಡಹಲು ಪ್ರಾರಂಭಿಸಿದ. ಆಕೆಯ ವೈಯಕ್ತಿಕ ವಿಚಾರದಲ್ಲಿ ...ಮೂಗು ತೂರಿಸಲೂ ಆರಂಭಿಸಿ, ಅದು ಈಮೇಲ್‌ನ ಪಾಸ್‌ವರ್ಡ್ ...ನ್ನು ಪಡೆಯುವ ತನಕವೂ ಬಂದಿತ್ತು. ಆದರೆ ಆತ ಅದಕ್ಕೆ ಪ್ರೀತಿ ...ದು ಬಣ್ಣ ಕಟ್ಟಿದ್ದ. ಯಾವ ಹೆಣ್ಣಿಗಾದರೂ ತಾನು ಪ್ರೀತಿಸಿದವನು ...ಮೇಲೆಯೇ ಸಂಶಯದ ನೋಟವನ್ನು ಬೀರಿದರೆ ಅದನ್ನು ...ಸಹಿಸಲು ಸಾಧ್ಯವೇ? ಅದಕ್ಕೆ ಮೀನಾ ಕೂಡ ಹೊರತಾಗಿರಲಿಲ್ಲ. ಎಲ್ಲಿ ...ಹೋದರೂ ಮೀನಾ ತನ್ನ ಗಂಡನೊಂದಿಗೆ ಹೋಗುತ್ತಿದ್ದಳು. ...ಹೊರನೋಟಕ್ಕೆ ಇದು ಆದರ್ಶವಾಗಿ ಕಂಡರೂ, ವಾಸ್ತವವಾಗಿ ಮೀನಾಳ ...ಆತನಿಗಿದ್ದ ಅಪನಂಬಿಕೆಯೇ ಇದಕ್ಕೆ ಕಾರಣವಾಗಿತ್ತು.

...ಮೀನಾ ಅಂತರರಾಷ್ಟ್ರೀಯ ಪ್ರಸಿದ್ಧಿ ಪಡೆದ ಲೇಖಕಿಯಾಗಿರುವುದ ...ದಲೋ, ಅಥವಾ ಆತನಿಗೆ ವಿಪರೀತ ಕೀಳರಿಮೆ ಇದ್ದದ್ದರಿಂದಲೋ ...ನಲ್ಲಿದ್ದ ಸ್ಯಾಡಿಸ್ಟ್ ಎಚ್ಚರಗೊಂಡಿರಬೇಕು. ಒಟ್ಟಿನಲ್ಲಿ ಅದೆಲ್ಲದರ ...ಪರಿಣಾಮವಾಗಿ ಮೀನಾ ತಮ್ಮ ಬದುಕಿನಲ್ಲಿ ವಿಪರೀತ ನೋವು ...ಅನುಭವಿಸಿದಳು. ಅವನ ಕುಹಕ ನಗೆ, ಚುಚ್ಚುಮಾತುಗಳಿಗೆ ಆಕೆ ನಿತ್ಯ ...ತ್ರಸ್ತಳಾದಳು. ಈ ಎಲ್ಲ ಕಾರಣಕ್ಕೆ ಕೆಲವೇ ತಿಂಗಳಲ್ಲಿ ಆಕೆಯ ದಾಂಪತ್ಯ ...ಜೀವನ ಮುರಿದುಬಿತ್ತು.

...ಕೆಚ್ಚೆದೆಯ ಹುಡುಗಿ ಮೀನಾ ಈಗ ತನ್ನ ಗಂಡನನ್ನು ತ್ಯಜಿಸಿ ಒಂಟಿ ...ಜೀವನಕ್ಕೆ ಹೊರಟಿದ್ದಾಳೆ. ಅವಳು ದಾಂಪತ್ಯ ಜೀವನದಲ್ಲಿ ಸೋತಿರಬಹುದು ...ದರೆ ವೈಯಕ್ತಿಕ ಜೀವನದಲ್ಲಿ ಅಲ್ಲ. ತನ್ನ ಪ್ರೀತಿಗಾಗಿ ಎಲ್ಲವನ್ನೂ ರಾಜಿ ...ಮಾಡಿಕೊಳ್ಳುತ್ತಿದ್ದ ಮೀನಾ, ಕೊನೆಗೆ ಅದು ತನ್ನನ್ನೇ ಸುಡುತ್ತದೆ ಎಂದು ...ಗೊತ್ತಾದಾಗ ಅದರಿಂದ ಪಾರಾಗಿ ಮುಂದಿನ ಬದುಕು ರೂಪಿಸಿಕೊಳ್ಳಲು ...ಹೊರಡುತ್ತಿದ್ದಾಳೆ. ಅವಳಿಗಾದ ಅನ್ಯಾಯದ ವಿರುದ್ಧ ಹಲವಾರು ಜನ ...ಪ್ರತಿಕ್ರಿಯಿಸಿದ್ದಾರೆ. ಕೆಲವರು ತಮ್ಮ ಬ್ಲಾಗ್‌ಗಳಲ್ಲಿ ಬರೆದಿದ್ದಾರೆ. ಅಂತಹ ...ದು ಬ್ಲಾಗ್‌ನಲ್ಲಿ ಆಕೆಗಾದ ಅನ್ಯಾಯದ ವಿರುದ್ಧ ಅಭಿಯಾನ ಪ್ರಾರಂಭವಾಗಿದೆ. ...ಪ್ರಗತಿಪರರೆಂದು ನಾವು ತಿಳಿದವರೇ ಇಂತಹ ವಿರೋಧಾಭಾಸಗಳಿಗೆ ...ಗುರಿಯಾದರೆ ಮತ್ತೆ ಬೇರೆಯವರ ಸ್ಥಿತಿ?

• ಆಸೆಫ್, ಮಂಗಳೂರು


ಬ್ಯಾರಿ ಅಕಾಡೆಮಿ ಅಧ್ಯಕ್ಷನ ಮೇಲೆ ಭಾರೀ ಹಲ್ಲೆ!



ಬ್ಯಾರಿ ಸಮುದಾಯ ಈಗ ಮತ್ತೊಮ್ಮೆ ಸುದ್ದಿಯಲ್ಲಿದೆ. ಆದರೆ ಈ ಬಾರಿ ಸ್ವರ್ಣಕಮಲದ ಸಾಧನೆಗಾಗಿ ಅಲ್ಲ, ಬ್ಯಾರಿ ಅಕಾಡೆಮಿಯ ಅಧ್ಯಕ್ಷನ ಮೇಲಿನ ಹಲ್ಲೆಯ ಕಾರಣಕ್ಕಾಗಿ. ಹಾಡುಹಗಲೇ ಅದೂ ಅಕಾಡೆಮಿಯ ಕಚೇರಿಯಲ್ಲೇ ದುಷ್ಕರ್ಮಿಗಳಿಂದ ಮಾರಣಾಂತಿಕ ಹಲ್ಲೆಗೆ ಗುರಿಯಾಗಿರುವ ರಹೀಮ್ ಉಚ್ಚಿಲ್ ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗಿ ನೆಟ್ಟಗೆ ಐವತ್ತು ದಿನಗಳೂ ಕಳೆದಿಲ್ಲ, ಅಷ್ಟರಲ್ಲಾಗಲೇ ಈ ರಕ್ತ ಚರಿತ್ರೆ ಶುರುವಾಗಿದೆ. ಅಂದಹಾಗೆ ಈ ಹಲ್ಲೆಯ ಕುರಿತು ಸಾರ್ವಜನಿಕ ವಲಯದಲ್ಲಾಗಲಿ, ಆತನೇ ಪ್ರತಿನಿಧಿಸುವ ಬಿಜೆಪಿ ಪಾಳಯದಲ್ಲಾಗಲಿ, ಅಷ್ಟೇ ಏಕೆ ಖುದ್ದು ಬ್ಯಾರಿ ಮುಸ್ಲಿಮ್ ಸಮುದಾಯದಲ್ಲು ಸಹಾ ಕಿಂಚಿತ್ತೂ ಪರಿತಾಪವಿಲ್ಲದಿರುವುದನ್ನು ಕಂಡರೆ ಈತನ ವ್ಯಕ್ತಿತ್ವ ಮತ್ತು ಹಿನ್ನೆಲೆಯ ಬಗ್ಗೆಯೇ ಹಲವಾರು ಅನುಮಾನಗಳು ಮೂಡುತ್ತವೆ.

ರಹೀಮ್ ಉಚ್ಚಿಲ್ ರಾಜಕೀಯವಾಗಿ ಬಿಜೆಪಿಯೊಂದಿಗೆ ಗುರುತಿಸಿಕೊಳ್ಳುತ್ತನಾದರೂ ಸದ್ಯದ ಹಲ್ಲೆಗೆ ಅಂತಹ ಯಾವುದೇ ರಾಜಕೀಯ ಹಿನ್ನೆಲೆಯಿರುವ ಸಂಭವ ತೀರಾ ಕಡಿಮೆ. ಹಾಗೊಮ್ಮೆ ಇದ್ದಿದ್ದರೆ ಇಷ್ಟೊತ್ತಿಗಾಗಲೇ ಬಿಜೆಪಿ, ಮುಸ್ಲಿಮರ ಒಲೈಕೆಯ ಕಾರಣಕ್ಕೆ ಹಾಗೂ





ಇದಕ್ಕೆ ಕಾರಣವಾದವರ ವಿರುದ್ಧ ಮುಸ್ಲಿಮರನ್ನು ಎತ್ತಿಕಟ್ಟಲು ಖಂಡಿತ ಇದನ್ನು ಬಳಸಿಕೊಳ್ಳುತ್ತಿತ್ತು. ಪೊಲಿಟಿಕಲ್‌ನ ಕಾರಣಗಳ ಹೊರತಾಗಿ ಈತ ನಡೆಸುವ ಕೀಳು ಮಟ್ಟದ ಹತ್ತಾರು ದಂಧೆಯಲ್ಲಿನ ಮಿಸ್‌ಡೀಲಿಂಗ್‌ಗಳೇ ಹೀಗೆ ಹಲ್ಲೆಯ ರೂಪದಲ್ಲಿ ಆತನನ್ನು ತಗುಲಿಕೊಂಡಿವೆ.

ಆಗಿದ್ದಿಷ್ಟು.....

ಕಳೆದ ಗುರುವಾರ ಅಂದರೆ ಮಾರ್ಚ್ 15 ರ ಮಧ್ಯಾಹ್ನದ ಹೊತ್ತಿಗೆ ಅತ್ತಾವರದ ಆನಂದ್‌ರಾವ್ ಸರ್ಕಲ್‌ನಲ್ಲಿರುವ ಅಕಾಡೆಮಿಯ ಕಚೇರಿಗೆ ರಹೀಮ್ ಉಚ್ಚಿಲ್ ಬಂದಿದ್ದ. ಕಚೇರಿ ಸಿಬ್ಬಂದಿಗಳೆಲ್ಲ ಊಟಕ್ಕೆಂದು ಹೊರನಡೆದಿದ್ದರಿಂದ ರಹೀಮ್ ಮತ್ತಾತನ ಗೆಳೆಯ ರಿಯಾಜ್ ಹರೇಕಲ್ ಇಬ್ಬರನ್ನು ಹೊರತುಪಡಿಸಿ ಇಡೀ ಕಚೇರಿ ಖಾಲಿ. ಗ್ರಹಚಾರಕ್ಕೆಂಬಂತೆ ಜೊತೆಗಿದ್ದ ರಿಯಾಜ್‌ಗೆ ಪಕ್ಕದ ಆಸ್ಪತ್ರೆಗೆ ಹೋಗಿ ತನ್ನ ಬ್ಲಡ್ ರಿಪೋರ್ಟ್ ತರುವಂತೆ ಹೇಳಿಕಳಿಸಿದ್ದಾನೆ. ಆ ಸಮಯಕ್ಕೆ ಎರಡು ಬೈಕ್‌ಗಳಲ್ಲಿ ಬಂದ ಸುಮಾರು 25-30 ವಯೋಮಾನದ ನಾಲ್ಕು ದುಷ್ಕರ್ಮಿಗಳಲ್ಲಿ ಇಬ್ಬರು ಕಚೇರಿಯ ಹೊರಗೇ ನಿಂತರೆ, ಇನ್ನಿಬ್ಬರು ಒಳನುಗ್ಗಿದವರೆ ರಹೀಮ್ ಇದ್ದಲ್ಲಿಗೆ ಹೋಗಿ ತಾವು



ತಂದಿದ್ದ ತಲವಾರ್‌ಗಳಿಂದ ಯರ್‍ರಾಬಿರ್‍ರಿ ಬೀಸಿದರು. ರಹೀಮ್‌ನ ತಲೆ, ಎಡಗೈ, ಕುತ್ತಿಗೆ ಭಾಗಗಳಿಗೆ ಬಲವಾದ ಏಟುಗಳು ಬಿದ್ದ ಕಾರಣ ನಿತ್ರಾಣನಾಗಿ ಕುಸಿದುಬಿದ್ದ. ಆ ವೇಳೆಗೆ ವಾಪಸ್ಸಾದ ಸತೀಶ್ ರೈ ಎಂಬ ಸಿಬ್ಬಂದಿಗೂ ಬೆದರಿಕೆ ಹಾಕಿ ಹಲ್ಲೆ ಮಾಡಲು ಮುಂದಾದ ದುಷ್ಕರ್ಮಿಗಳು ಕಚೇರಿಯ ಗಾಜುಗಳನ್ನು ಪುಡಿಮಾಡಿ ಅಲ್ಲಿಂದ ಪೇರಿ ಕಿತ್ತರು.

ಉದ್ದೇಶಪೂರ್ವಕವಾಗಿ ತಮ್ಮ ಮೋಟಾರು ಬೈಕ್‌ಗಳ ನಂಬರ್ ಪ್ಲೇಟ್‌ಗೆ ಕೆಸರು ಮೆತ್ತಿಸಿಕೊಂಡಿದ್ದರಿಂದ ಅವುಗಳ ನಂಬರ್ ನೋಟ್ ಮಾಡಿಕೊಳ್ಳಲು ಯಾರಿಗೂ ಸಾಧ್ಯವಾಗಿರಲಿಲ್ಲ. ಆಸ್ಪತ್ರೆಯಿಂದ ಬಂದ ರಿಯಾಜ್ ನೆತ್ತರು ಚೆಲ್ಲಿಕೊಂಡಿದ್ದ ರಹೀಮ್‌ನನ್ನು ಕಂಡು ಗಾಬರಿಯಾಗಿ, ಕೂಡಲೇ ಹತ್ತಿರದ ಯುನಿಟಿ ಆಸ್ಪತ್ರೆಗೆ ಸೇರಿಸಿದ್ದರಿಂದ ರಹೀಮ್ ಉಚ್ಚಿಲ್ ಸದ್ಯಕ್ಕೆ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ಆದರೆ ವಿಪತ್ತುಗಳ ನಡುವಲ್ಲೇ ಇರುವ ಆತನಿಗೆ ಆಪತ್ತು ಶಾಶ್ವತವಾಗಿ ದೂರವಾಗಿಲ್ಲ. ಇದಕ್ಕೆ ಸಾಕ್ಷಿಯೆಂಬಂತೆ ದುಷ್ಕರ್ಮಿಗಳು ತಾವು ಬಳಸಿದ ತಲವಾರ್ ಅನ್ನು ರಹೀಮ್‌ನ ನಿವಾಸದ ಬಳಿ ಎಸೆದು ಕೆಟ್ಟ ಸೂಚನೆಯೊಂದನ್ನು ಉಳಿಸಿಹೋಗಿದ್ದಾರೆ.

ಪಾಪ! ಉಪ್ಪು ತಿನ್ನಬಾರದಿತ್ತು......

ಕಲ್ಲಡ್ಕ ಭಟ್ಟನಂತಹ ಕ್ರಿಮಿನಲ್ ಕೋಮುವಾದಿ ಆರೆಸ್ಸೆಸ್ಸಿಗರ ಸುಳ್ಳದಲ್ಲೇ ಬೆಳೆದ ಈ ರಹೀಮ್ ಮುಸ್ಲಿಮರ ಪಾಲಿಗೆ ಬಗಲ್ ಕೆ ದುಶ್ಮನ್‌ನಂತಾಗಿರುವುದರಿಂದ ಮುಸ್ಲಿಮರಲ್ಲಿ ಈತನ ಬಗ್ಗೆ ಗೌರವವನ್ನಾಗಲಿ ಕಾಳಜಿಯನ್ನಾಗಲಿ ಹುಡುಕುವುದು ಕಷ್ಟ. ಇನ್ನು ಬಿಜೆಪಿಯ ಕಾರ್ಯಕರ್ತನಾಗಿರುವ ಈತನ ಸಕ್ರಿಯತೆಯ ವೈಖರಿ ಬಗ್ಗೆಯೇ ಬ್ಯಾರಿಗಳಿಗೆ ಭರ್ಜರಿ ಆಕ್ರೋಶವಿದೆ.

ಇದಕ್ಕೆ ಕಾರಣವೂ ಇಲ್ಲದಿಲ್ಲ, ತನ್ನ ಕಾರ್ಯಸಾಧನೆಗಾಗಿ ಎಂತಹ ಕೀಳು ಕೆಲಸಕ್ಕೂ ಮುಜುಗರ ಪಟ್ಟುಕೊಳ್ಳದ ರಹೀಮ್ ಆರೆಸ್ಸೆಸ್ 'ಗಂಡು'ಗಳ 'ಅಗತ್ಯ'ಗಳನ್ನು ಪೂರೈಸುವ ಕಾಯಕದಲ್ಲಿ ನಿಷ್ಠಾವಂತ, ಸಕ್ರಿಯ ಕಾರ್ಯಕರ್ತ ಎನ್ನುವುದು ಪ್ರತಿಯೊಬ್ಬರಿಗೂ ತಿಳಿದಿರೋ ಸಂಗತಿ. ಅದಕ್ಕಾಗಿ ಈತ ಬಳಸಿಕೊಳ್ಳೋದು ಬಡ ಬೀಡಿ ಕಾರ್ಮಿಕ ಹೆಂಗಸರನ್ನೇ. ಅದೂ ಸಾಲ ಸೌಲಭ್ಯದ ಆಮಿಷವೊಡ್ಡಿ ಅವರನ್ನು ಈತ ದಾರಿ ತಪ್ಪಿಸಿ ಬಳಸಿಕೊಳ್ಳುತ್ತಾನೆಂಬ ಅಪವಾದವೂ ಇದೆ.

ಇತ್ತ ಕಲ್ಲಡ್ಕ ಭಟ್ಟ ಕೋಮುವಾದಿ ಹೇಳಿಕೆಗಳ ಮೂಲಕ ಪ್ರಜಾಪ್ರಭುತ್ವದ ಕತ್ತುಹಿಸುಕುವ ಕೆಲಸ ಮಾಡುತ್ತಿದ್ದರೆ, ಅದಕ್ಕೆ ಅಲ್ಪಸಂಖ್ಯಾತರ ವಿರೋಧವಿಲ್ಲ ಎಂಬುದನ್ನು ರೂಪಿಸಲು ಈ ರಹೀಮ್‌ನನ್ನು ಬಳಸಿಕೊಳ್ಳಲಾಗುತ್ತದೆ. ಸಾಮರಸ್ಯ ಕದಡುವ ಕಲ್ಲಡ್ಕನ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಸಮಾಜಮುಖಿ ಸಂಘಟನೆಗಳು ಬೀದಿಗಿಳಿದ ಪ್ರತಿ ಬಾರಿಯೂ ಈ ರಹೀಮನ ನೇತೃತ್ವದಲ್ಲಿ ಒಂದಷ್ಟು ಪೇಮೆಂಟ್ ಮುಸ್ಲಿಮ್ ವೇಷಧಾರಿಗಳನ್ನು ಸೇರಿಸಿ, ಕಲ್ಲಡ್ಕನಂತಹ ಅವತಾರ ಪುರುಷನನ್ನು ಬಂಧಿಸುವಂತಹ ಕೃತ್ಯ ಜರುಗಲೇ ಬಾರದೆಂದು ಸಣ್ಣದೊಂದು ಪ್ರತಿಭಟನೆ ನಡೆಸಿ ಅದಕ್ಕೆ ದೊಡ್ಡ ಪ್ರಚಾರ ನೀಡಲಾಗುತ್ತದೆ. ತೀರಾ ಇತ್ತೀಚೆಗೆ ಈ ರಹೀಮ್ ಮತ್ತು ಬಿಜೆಪಿ ಅಲ್ಪಸಂಖ್ಯಾತರ ಅಧ್ಯಕ್ಷನಾದ ಫಜಲ್ ಜಂಟಿಯಾಗಿ ಪ್ರತಿಭಟನೆಗೆ ಜನ ಹೊಂದಿಸಿದ ಪರಿ ಸಾಕು ಇವರ ನೀಚತನವನ್ನು ಸಾರಲು. 'ನಮ್ಮ ಬಿಜೆಪಿ ಸರ್ಕಾರ ಬಡವರಿಗೆ 15 ರಿಂದ 20 ಸಾವಿರ ಸಾಲ ನೀಡುತ್ತಿದೆ, ನೀವು ಐಡಿ ಕಾರ್ಡು, ರೇಷನ್ ಕಾರ್ಡು ತಗೊಂಡು ಬಂದರೆ ಸಾಕು ನಿಮಗೆ ಸ್ಥಳದಲ್ಲೇ ಸಾಲ ಕೊಡಿಸುವ ಜವಾಬ್ದಾರಿ ನಮ್ಮದು. ಈ ಅವಕಾಶವನ್ನು ಮಿಸ್ ಮಾಡ್ಕೋಬೇಡಿ' ಎಂದು ಮಂಜೆನಾಡಿ, ಕಿನ್ಯಾ, ಬೇರಳಕಟ್ಟೆ ಕಡೆಯ ಬೀಡಿಕಟ್ಟುವ ಒಂದಷ್ಟು ಹೆಂಗಸರಿಗೆ ಆಸೆ ತೋರಿಸಿ ಅವರನ್ನು ಬುರ್ಖಾ ಸಮೇತ ಕರೆತಂದವರೆ ಒಂದು ಪ್ರತಿಭಟನೆಯಲ್ಲಿ ಕೂರಿಸಿದ್ದರು. ಆ ಹೆಂಗಸರಿಗೆ ಏನೆಂದರೆ ಏನೂ ಗೊತ್ತಿರಲಿಲ್ಲ ಪಕ್ಕದವರು ಹೇಳಿಕೊಟ್ಟಂತೆ ಅರಚಿ ಬರಿಗೈಲಿ ಮನೆಗೆ ಹೋಗಿದ್ದರು. ಅಸಲಿಗೆ ಅದು ಕಲ್ಲಡ್ಕ ಭಟ್ಟನನ್ನು ವಿರೋಧಿಸುವ ಮುಸ್ಲಿಮರ ವಿರುದ್ಧ ನಡೆದ ಅಲ್ಪಸಂಖ್ಯಾತರ ಪ್ರತಿಭಟನೆಯಾಗಿತ್ತು.



ಇತ್ತೀಚೆಗೆ ನರಹರಿ ಬೆಟ್ಟದಲ್ಲಿ ಯಡ್ಡಿ ಅಂಡ್ ಕಂಪನಿ ನಡೆಸಿದ ವಾಜಪೇಯಿ ಯಾಗದಲ್ಲಿ ಇದೇ ರಹೀಮ್ ಹಕ್ಕಾ ಚೆಡ್ಡಿಯಂತೆ ಅಂಗಿ ಕಳಚಿಟ್ಟು ಹೋಮಕ್ಕೆ ಕೂತಿದ್ದ. ಈ ಪರಿ ಒಲೈಕೆಗೆ ಸಿಕ್ಕ ಭಕ್ಷೀಸೆ ಆ ಬ್ಯಾರಿ ಅಕಾಡೆಮಿಯ ಅಧ್ಯಕ್ಷಗಿರಿ. ಇಷ್ಟಕ್ಕೂ ಬಿಜೆಪಿ ಮತ್ತು ಚೆಡ್ಡಿಗಳಿಗೆ ರಹೀಮ್‌ನ ಮೇಲೆ ಭಾರೀ ಅಭಿಮಾನವೇನೂ ಇಲ್ಲ, ಸದ್ಯಕ್ಕೆ ಆತನನ್ನು ಚೆನ್ನಾಗಿ ಬಳಸಿಕೊಳ್ಳುತ್ತಿದ್ದಾರಷ್ಟೆ. ಈತನ ಬಗ್ಗೆ ಚೆಡ್ಡಿಗಳಿಗೆ ನಿಜವಾಗಲೂ ಕಾಳಜಿ ಇದ್ದಿದ್ದೇ ಆದರೆ ಈ ಹಲ್ಲೆಯನ್ನು ಅವರು ಗಂಭೀರವಾಗಿ ಪರಿಗಣಿಸಬೇಕಿತ್ತು, ನೆಪಕ್ಕೆಂಬಂತೆ ಒಂದು ಹೇಳಿಕೆ ನೀಡದದಷ್ಟು ನಿಕೃಷ್ಟವಾಗಿ ಕಾಣುತ್ತಿರುವುದರಲ್ಲೇ ಅದು ಸಾಬೀತಾಗುತ್ತಿದೆ.

ಇನ್ನು ರಹೀಮ್ ವೈಯಕ್ತಿಕ ಬದುಕಾದರೂ ಪರಿಶುದ್ಧವಾಗೇನೂ ಉಳಿದಿಲ್ಲ, ಅಲ್ಲೂ ಸಾಕಷ್ಟು ಹೆಸರು ಕೆಡಿಸಿಕೊಂಡಿದ್ದಾನೆ. ಬಾಳು ಕೊಡುವ ನೆಪದಲ್ಲಿ ಬಾಳೆಹೊನ್ನೂರಿನ ವಿಧವೆಯೊಬ್ಬಳನ್ನು ಮದುವೆಯಾಗಿದ್ದ ಈತ ಆಕೆಯಿಂದ ಭರ್ಜರಿಯಾಗಿ ವರದಕ್ಷಿಣೆ ಕಿತ್ತಿದ್ದ. ಇವನ ಧನದಾಹ ಹೇಗಿತ್ತೆಂದರೆ ಹೆಂಡತಿಯ ಮನೆಯವರನ್ನು ಪದೇ ಪದೇ ಹಣಕ್ಕಾಗಿ ಪೀಡಿಸುತ್ತಲೇ ಇದ್ದ. ಈತನ ಕಾಟಕ್ಕೆ ರೋಸತ್ತ ಅವರೆ ಇವನಿಂದ ತಲಾಕ್ ಪಡೆದು ಹೊರಗಟ್ಟಿದ್ದರು. ಈಗ ಮತ್ತೊಂದು ಮದುವೆಯಾಗಿ ಎರಡನೇ ಅವಧಿಯ ಸಂಸಾರಸ್ಥನಾಗಿದ್ದಾನೆ.


ಇವನ ಇಂತಹ ಅಪರಾತಪರಾಗಳೇ ಇಂದು ಅವನನ್ನು ಸರಿಯಾಗಿ ತಡವಿಕೊಂಡಿವೆ. ಇನ್ನು ಮುಂದಾದರೂ ಸರಿದಾರಿಗೆ ಮರಳುವ ಪ್ರಯತ್ನಕ್ಕೆ ರಹೀಮ್ ಉಚ್ಚಿಲ್ ಮನಸು ಮಾಡದಿದ್ದರೆ ಈ ಹಲ್ಲೆಯ ಎರಡನೇ ಎಪಿಸೋಡು ಮತ್ತಷ್ಟೂ ಭೀಕರವಾಗಿ ಪ್ರಸಾರವಾಗಬಹುದು.

• ಗಿರೀಶ್ ತಾಳಿಕಟ್ಟೆ.



ಪುಟ್ಟಿಯ ಸರ

• ಅಶೋಕ್. ಕೆ. ಆರ್.



ಸೂರ್ಯ ಮುಳುಗುವ ಸಮಯದಲ್ಲಿ ಚಂದ್ರ ಚಿಂತನೆಗಳ ಚಿಂತೆಯಲ್ಲಿ ಬೇಯುತ್ತಿದ್ದ. ಇವತ್ತಾಗಲೇ ಇಪ್ಪತ್ತೆಂಟು. ಇನ್ನು ಎರಡು ದಿನ ಕಳೆದರೆ ಈ ತಿಂಗಳು ಮುಗುಚಿಬೀಳುತ್ತದೆ. ಹೊಸ ತಿಂಗಳಿನ ಆರಂಭವೆಂದರೆ ಚಂದ್ರನಿಗೆ ನಡುಕ. ಅಪ್ಪನನ್ನು ಮೈಸೂರಿಗೆ ಕರೆದೊಯ್ಯಬೇಕು, ಡಾಕ್ಟರಿಗೆ ತೋರಿಸಲು. ತಿಂಗಳಿಗಾಗುವಷ್ಟು ಮಾತ್ರೆ ಬರೆದುಕೊಡುತ್ತಾರೆ. ಅವರ ಫೀಸು, ಔಷಧಿಗಳಿಗಾಗುವ ದುಡ್ಡು, ಹೋಗಿಬರುವ ಖರ್ಚು.....ಇವುಗಳ ಬಗ್ಗೆ ಯೋಚಿಸಿದಷ್ಟೂ ವಿಹ್ವಲಗೊಳ್ಳುತ್ತಿದ್ದ. ಛೇ! ಹಾಳಾದ ಅಪ್ಪ ...... ಸತ್ತಾದರೂ ಹೋಗಬಾರದಿತ್ತೇ ಎಂಬಾಲೋಚನೆ ಸುಳಿದು ಥೂ ಥೂ...ಇದೇನು ನನ್ನ ಮನಸ್ಥಿತಿ ಹೆತ್ತಪ್ಪನನ್ನೇ ಸಾಯಿಸುವಷ್ಟು ಕೆಟ್ಟುಹೋಗಿದೆಯಲ್ಲ ಎಂದು ತಲೆಕೊಡುವುದು ಅವನ ದಿನಚರಿಯ ಭಾಗವೇ ಆಗಿತ್ತು. ಇವುಗಳ ಮಧ್ಯೆ ಉಳುಮೆ ಮಾಡಲು, ಬೀಜ ಖರೀದಿಸಲು, ಔಷಧಿ ಸಿಂಪಡಿಸಲು ಹಣದ ಅಭಾವ. ಕಳೆದ ವರ್ಷ ಬ್ಯಾಂಕಿನಲ್ಲಿ ವ್ಯವಸಾಯಕ್ಕಾಗಿ ಮಾಡಿದ ಸಾಲವೆಲ್ಲ ಅಪ್ಪನ ಚಿಕಿತ್ಸೆಗೇ ವ್ಯಯವಾಗಿತ್ತು. ಅದನ್ನಿನ್ನೂ ತೀರಿಸಲಾಗಿರಲಿಲ್ಲ. ಬ್ಯಾಂಕಿನಿಂದ ನೋಟೀಸೂ ಬಂದಿತ್ತು ಎರಡು ಬಾರಿ. ಹತ್ತಿರದಲ್ಲಿ ಯಾವ ಚುನಾವಣೆಯೂ ಇಲ್ಲ. ನಿರೀಕ್ಷೆಯಂತೆ ಸರಕಾರ ಬೀಳುವಂತಾಗಿ ಚುನಾವಣೆಯ ಗುಮ್ಮವಾದರೂ ಬಂದಿದ್ದರೆ ಸಾಲಮನ್ನಾ ಮಾಡುತ್ತಿದ್ದರೋ ಏನೋ?! ಊರಿನಲ್ಲಿ ನನಗೆ ಸಾಲ ಕೊಡುವವರ್‍ಯಾರಾದರೂ ಉಳಿದಿದ್ದಾರಾ ಎಂದು ಗುಣಿಸುತ್ತಿದ್ದಾಗ 'ಚಂದ್ರಣ್ಣಾ....ಚಂದ್ರಣ್ಣ' ಎಂದು ಯಾರೋ ದೂರದಲ್ಲಿ ಕೂಗಿದ್ದು ಕೇಳಿಸಿತು. ಸೂರ್ಯನಿಗಭಿಮುಖವಾಗಿ ಹೊಂಗೆ ಮರದ ಕೆಳಗೆ ಕುಳಿತ್ತಿದ್ದವನಿಗೆ ವಿರುದ್ಧ ದಿಕ್ಕಿನಿಂದ ಬಂದ ಧ್ವನಿಯ ಒಡೆಯ ಕಾಣಲಿಲ್ಲ. 'ಚಂದ್ರಣ್ಣ....ಚಂದ್ರಣ್ಣ....' ಎಂಬ ಕೂಗು ಹತ್ತಿರವಾಗುತ್ತಿದ್ದಾಗ ಮರದಿಂದೀಚೆ ಸರಿದು ನಿಂತು ನೋಡಿದ. ಆಲೆಮನೆ ಪ್ರಕಾಶನ ಮೊದಲನೇ ಮಗ ರಾಜ ಓಡಿಬರುತ್ತಿದ್ದ. ಜೊತೆಗೆ ಅವನ ವಾರಿಗೆಯದೇ ಒಂದು ಹುಡುಗಿ. ಯಾರೆಂದು ಗುರುತಿಸಲಾಗಲಿಲ್ಲ. ಬಹುಶಃ ಬಾಣಂತನಕ್ಕೆ ತವರಿಗೆ ಬಂದಿರುವ ಪ್ರಕಾಶನ ಅಕ್ಕನ ಮಗಳಿರಬೇಕು. ನೋಡಿ ಬಹಳ ವರ್ಷವಾಗಿದ್ದರಿಂದ ಗುರುತು ಸಿಗುತ್ತಿಲ್ಲವೇನೋ ಎಂದುಕೊಂಡ. ಅವರೆಡೆಗೆ ಬಿರುಸಿನಿಂದ ಹೆಜ್ಜೆ ಹಾಕುತ್ತಿದ್ದ ಚಂದ್ರನಿಗೆ 'ನಮ್ಮಕ್ಕನ ಹೆರಿಗೆ ವೇಳೆಗಾದರೂ ಐದು ಸಾವಿರ ತೀರಿಸಪ್ಪ' ಎಂದು ಪ್ರಕಾಶ ಹೇಳಿದ್ದು ನೆನಪಾಗಿ ಹೆಜ್ಜೆಗಳು ಭಾರವಾದವು. ಹಣ ಕೇಳೋದಿಕ್ಕೆ ಕಳಿಸಿದ್ದಾನಾ? ಇರಲಿಕ್ಕಿಲ್ಲ. ಪ್ರಕಾಶ ಮತ್ತು ಚಂದ್ರ ಒಟ್ಟೊಟ್ಟಿಗೆ ಓದಿ ಬೆಳೆದವರು. ಚಂದ್ರನ ಮನೆಯ ಕಷ್ಟ ನೋಡಿರುವವನು. ಮನೆ ಕಡೆ ಪ್ರಕಾಶನಿಗೆ ಸದ್ಯಕ್ಕೆ ಅಂಥ ಅನಾನುಕೂಲವೇನಿಲ್ಲ. ಹೀಗಿರುವಾಗ ವ್ಯವಸಾಯ ಆರಂಭಿಸಬೇಕಾದ ಹೊತ್ತಿನಲ್ಲಿ ಹಣ ಹಿಂದಿರುಗಿಸಲು ಒತ್ತಾಯಿಸಲಾರ ಎಂದು ಸಮಾಧಾನಗೊಳ್ಳುತ್ತಿರುವಾಗ ಇಬ್ಬರೂ ಹತ್ತಿರ ಬಂದರು. "ಯಾಕೋ ರಾಜ? ಇಷ್ಟು ಅವಸರದಲ್ಲಿದ್ದೀಯ. ಯಾವುದೋ ಹುಡುಗೀನ ಬೇರೆ ಓಡಿಸಿಕೊಂಡು ಬರುತ್ತಿದ್ದೀಯ" ನಗುತ್ತಾ ಕೇಳಿದ. ಆರೆಂಟು ತಿಂಗಳ ಹಿಂದಷ್ಟೇ ಮೈನೆರೆದಿದ್ದ ಹುಡುಗಿ ನಾಚಿ ರಾಜನ ಹಿಂದೆ ಅವಿತಳು. ಥೇಟು ಪ್ರಕಾಶನ ಅಕ್ಕನದೇ ರೂಪು. ನಾಚಲೂ ಪುರುಸೊತ್ತಿಲ್ಲದವನಂತೆ ರಾಜ "ಥೂ ಹೋಗಣ್ಣ, ಅಲ್ಲಿ ..... ಮೇನ್ ರೋಡ್ ......ಕೆರೆ....... ವ್ಯಾನು.... ಎಲ್ಲಾ ಹೋಗಿಬಿಟ್ಟವರೆ" ಮಧ್ಯೆ ಮಧ್ಯೆ ತಡೆದು ಓಡಿದುದಕ್ಕೆ ಆದ ಆಯಾಸವನ್ನು ಪರಿಹರಿಸಲು ಉಸಿರೆಳೆದುಕೊಳ್ಳುತ್ತಾ ಉದ್ಗರಿಸಿದ. ಚಂದ್ರನಿಗೆ ಸ್ಥೂಲವಾಗಿ ವಿಷಯ ತಿಳಿದರೂ ಪೂರ್ಣ ಗ್ರಹಿಕೆಗೆ ಬರಲಿಲ್ಲ. "ಅದೇನು ಸ್ವಲ್ಪ ಸರಿಯಾಗಿ ತಿಳಿಸೋ" ಎಂದ.

ಒಂದರೆ ಘಳಿಗೆ ಸುಮ್ಮನಾಗಿ ಶ್ವಾಸಕೋಶ ಸಮಸ್ಥಿತಿಗೆ ಬರುವವರೆಗೆ ಕಾದು "ಚಂದ್ರಣ್ಣ ಅಪ್ಪ ನಿಮ್ಮನ್ನ ಅರ್ಜೆಂಟಾಗಿ ಕರ್ಕೊಂಡು ಬಾ ಅಂತ ಕಳಿಸವ್ರೆ. ನೆರ್ವಿಗೋ ಮದುವೆಗೋ ಹೋಗಿ ವಾಪಸಾಗ್ತಿದ್ದ ವ್ಯಾನು ಕೆರೆಗೆ ಬಿದ್ದೋಗದೆ. ನಾಕೈದು ಜನರನ್ನು ಬಿಟ್ಟರೆ ಉಳಿದವರೆಲ್ಲ ಸತ್ತೋಗವ್ರೇ. ಕೆರೆಯಿಂದ ಹೆಣಗಳನ್ನೆತ್ತೋದಕ್ಕೆ ನೀವು ಬರ್ಲೇ ಬರ್ಬೇಕಂತೆ". ಹಾಳಾದ್ ಸರ್ಕಾರ. ರಸ್ತೆ ರಿಪೇರಿ ಮಾಡಿಸ್ತೀವಿ ಮಾಡಿಸ್ತೀವಿ ಎಂದ್ಹೇಳಿ ಮೂರು ಎಲೆಕ್ಷನ್ ಮುಗಿದುಹೋಯ್ತು, ಇವತ್ತೆಂದೂ ಸೇರಿ ಎಷ್ಟನೇ ಆಕ್ಸಿಡೆಂಟೋ? ಕೆರೆ ಭರ್ತಿಯಾಗಿದ್ದಾಗ ಯಾರದ್ರೂ ಬಿದ್ದು ಸತ್ತರೆ ಅವರ ಹೆಣ ತೆಗೆಯುವಷ್ಟರಲ್ಲಿ ಬದುಕಿದವರ ಹೆಣ ಬಿದ್ದುಹೋಗುತ್ತಿತ್ತು, ಗಂಟೆಗಟ್ಟಲೆ ನೀರಿನ ಮೇಲೆ ಮಲಗುತ್ತಿದ್ದ ಸುಸ್ತಿಲ್ಲದೇ ಈಜುತ್ತಿದ್ದ ಚಂದ್ರನ ನೆರವೇ ಬೇಕು. ಮೈಸೂರಿನಿಂದ ಸರಕಾರದ ಜನ ಬಂದು ತಲುಪುವಷ್ಟರಲ್ಲಿ ಚಂದ್ರ ಚಕಚಕನೆ ದೇಹವನ್ನೊರಗೆಳೆಯುತ್ತಿದ್ದ. ಎಷ್ಟೇ ಬಿರುಸಾಗಿ ನಡೆದರೂ ಹತ್ತು ನಿಮಿಷವಾದರೂ ಬೇಕು ಕೆರೆ ತಲುಪಲು. "ಗೌರ್ನಮೆಂಟೋರು ಯಾರಾದ್ರೂ ಬಂದವ್ರಾ?" ಕೇಳಿದ ಚಂದ್ರ. "ಇನ್ನೂ ಇಲ್ಲ, ದಾರೀಲೂ ಎಲ್ಲೋ ಆಕ್ಸಿಡೆಂಟಾಗಿ ಟ್ರಾಫಿಕ್ಜಾಮಾಗಿದೇಂತ ಹೇಳ್ತಿದ್ರು". "ಕೆರೆಗೆ ಹೆಂಗ್ ಬಿತ್ತಂತೆ ಗಾಡಿ". "ಊರವರ್‍ಯಾರು ನೋಡಿದಂಗಿಲ್ಲ, ಮೂರು ವ್ಯಾನಿನಲ್ಲಿ ಹೋಗ್ತಿದ್ರಂತೆ. ಮುಂದಿನ ವ್ಯಾನಲ್ಲಿ ಗಂಡು ಹೆಣ್ಣು ಇದ್ರಂತೆ. ಎರಡನೇ ವ್ಯಾನು....ಅದೇ ಈಗ ಕೆರೆಗೆ ಬಿದ್ದಿರೋದು....ಆ ವ್ಯಾನಲ್ಲಿ ಹೆಂಗಸ್ರು ಮಕ್ಳೇ ಇದ್ರಂತೆ. ಡ್ರೈವರ್ ಕುಡಿದಿದ್ನೋ ಅಥವಾ ಗಾಡೀನೇ ಕೈಕೊಡ್ತೋ ಗೊತ್ತಿಲ್ಲ, ವ್ಯಾನು ಸೀದಾ ಹೋಗಿ ಕೆರೆಗೆ ಮಗುಚಿಬಿತ್ತಂತೆ. ಬೇರೆ ವ್ಯಾನವ್ರು ಕೆಳಗಿಳಿದು ಬರೋಷ್ಟರಲ್ಲಿ ವ್ಯಾನು ಪೂರಾ ನೀರೊಳಗೆ ಹೋಗಿಬಿಟ್ಟಿತ್ತಂತೆ. ಅವರಲ್ಲೇ ಈಜು ಗೊತ್ತಿರೋರು ನೀರಿಗಿಳಿದು ನಾಲ್ಕೈದು ಜನರನ್ನು ಉಳಿಸಿದ್ರಂತೆ. ಒಂದು ಹದಿನೈದು ಜನ ಸತ್ತೋಗವ್ರೇ ಅಂತಿದ್ರು. ಊರವರೆಲ್ಲ ಅಲ್ಲೇ ಸೇರವ್ರೆ. ಒಂದಷ್ಟು ಬಾಡೀನ ಹೊರಗೆ ತೆಗೆದ್ರು. ಕೆರೇಲಿ ನೀರು ಜಾಸ್ತಿ ಇರೋದ್ರಿಂದ ಅವರಿಗೂ ಹೆಚ್ಚು ಆಳಕ್ಕೆ ಹೋಗೋದಿಕ್ಕೆ ಭಯ. ಅದಿಕ್ಕೆ ಅಪ್ಪ ನಿಮ್ಮನ್ನು ಕರೆಯೋದಿಕ್ಕೆ ಫೋನ್ ಹಚ್ಚಿದ್ರು. ನೀವ್ಯಾಕೋ ರಿಸೀವೇ ಮಾಡ್ತಿಲ್ಲ ಅಂತ ನನ್ನನ್ನು ಕಳಿಸಿದ್ರು. ಮನೇಲಿ ಹೇಳಿದ್ರು ಬೆಳಿಗ್ಗೆ ಗದ್ದೆ ಹತ್ರ ಹೋದೋನು ಇನ್ನೂ ಬಂದಿಲ್ಲಾಂತ. ಓಡಿ ಬಂದೆ ಅದಿಕ್ಕೆ" ಎಂದ. "ಡ್ರೈವರ್ರೂ ಕ್ಲೀನರ್ರೂ ಅದ್ಯಾವುದೋ ಮಾಯದಲ್ಲಿ ಓಡಿಹೋಗವ್ರಂತೆ ನೋಡಣ್ಣ" ಅಂತ್ಹೇಳುವುದನ್ನು ಮರೆಯಲಿಲ್ಲ.

******

"ಅಲ್ರೀ ನಿಮಗೆ ಮೊಬೈಲಿಗೆ ದುಡ್ಡಿರುತ್ತೆ ಅಪ್ಪನ್ನ ಆಸ್ಪತ್ರೆಗೆ ಕರೆತರೋದಿಕ್ಕೆ ದುಡ್ಡಿರಲ್ಲ" ಡಾಕ್ಟರ್ ಸುದರ್ಶನಮೂರ್ತಿ ಅಪ್ಪನ ನಾಡಿ ನೋಡುತ್ತಾ ರೇಗಿದಾಗ ಫೋನ್ ಕರೆಯನ್ನು ಕಟ್ ಮಾಡುತ್ತ ಪ್ಯಾಲಿ ನಗು ಚೆಲ್ಲಿದ ಚಂದ್ರ. ಅಪ್ಪನಿಗೆ ಲಕ್ವ ಹೊಡೆದು ಎಡಭಾಗ ಪೂರ್ತಿ ಬಿದ್ದು ಹೋಗಿ ಹದಿನೈದು ದಿನದ ಮೇಲಾಗಿತ್ತು. ಲಕ್ವ ಹೊಡೆದ ದಿನ ಊರಿನಲ್ಲಿರುವ ಪುಟ್ಟ ಆಸ್ಪತ್ರೆಯಲ್ಲಿ ತೋರಿಸಿದ್ದ. ಅವರು ಆ ತುರ್ತಿನಲ್ಲಿ ಮಾಡಬೇಕಿದ್ದ ಚಿಕಿತ್ಸೆ ಮಾಡಿ ಮರುದಿನವೇ ಮೈಸೂರಿನ ದೊಡ್ಡಾಸ್ಪತ್ರೆಗೆ ಕೊಂಡೊಯ್ಯಲು ತಿಳಿಸಿದ್ದರು. ನೆಂಟರಿಷ್ಟರಿಗೆಲ್ಲ ವಿಷಯ ತಿಳಿದು ಪ್ಚ್ ಪ್ಚ್ ಎಂದು ಕನಿಕರಿಸಿ ತಲೆಗೆರಡರಂತೆ ಸಲಹೆಗಳನ್ನು ನೀಡಿದ್ದರು. ಮೈಸೂರಿಗೆ ಹೋಗುವ ತೀರ್ಮಾನಕ್ಕೆ ಎಳ್ಳುನೀರು ಬಿಟ್ಟು ಎರಡೂರಾಚೆಯ ನಾಟಿ ವೈದ್ಯರೊಬ್ಬರ ಬಳಿ ಅಪ್ಪನನ್ನು ಕರೆದುಕೊಂಡು ಹೋಗಿದ್ದ. ಅಲ್ಲಿ ಮತ್ತೊಮ್ಮೆ ಲಕ್ವ ಹೊಡೆದು ಮಾತೂ ತೊದಲಲಾರಂಭಿಸಿದ ಮೇಲೆ ಗಾಬರಿ ಬಿದ್ದು ಮತ್ತೆ ಊರಿನಾಸ್ಪತ್ರೆಗೆ ಹಿಂದಿರುಗಿ ಆಸ್ಪತ್ರೆಯವರ ಕೈಲಿ ಬೈಸಿಕೊಳ್ಳಬೇಕಾಯಿತು. "ಮೊದಲು ಮೈಸೂರಲ್ಲಿ ತೋರಿಸಿ. ಸ್ಕ್ಯಾನ್ ಮಾಡಿ ನೋಡ್ತಾರೆ. ಆ ನಾಟಿ ವೈದ್ಯರು ತೈಲ ತಿಕ್ಕಿ ಮಾಡೋ ಮಸಾಜು ಪ್ರಯೋಜನವಿಲ್ಲದ್ದು ಅಂತೇನೂ ತಿಳೀಬೇಡಿ. ನಾವು ಕೊಡೋ ಮಾತ್ರೆ ಜೊತೆಗೆ ಮಸಾಜೂ ಮಾಡಿಸಿದರೆ ಬೇಗ ಗುಣಮುಖವಾದರೂ ಆಗಬಹುದು" ಎಂದಿದ್ದರು.

"ಸರಕಾರಿ ಆಸ್ಪತ್ರೆಗೆ ಸೇರಿಸೋ ಬದಲು ಸೀದಾ ಸ್ಮಶಾನಕ್ಕೆ ಕರೆದುಕೊಂಡು ಹೋಗಿ ಮಲಗಿಸಲಿಕ್ಕೆ ಹೇಳು ನಿನ್ನ ಮಗನಿಗೆ" ತೊದಲುತ್ತಲೇ ಹೇಳಿದ್ದರು ಅಪ್ಪ "ಊರಲ್ಲಿರೋ ಆಸ್ಪತ್ರೆಯೇನು ಟಾಟಾ ಬಿರ್ಲಾದಂತ" ಎಂದು ರೇಗಬೇಕೆನಿಸಿದರೂ ಚಟಪಟಾಂತ ಓಡಾಡುತ್ತಿದ್ದ ಅಪ್ಪ ಹಾಸಿಗೆಗೆ ಅಂಟಿಕೊಂಡಂತೆ ಮಲಗಿದ್ದ ಸ್ಥಿತಿಯನ್ನು ಕಂಡು ಬೇಸರದಲ್ಲಿ ಏನೂ ಮಾರುತ್ತರ ಕೊಡದೆ ಲಕ್ವ ಡಾಕ್ಟರ್ ಸುದರ್ಶನಮೂರ್ತಿಯವರ ನರ್ಸಿಂಗ್ ಹೋಮಿಗೆ ಕರೆದೊಯ್ದಿದ್ದ.

"ತಲೆ ಇದೆಯೇನ್ರೀ ನಿಮಗೆ. ಹದಿನೈದು ದಿನದಿಂದ ಏನು ಮಾಡ್ತಿದ್ರಿ? ಈಗ ಕರೆತರೋ ಬದಲು ಒಟ್ಟಿಗೇ ಸತ್ತಮೇಲೆ ಕರೆತರಬೇಕಿತ್ತು" ಸಿಡುಕಿನಿಂದ ಹೇಳಿದರು. ಆ ಕ್ಷಣಕ್ಕೆ ಹೊಳೆದಿದ್ದನ್ನು ಹೇಳಿದ "ದುಡ್ಡು ಹೊಂದಿಸೋದಿಕ್ಕೆ ಇಷ್ಟು ದಿನ ಆಯಿತು" ಎಂದು. ಚಂದ್ರ ಮಾತು ಮುಗಿಸುವಷ್ಟರಲ್ಲಿ ಅವನ ಮೊಬೈಲ್ ರಿಂಗಣಿಸಿತ್ತು, ಅದಕ್ಕೂ ಸಲ್ಲಬೇಕಾದ ಮಾತುಗಳನ್ನು ಸಲ್ಲಿಸಿದರು ಮೂರ್ತಿ.

ಹದಿನೈದು ದಿನ ಅಪ್ಪ ನರ್ಸಿಂಗ್ ಹೋಮಿನಲ್ಲಿದ್ದರು. ಸ್ಕ್ಯಾನಿಂಗು, ಔಷಧಿ, ನರ್ಸಿಂಗ್ ಹೋಮ್ ದುಡ್ಡು.... ಕೈಯಲ್ಲೆಷ್ಟು ದುಡ್ಡಿದ್ದರೂ ಸಾಲದಾಗಿತ್ತು, ಒಂದಷ್ಟು ದುಡ್ಡು ಕಡಿಮೆ ಮಾಡುವಂತೆ ಕೇಳಲು ಮೂರ್ತಿಯವರ ಮನೆಗೆ ಹೋಗಿದ್ದ. ಟೆರೇಸಿನ ಮೇಲೆ ಉಯ್ಯಾಲೆ ಕುರ್ಚಿಯಲ್ಲಿ ಕುಳಿತು ಸಿಗರೇಟು ಸೇದುತ್ತಾ ಯಾವುದೋ ಪುಸ್ತಕ ಓದುತ್ತಿದ್ದರು. ಆಸ್ಪತ್ರೆಗೆ ಸಂಬಂಧಪಟ್ಟವರು ಮನೆಯವರೆಗೆ ಬರೋದು ತನಗಿಷ್ಟವಾಗುವುದಿಲ್ಲ ಎಂಬುದನ್ನು ಅವರ ಮುಖಭಾವವೇ ಹೇಳುತ್ತಿತ್ತು, ಬಂದ ವಿಷಯ ಹೇಳಿದ ಚಂದ್ರ. ಕೇಳಿ ಮುಗಿದ ಮೇಲೆ ಮುಗುಳ್ನಗುತ್ತ "ಅಲ್ಲಪ್ಪ ಚಂದ್ರ. ಲಲಿತ್ ಮಹಲ್‌ಗೆ ಹೋಗಿ ಊಟ ಮಾಡಿ ಬಿಲ್ಲಲ್ಲಿ ಐವತ್ರೂಪಾಯಿ ಕಡಿಮೆ ಮಾಡಿ ಅಂತ ಕೇಳಿದ್ರೆ ಒಪ್ತಾರಾ? ನನ್ನ ಫೀಸು ಇಷ್ಟು. ಅದನ್ನು ಕಟ್ಟು. ನನ್ನತ್ರ ಯಾವುದಾದರೂ ಔಷಧಿಯ ಸ್ಯಾಂಪಲ್ ಇದ್ದರೆ ಕೊಟ್ಟು ಕಳಿಸಬಲ್ಲೆನೇ ಹೊರತು ಇನ್ಯಾವ ಫೀಸ್ನೂ ಕಡಿಮೆ ಮಾಡಲ್ಲ" ಕಡ್ಡಿಮುರಿದಂತೆ ಹೇಳಿದ್ದರು. ಹೇಳಿದ ಮಾತಿನಂತೆ ಎರಡು ತಿಂಗಳಿಗಾಗುವಷ್ಟು ಬಿ.ಪಿ ಮಾತ್ರೆ ಕೊಟ್ಟು ಕಳುಹಿಸಿದರು.

******

ಆಗ ಶುರುವಾದ ಸಾಲದ ಲೆಕ್ಕ ಮುಗಿಯುವುದಾದರೂ ಯಾವಾಗ ಎಂದು ಯೋಚಿಸುತ್ತಿದ್ದ ಚಂದ್ರ. ಬಿಪಿ, ಡಯಾಬಿಟೀಸೂ, ಲಕ್ವ, ಮಲಗೇ ಇರುತ್ತಿದ್ದರಿಂದ ಬೆನ್ನಿನ ಮೇಲಾಗುತ್ತಿದ್ದ ಗಾಯಕ್ಕೆ ಔಷಧಿ.... ಮಾತ್ರೆಗೆ ದುಡ್ಡು ಸುರಿಸುರಿದೇ ಚಂದ್ರನಿಗೆ ಅಪ್ಪ ಇನ್ನೂ ಯಾಕಾದರೂ ಬದುಕಿದ್ದಾರೋ ಎಂದೆನಿಸಲು ಶುರುವಾಗಿದ್ದು. ಕೆರೆ ಇನ್ನೂ ಅಷ್ಟು ದೂರದಲ್ಲಿದ್ದಾಗಲೇ ಜನರ ಗಡಿಬಿಡಿಯ ಓಡಾಟ, ಸತ್ತ ನೆಂಟರಿಷ್ಟರ ಆಕ್ರಂದನ ಕೇಳಲಾರಂಭಿಸಿತು. ಅವರೆಲ್ಲರ ನಡುವೆ ದಾರಿ ಮಾಡಿಕೊಂಡು ಕೆರೆಯ ಬಳಿಗೆ ಬರುತ್ತಲೇ 'ಚಂದ್ರ ಬಂದ' 'ಚಂದ್ರಣ್ಣ ಬಂದ' ಎಂಬ ಗುಸುಗುಸು ಆರಂಭವಾಯಿತು. ಪ್ರಕಾಶ ಇವನ ಬಳಿಗೆ ಬಂದು "ಮೊಬೈಲ್ ಯಾಕಾದ್ರೂ ತೆಗೆದುಕೊಂಡಿದ್ದೀಯ ಗುರುವೇ? ನಡಿನಡಿ ಬೇಗ" ಎಂದು ವ್ಯಾನು ಬಿದ್ದಿದ್ದ ಜಾಗಕ್ಕೆ ಕರೆದುಕೊಂಡು ಹೋದ. ಆಗಲೇ ಹತ್ತನ್ನೆರಡು ಶವಗಳನ್ನು ಹೊರತೆಗೆದಿದ್ದರು. ಅವರ ಸಂಬಂಧಿಕರ ರೋದನ ಕಂಡ ಊರ ಜನರ ಕಣ್ಣಲ್ಲೂ ನೀರಾಡುತ್ತಿತ್ತು. ಮದುವೆ ಊಟ ಮುಗಿಸಿ ರೇಷ್ಮೆ ಸೀರೆಯಲ್ಲೇ ಪವಡಿಸಿದವರಂತೆ ಕಾಣುತ್ತಿದ್ದವರನ್ನು ನೋಡಿ ಚಂದ್ರನಿಗೆ ಬೇಸರವೆನಿಸಿದರೂ ಮನಃಸ್ಥಿತಿ ಸರಿಯಿಲ್ಲದಕ್ಕೋ ಇಂಥ ಅಪಘಾತಗಳನ್ನು ಪದೇಪದೇ ನೋಡುತ್ತಿದುದಕ್ಕೋ ದುಃಖವಾಗಲಿಲ್ಲ. "ಇನ್ನೂ ಎಷ್ಟು ಬಾಡಿ ತೆಗೀಬೇಕು" ಪ್ರಕಾಶನ ಕಡೆಗೆ ನೋಡುತ್ತಾ ಕೇಳಿದ. "ಇಬ್ಬರು ಮುದುಕೀರು, ಒಂದು ಹುಡುಗಿ, ಮತ್ತೊಂದು ಮಗು ಅಂತ ಹೇಳ್ತಾ ಇದ......" ನೀರಿಗಿಳಿದಿದ್ದ ಪೊಲೀಸರಿಬ್ಬರು ಮುದುಕಿಯೊಬ್ಬಳ ಶವವನ್ನು ನೀರಿನ ಮೇಲ್ಮೆಗೆ ತಂದಿದ್ದನ್ನು ಕಂಡು ಊರಿನ ಯುವಕರು ಅವರ ಸಹಾಯಕ್ಕೆ ಧಾವಿಸಿದರು. ಪೋಲೀಸರಿಬ್ಬರು ಶವದೊಡನೆ ನೀರಿನಿಂದ ಹೊರಬಂದವರೇ "ಉಸ್ಸಪ್ಪ! ನಮ್ಮ ಕೈಲಿ ಮತ್ತೆ ನೀರಿಗಿಳಿಯುವಷ್ಟು ಶಕ್ತಿಯಿಲ್ಲ" ಎನ್ನುತ್ತ ನೆಲಕ್ಕೆ ಒರಗಿದರು. ಚಂದ್ರ ಬಟ್ಟೆ ಕಳಚಿ ಕೆರೆಗೆ ದುಮುಕುವಷ್ಟರಲ್ಲಿ ಮೂಲೆಮನೆ ಶೇಖರ ಹುಡುಗಿಯ ಶವವನ್ನು ಎಳೆದುತಂದ. ಶೇಖರನೂ ಏದುರಿಸುಬಿಡುತ್ತಿದುದನ್ನು ನೋಡಿ ಚಂದ್ರನಿಗೆ ಅಳುಕುಂಟಾಯಿತು. ನೀರಿನ ಒತ್ತಡ ತುಂಬಾನೇ ಇರಬೇಕು ಇವತ್ತು, ನಿನ್ನೆಯಷ್ಟೇ ಹುಣ್ಣಿಮೆ. ಬೆಳಿಗ್ಗೆ ಹಣದ ಬಗ್ಗೆಯೇ ಚಿಂತಿಸುತ್ತಿದವನಿಗೆ ಅರ್ಧಕ್ಕಿಂತ ಹೆಚ್ಚು ಮುದ್ದೆ ತಿನ್ನಲಾಗಿರಲಿಲ್ಲ, ನೀರಿಗಿಳಿದರೆ ಮತ್ತಷ್ಟು ಸುಸ್ತೋ? ಈಗ ವಾಪಸ್ಸಾಗುವ ಹಾಗೂ ಇಲ್ಲ ಎಂದುಕೊಳ್ಳುತ್ತಾ ಧುಮುಕಿದ. ಇನ್ನುಳಿದಿದ್ದು ಒಂದು ಮಗು ಒಂದು ಮುದುಕಿ. ಧುಮುಕಿದವನು ಒಮ್ಮೆ ನೀರಿನ ಮೇಲೆ ಬಂದು ದೀರ್ಘವಾಗಿ ಉಸಿರೆಳೆದುಕೊಂಡು ಮುಳುಗಿದ. ಬಹಳ ಸಮಯದಿಂದ ಜನರೆಲ್ಲ ಎಬ್ಬಿಸಿದ ರಾಡಿಯಿಂದ ನೀರಿನೊಳಗೆ ಕಣ್ಣು ಹೊಂದಿಸಲು ಕಷ್ಟಪಟ್ಟ. ಗಾಡಿಗಳು ಕೆರೆಯ ಈ ಜಾಗದಲ್ಲಿ ಉರುಳಿದಾಗ ಮಾಮೂಲಿಯಾಗಿ ದೇಹಗಳು ಸಿಕ್ಕಿಕೊಳ್ಳುತ್ತಿದ್ದ ಜಾಗವನ್ನು ನೋಡಿದ. ರೇಷ್ಮೆ ಸೀರೆಯ ಹರಿದ ತುಂಡುಗಳಿದ್ದ... ಇಲ್ಲಿ ಸಿಕ್ಕಿಕೊಂಡ ಶವಗಳನ್ನು ಆಗಲೇ ಸಾಗಿಸಿರಬೇ... ಉಳಿದೆರಡು ದೇಹಗಳು ಆಳಕ್ಕೆ ಜಾರಿಹೋಗಿರಬೇ... ಮತ್ತೊಮ್ಮೆ ಮೇಲೆ ಬಂದ. 'ಸಿಕ್ತಾ' 'ಸಿಕ್ತಾ' 'ಸಿಕ್ತಾ' ಎಂ... ಕುತೂಹಲಭರಿತ ಪ್ರಶ್ನೆಗಳಿಗೆ ಉತ್ತರವನ್ನೀಯದೆ ಪ... ಮುಳುಗಿದ. ಆಳಕ್ಕಿಳಿದಂತೆ ಬೆಳಕೂ ಕಡಿಮೆಯಾಗಿ ಇ... ಕಷ್ಟದ ಕೆಲಸವೇ ಎಂದೆನಿಸಿತು. ಸರಿ ಮೈಸೂರಿನಿ... ಸರಕಾರದವರು ಬರುವವರೆಗೆ ಕಾಯೋಣ ಇಲ್ಲ ನ... ಹುಡುಕೋಣ ಎಂದೆಣಿಸಿ ತಿರುಗಬೇಕೆನ್ನುವಷ್ಟರ... ಯಾವುದೋ ಹಳದಿ ಬಣ್ಣ ಕಂಡಂತಾಯಿತು ತಳದ... ಇನ್ನೂ ಹತ್ತಿರಕ್ಕೆ ಹೋದ. ಮುದುಕಿಯ ಸೊಂಟದ ... ಇದ್ದ ಡಾಬು ಆ ಮಬ್ಬುಬೆಳಕಿನಲ್ಲೂ ಹೊಳೆಯುತ್ತಿ... ಮತ್ತಷ್ಟು ಆಳಕ್ಕೆ ಸರಿದ. ಕೈಗೆರಡರಂತೆ ಬಾ... ಬಳೆ, ಸೊಂಟದಲ್ಲಿ ಒಂದಿಂಚಗಲದ ಡಾ... ಮಾಂಗಲ್ಯಸರದ ಜೊತೆಗೆ ಕತ್ತಿನಲ್ಲಿ ಎರಡು ಕಾ... ಸರ. 'ಪಾಪ ಮುದುಕಿ. ಈ ವಯಸ್ಸಲ್ಲೂ ಎ... ಆಸೆ ಚಿನ್ನದ ಮೇಲೆ' ಎಂದುಕೊಂಡು ಜುಟ್ಟಿಡಿ... ಮೇಲೇರಲಾರಂಭಿಸಿದ. 'ಮೊದಲೇ ... ಅಂತೀಯ. ಬೇಕಾದ್ರೆ ಒಂದು ಸರಾನ... ಬಳೇನೋ ತಕ್ಕೋ ಮಗ' ಎಲ್ಲಿಂದಲ... ತೂರಿಬಂದ ದನಿಯನ್ನು ಕೇಳಿ ಗಾಬ... ಮುದುಕಿಯ ಮೇಲಿನ ಹತೋಟಿ ತಪ್ಪಿ... ಮುದುಕಿ ಪ್ರಶಾಂತ ಮುಖಭಾವದಿಂದ ... ತಳದೆಡೆಗೆ ಜಾರುತ್ತಿದ್ದಳು. ಪೂರ್ತಿ ತಳ ತಲುಪ... ಬಿಡದೆ ಹಿಡಿದುಕೊಂಡ. 'ಹೌದಲ್ಲ ಈಯವ... ಮೈಮೇಲೆ ಇಷ್ಟೊಂದು ಚಿನ್ನವಿದೆ. ನಾನು ಒ... ಬಳೇನೋ ಅಥವಾ ಬಳೆಗಿಂತ ತೂಕವಾಗಿರ... ಕಾಸಿನ ಸರಾನೋ ತೆಗೆದು ಕೊಂಡರೆ ಯಾ... ತಿಳಿಯುತ್ತೆ. ನನ್ನ ಕಷ್ಟವೆಲ್ಲ ಸದ್ಯಕ್ಕಂ... ಮುಗಿಯುತ್ತೆ. ಛೇ ಶವವನ್ನು ದೋಚ... ಯೋಚನೆ ಮಾಡುತ್ತಿದ್ದೀನಲ್ಲ' ಮೇಲೇರುತ್ತಿದ... ಹಣದ ಅಭಾವ ಸೃಷ್ಟಿಸಿದ ಸಂಕಷ್ಟಗ... ನೆನಪಾದವು. ಮಾತನಾಡಿದರೆ ಎಲ್ಲಿ ... ಕೇಳ್ತೀನೋ ಅನ್ನೋ ಭಯ ಊರವರಿಗೆ. ಇ... ಐದು ಎಕರೇಲಿ ಒಂದೆಕರೆ ಮಾರಿದರೆ ಸಾಲ... ತೀರಿಹೋಗುತ್ತೆ ಅಂದ್ರೆ ಅಪ್ಪನ ವರಾತ. ನಾ... ಸತ್ರೂ ಸಹಿ ಮಾಡೋದಿಲ್ಲ ಅಂತ... ಸತ್ತುಹೋಗಿದ್ರೆ ಮಾರೋ ಪರಿಸ್ಥಿತಿನೂ ಬ... ರಲಿಲ್ಲ, ಮಾರೋದಿಕ್ಕೆ ಅವರ ಸಹಿ ಕ... ಬೇಕಿರಲಿಲ್ಲ. ಆಗಿದ್ದಾಗಲೀ ಒಂದು ಸರ ತೆ... ಕೊಂಡೇ ಬಿಡೋಣ ಎಂದು ಮುದುಕಿ... ಕತ್ತಿನೆಡೆಗೆ ಕೈಹಾಕುವಷ್ಟರಲ್ಲಿ ಚಂದ್ರನ ಕ... ನೀರಿನ ಮೇಲೆ ಬಂದಿತ್ತು. 'ಚಂದ್ರ ಬಂದ' ವ... ಬಾಡಿ ಬಂತು'. 'ಥೂ ನನ್ನ ಜನ್ಮಕ್ಕೆ' ... ತನ್ನ ನಿಧಾನಗತಿಯ ಯೋಚನೆಗೆ ಬಯ್ದುಕೊ... ಮುದುಕಿಯ ಬಾಡಿಯನ್ನು ದಡಕ್ಕೆಳೆದು ತಂ...

"ಪ್ರಕಾಶ, ಒಳಗೆ ಏನೂ ಕಾಣ್ತಾನೇ ... ಇನ್ನುಳಿದಿರೋದು ಮಗು. ನೀರು ತುಂಬಾನೇ ಒಳಗೆ... ಕೊಂಡಿರಬೇಕು. ಬೆಳಿಗ್ಗೆ ಹುಡುಕಿದ........" "ಅಯ್ಯಂ... ಅಂಗನ್ನಬ್ಯಾಡ ಕಣಪ್ಪ.........ನನ್ನ......" ಆರ್ದ್ರ ದನಿಯ... ತಿರುಗಿ ನೋಡಲೂ ಧೈರ್ಯವಾಗದೆ ಮತ್ತೆ ನೀರಿಗಿ... ಆ ಮುದುಕಿ ಸಿಕ್ಕಿದ್ದ ಜಾಗದಿಂದ ಒಂದಷ್ಟು ದೂರ... ಬಿದ್ದಿತ್ತು ಮಗು. ಎರಡ್ಮೂರು ವರ್ಷದ ಹುಡ... ಬಲಗೈಯಲ್ಲೊಂದು ಪುಟ್ಟ ಬೊಂಬೆಯನ್ನು ಹಿ... ತಳಕ್ಕೊರಗಿದ್ದ ಮಗುವನ್ನು ನೋಡಿ ಚಂದ್ರನ ಕಣ್ಣ... ಕೆರೆಯೊಳಗೆ ಬೆರೆಯಿತು. ಜುಟ್ಟಿಡಿದೆಳೆಯಲು ಮನಸ್ಸಾ... ಸೊಂಟಕ್ಕೆ ಕೈಹಾಕಿ ಎತ್ತಿಕೊಂಡ. ಬೊಂಬೆಯನ್ನು ಗಟ್ಟಿ... ಹಿಡಿದಿತ್ತು ಮಗು. ಅರ್ಧ ಮೇಲೇರಿದಾಗ ಗಮನಿ... ಪುಟ್ಟಿಯ ಕೊರಳಲ್ಲಿ ಸಣ್ಣದೊಂದು ಸರವಿತ್ತು, ಮತ್ತೆ ಮ... ಗೊಂದಲ. 'ನನ್ದು ಗೊಂಬೆ. ಕೊಡಲ್ಲ ನಾನು' ... ಮುಖಭಾವವಿದ್ದ ಹುಡುಗಿ. ನನ್ನ ಕಷ್ಟ ತೀರಿಸಬಲ್ಲ ... ಏನು ಮಾಡ್ಲಿ ಏನು ಮಾಡ್ಲಿ, ಸತ್ತೋರೇನು ... ಹೊತ್ಕೊಂಡು ಹೋಗ್ತಾರಾ? ಇಲ್ಲ ಇಲ್ಲ ಇದು ತಪ್ಪು... ಯೋಚನಾಸರಣಿ ಅತ್ತಿತ್ತ ತುಯ್ದಾಡಿ ಕೊನೆಗೆ ನೈತಿಕತೆ... ಜಯಿಸಿ ಹುಡುಗಿಯ ಶವವನ್ನೆತ್ತುಕೊಂಡು ಮೇಲೆ ಬಂ... ನೆರೆದವರೆಲ್ಲರ ರೋದನ ಮುಗಿಲು ಮುಟ್ಟಿತು. ಯಾ... ಬಂದು ಚಂದ್ರನ ಕೈಯಿಂದ ಮಗುವನ್ನಿಸಿದುಕೊ... ಅದರ ತಾಯಿಯ ಬಳಿಗೆ ಕರೆದೊಯ್ದರು. ಪ್ರಕಾಶ ತ... ಟವೆಲಿನಿಂದ ಮೈಒರೆಸಿಕೊಂಡ ಶಾಸ್ತ್ರ ಮುಗಿಸಿ ಪ... ಶರ್ಟು ತೊಟ್ಟು ಮನೆಯೆಡೆಗೆ ಹೊರಟವನಿಗೆ ಯಾ... ಆ ಮಗುವನ್ನು ಮತ್ತೊಮ್ಮೆ ನೋಡಬೇಕೆನ್ನಿಸಿತು. ಜನರೆ... ತಾಯಿ ಮಗುವನ್ನು ಸುತ್ತಿಕೊಂಡಿದ್ದರು. ನುಸುಳಿಕೊ... ಒಳಬಂದ.

ಆ ಹುಡುಗಿಯ ಕತ್ತಿನಲ್ಲಿ ಸರವಿರಲಿಲ್ಲ. ಬ... ನೆಲದ ಮೇಲೆ ಬಿದ್ದಿತ್ತು. 'ಅಯ್ಯೋ! ಪೆದ್ದು ಮಾಮ ... ಎಂದವಳು ನಕ್ಕಂತಾಗಿ ಚಂದ್ರನಿಗೆ ಕತ್ತಲು ಕವಿಯಿ...


ಅನಿವಾರ್ಯ ಕಾರಣಗಳಿಂದ ಈ ವಾರ ...

...್ವಾಮಿಗಳು ಸ್ವಾಮಿಗಳ ಕೆಲಸ ಮಾಡಿಕಂಡೋದ್ರೆ ಚೆಂದ

...ಲ್ಲಾ ಸ್ವಾಮಿಗಳ್ನೆಲ್ಲ ಸಂಘ ಮಾಡಿಕೊಂಡು ...ಾಧಕೋಗಿದ್ವನಂತೆ" ಎಂದ ಉಗ್ರಿ.

...ಲ್ಲಾ ಸ್ವಾಮಿ ಅಂದ್ರೆ ಅವುರ್ಯಾರು?" ಎಂದ ...ವ.

...ುರುಬರಿಂದ ಹಿಡದು ಆ ಕಡೆ ಮಾದರಸ್ವಾಮಿ ಅವುರಲ್ಲಾ, ಅವುರ್ನೆಲ್ಲ ಸೇರಿ ಹಿಂದುಳಿದ ವರ್ಗದ



..., ಸದಾನಂದನತ್ರ ಹೋಗಿ ಕಾಸು ಕೇಳಿದರಂತೆ ...ವ."

...ದ್ಯಾಕ್ಕೇಳಿದ್ರೂ?"

...ಈ ಹಿಂದೆ ಎಡೂರಪ್ಪ ಕೇಳದೆಯಿದ್ರೂ ಬ್ರಾಂಬ್ರು, ...ಯಿತ್ಕ, ನಮ್ಮ ಚುಂಚನಗಿರಿ ಮಠಕ್ಕಲ್ಲ ಕೋಟಿ ... ಕೊಟ್ಟನಂತೆ. ಅದ ಕಣ್ಣಾರ ನೋಡಿ ಈ ಕ್ಯಳ ...ಸ್ವಾಮಿಗಳು ನಮಿಗೂ ಲಕ್ಷ ಲಕ್ಷನಾರ ಕೊಡು ...ಕೇಳಿದರಂತೆ."

...ೊಟ್ನೆ ಅವುನು?"

...ಅವುನೆಲ್ಲಿ ಕೊಟ್ಟನು ಮಾವ. ನೋಡನ ನಡೀರಿ ...ಅಂದವುನೆ. ಅಂತೂ ಸ್ವಾಮಿಗಳು ಸಂಘ ಮಾಡಿಕಂಡು ... ಕೇಳೊ ಲ್ಯವೆಲ್ಲಿಗೆ ಬಂದ್ರು."

...ಅಂತೂ ಎಡೂರಪ್ಪನ ಕಾಲದಲ್ಲಿ ಸ್ವಾಮಿಗಳೂ ...ಮ್ರು."

...ಹಾಳಾಗದೇನು? ಕೆಲುವು ಸ್ವಾಮಿಗಳಂತೂ ಕೆಟ್ಟು ...ಡದು ಕುಂತವುರೆ ಕಣಮ್ಮಾವ. ಎಡೂರಪ್ಪ ಒಂದೇ ... ಶಿಳ್ಳೆ ಹ್ವಡುದ್ರು ಸಾಕುನಾಯಿಗಳ ತರ ಊಳಿಡೊ ...ಗಳೇ ಒಂದು ಡಜನ್ನವುರೆ."

...ಅದರಲ್ಯಲ್ಲ ನಮ್ಮ ಸ್ವಾಮಿ ಯಾರಿಗೂ ಮೈಂಟ್ ...ಇಲ್ಲ ಕಂಡ್ರ" ಎಂದು ಸೀರ ಬಾಲಗಂಗಾಧರರನ್ನು ...ಳಿದ.

...ಈ ಸ್ವಾಮಿ ಗೆದ್ದೆತ್ತಿನ ಬಾಲ ಹಿಡಿಯೊ ಸ್ವಾಮಿ ... ಯಾರು ಅಧಿಕಾರದಲ್ಲಿರತರೆ ಅವುರ ಕರದು ಕ್ಯಲಸ ...ಗಳದ್ರಲ್ಲಿ ನಿಸ್ಸೀಮರು. ಅದೇ ಅಧಿಕಾರಿಲ್ದೋರ ... ಸೇರ್ಸದಿಲ್ಲ. ಈಗ ನೋಡ ಸದಾನಂದ ಗೌಡನ ...ಅವ್ರುರೆ."

...ನೀನೇಳೊ ಮಾತು ನಿಜ ಕಂಡ್ರ. ದ್ಯಾವೇಗೌಡ ...ಯಾಗಿದ್ದಾಗ ಅವ್ನ ಕರಿಯದೇನು, ಕಳಸದೇನು, ...ನಾರ ಹಾಕದೇನು. ಅದೇ ಪ್ರಧಾನಿ ಪಟ್ಟದಿಂದ ... ನೋಡು ಕ್ಯಾರೆ ಅನ್ನಲಿಲ್ಲ" ಎಂದ ಸೀರ.

...ಕುಮಾರಸ್ವಾಮಿ ಮುಖ್ಯಮಂತ್ರಿಯಾದಾಗ್ಲು ಅಂಗೆ ಮಾಡಿದರಲ್ಲೊ, ದೇವುಸ್ಥಾನದ ಗಾರಿಪೂರಿನಲ್ಲಿ ಕುಮಾರಸ್ವಾಮಿ ಅಲ್ಲೇ ಕುಂತಿದ್ನಪ್ಪ."

"ಸ್ವಾಮಿಗಳಾದೋರು ಅಧಿಕಾರದಲ್ಲಿ ಇರಲಿ ಇಲ್ದೆ ಇರಲಿ, ಯಲ್ಲಾರ್ನ ಒಂದೇ ತರ ನೋಡಬೇಕು. ದ್ಯಾವೇಗೌಡ ಯಾವತ್ತಿಗೂ ಸ್ವಾಮಿಗಳ ಒಂದೇ ತರ ಭಾವುಣುಸ್ತನೆ."


"ಹಂಡ್ರೆಡ್ ಪರಸೆಂಟು ನಿಜ ದ್ವಡಪ್ಪ" ಎನ್ನುತ್ತಾ ವಾಟಿಸ್ನೆ ಬಂದ.

"ಇದ್ದಕಿದ್ದಂಗೆ ಕಾಣ್ತಿರಲಿಲವಲ್ಲ, ಎಲ್ಲಿಗೋಗಿದ್ದ?" ಎಂದಳು ಜುಮ್ಮಿ.

"ಚಿಕ್ಕಮಗಳೂರು ಕಡೆ ಹೋಗಿದ್ದೆ ಕಣಕ್ಕ. ಅಲ್ಲಿ ಉಪಚುನಾವಣೆ ನ್ಯಡಿತಾಯಿತ್ತು, ಹೋಗಿ ಬರನಾ ಅಂತ ಯೋಚನೆ ಮಾಡುವಾಗ ಜೆಡಿಎಸ್‌ನೋರ ವೆಯಿಕಲ್ ಸಿಕ್ತು. ಹೋಗಿ ಸುತ್ತಾಡಿಕಂಡು ಬಂದೆ."

"ಕುಮಾರಣ್ಣ ಸಿಕ್ಕಿದ್ನೆ?"

"ಇಲ್ಲ ಕಣಕ್ಕ. ಅವುನು ರಾಧಿಕನ ಜೊತೆ



ಅವಳೂರಿಗೋಗಿ ನಾಗಪೂಜೆ ಮಾಡುಸ್ತ ಕುಂತಿದ್ನಂತೆ. ಅದ್ಕೆ ಸಿಗಲಿಲ್ಲ."

"ಅಲ್ಲ ಕಣೊ ಮಲ ವಿಳಿಸಿಬುಟ್ಟು ಮೂತ್ರ ಮಾಡತ ನಿಂತಗಂಡ ಅನ್ನಂಗೆ ಆ ಲಕ್ಷ್ಮಯ್ಯನ ಮಗ ಭೋಜೇಗೌಡುನ್ನ ಯಲಕ್ಷನ್ನಿಗೆ ನಿಲ್ಲಿಸಿ ಇವುನು ನಾಗಪೂಜೆಗೋದ ಅಂದ್ರೆ ಅವುನ ಕತೆಯೇನೂ?" ಎಂದ ಉಗ್ರಿ.

"ಕತೆ ಯಲ್ಲಾರಿಗೂ ಗೊತ್ತಿರೊ ಅಂತದೆ ಅಲ್ಲವೇನೊ. ಅವುರೇನು ತಮ್ಮ ಕ್ಯಾಂಡೇಟು ಗೆಲ್ಲಲಿ ಅಂತ ನಿಲ್ಲಿಸಿದ್ರೆ? ಕಾಂಗ್ರೆಸ್ ಸೋತ್ರೆ ಸದಾನಂದ ನಾವೇಳಿದಂಗೆ ಕೇಳ್ತನೆ ಅಂತ ಕ್ಯಾಂಡೇಟಾಕಿದ್ರು. ಅದಕೆ ಖರ್ಚನೂ ಸದಾನಂದನೇ ಕೊಟ್ಟಿದ್ನಂತೆ. ಅಪ್ಪ ಮಕ್ಕಳಿಗೆ ಮನೆಮನೇಲಿ ಮುದ್ದೆ ಮಾರಿಗುಡೀಲಿ ನಿದ್ದೆ ಅನ್ನಂಗಾಗಿತ್ತು, ನಿಜವಾಗ್ಲು ಅವುರ

ನೋಡಿ ನನಿಗೆ ಫೇಮಸ್ ರಾಜಕಾರಣಿಯಾಗಬೇಕಾಗಿತ್ತು ಅನ್ನುಸ್ತು ಕಣೊ."

"ನಿನಿಗ್ಯಾಕಂಗನ್ನಿಸ್ತೊ ಅದೂ ಅಲ್ದೇ?"

"ನೋಡೋ ಉಗ್ರಿ, ದ್ಯಾವೇಗೌಡ್ರು, ಕುಮಾರಣ್ಣ ಇಂತ ಜಾಗಕ್ಕೆ ಬತ್ತವೆ ಅಂದ್ರೆ ಆ ಏರಿಯಾದಲ್ಲಿ ಜೆಡಿಎಸ್ ಟಿಕೆಟ್ ಕೇಳೊ ಅಂಥೋವು ಒಳ್ಳೆ ಲಾಡ್ಜ ಮಾಡ್ತವೆ. ಕುಮಾರಣ್ಣನಿಗೆ ಏನು ಬೇಕೊ ಅದ ಸಪ್ಲೈ ಮಾಡ್ತವೆ. ಇನ್ನ ದ್ಯಾವೇಗೌಡ್ರು ಕತೆ ವೆರಿ ವೆರಿ ಸಿಂಪಲ್ಲು."

"ಅದೇನು ಸಿಂಪಲ್ಲಪ್ಪ"

"ಒಂದು ಕುರಿ ಮುದ್ದೆ, ಒಂದಿಡಿ ಕಾಳು, ಒಂದು ಸೌಟು ಸಾರು, ಇಷ್ಟೆ ಅವುನೂಟ. ಇಂತ ಊಟವ ಯಾರಾದ್ರು ಮಾಡಿಕಂಡು ಒಂದು ಟಿಫನ್ ಕ್ಯಾರಿಗಾಯ್ಕಂಡು ತತ್ತರೆ. ಈ ತರ ಪಾರ್ಟಿ ವರ್ಕರ್ಸ್ ಜೇಬಲ್ಲೇ ಕಾಲ ಮಾಡೊ ರಾಜಕಾರಣಿಗಳ ನಾನಿದೇ ಮದ್ಲು ನೋಡಿದ್ದು."

"ಯಲ್ಲಾ ಪಾರ್ಟಿ ಲೀಡ್ರು ಇರದೇ ಅಂಗಲವೇನೊ. ಆದರಲ್ಲೂ ದೇವೇಗೌಡರಷ್ಟು ಸರಳವಾಗಿ ಯಾವ ರಾಜಕಾರಣಿ ಅವುನೆ ತೋರು ನೋಡನ."

"ಉತ್ತರ ಪ್ರದೇಶದಲ್ಲಿ ಮುಲಾಯಂ ಸಿಂಗ್ ಅಂತ ಅವುನೆ ಕಣೊ. ಅವುನೊಂತರ ದೇವೇಗೌಡ್ರ ತಮ್ಮಿದ್ದಂಗೆ. ನೋಡಾಗ್ಲೆ ಮಗನ್ನ ಮುಖ್ಯಮಂತ್ರಿ ಮಾಡೇಬುಟ್ಟ. ಅವುನಿಗೆ ಮಾದರಿ ಯಾರಪ್ಪ ಅಂದ್ರೆ ಇದೇ ನಮ್ಮ ದ್ಯಾವೇಗೌಡ್ರು."

"ಮುಲಾಯಂ ಸಿಂಗನ್ನ ದ್ಯಾವೇಗೌಡ್ರಿಗೆ ಓಲುಸಬ್ಯಾಡ ಕಣೊ. ಅವುನು ಮಗನ್ನ ಮುಖ್ಯಮಂತ್ರಿ ಮಾಡಬೇಕಾದ್ರೆ, ಅವುನ್ನೆ ಮುಂದೆ ಬಿಟ್ಟು ಚುನಾವಣೆ ಮಾಡಿದ. ಆದ್ರೆ ದೇವೇಗೌಡ ಪ್ರಕಾಶ, ಸಿಂಧ್ಯಾ ಸಿದ್ಧರಾಮಯ್ಯ, ಇಬ್ರಾಹಿಂ, ವೈದ್ಯನಾಥ ಪಾಟೀಲನಂಥೋರ ಮುಂದೆ ಬುಟಗಂಡು ಓಟು ತಗಂಡ. ಆಮೇಲೆ ಮಗನ್ನ ಕೂರಿಸಿಬುಟ್ಟ. ಅದೇ ಅಪ್ಪಾಮಕ್ಕಳೇ ಯಲಕ್ಷನ್ನಿಗೋದಾಗ ಇಪ್ಪತ್ತೈದು ಸೀಟು ಬಂದ್ರೊ."

"ನೀನೇಳದು ಹಂಡ್ರೆಡ್ಡು ಪರಸೆಂಟು ಸರಿಕಣೊ ಉಗ್ರಿ. ಆದ್ರೆ ಉತ್ತರ ಪ್ರದೇಶದಲ್ಲಿ ಅನಿವಾರ್ಯವಾಗಿ ಅಖಿಲೇಶ್‌ಗೆ ಬಹುಮತ ಬಂತು. ಕಾಂಗ್ರೆಸ್ಸಲ್ಲಿ ವಳ್ಳೆ ಲೀಡರಿದ್ರೆ ಅಷ್ಟು ಬತ್ತಿರಲಿಲ್ಲ."

"ಅದ್ಯಂಗೇಳ್ತಿಯೊ ವಾಟಿಸ್ನೆ."

"ನೋಡಪ್ಪ, ಮಾಯಾವತಿ ಅನ್ನೊ ಮಾರಮ್ಮ ಮಾಡಬಾರ್ದ ಮಾಡದ್ನ ನೋಡಕ್ಯಾಗದೆ, ಜನ ವಿರೋಧಪಕ್ಷದ ಕಡೆ ನೋಡಿದ್ರು. ಬಿಜೆಪಿಗಳು ಮಂದಿರವಲ್ಲೇ ಕಟ್ಟುತೆವು ಅಂತ ತಿರಗ ಅಂತಿದ್ರು. ಇನ್ನ ಕಾಂಗ್ರೆಸ್ಸಲ್ಲಿ ಲೀಡ್ರೇ ಇರಲಿಲ್ಲ."

"ಇದೇನೊ ಹಿಂಗಂತಿ? ರಾಹುಲ್‌ಗಾಂಧಿ ಇರಲಿಲ್ವೇ?"

"ಇದ್ರು ಅವುನೇನು ಬಂದು ಮುಖ್ಯಮಂತ್ರಿಯಾದನೇನಯ್ಯ. ಹೆಲಿಕಾಪ್ಟರಲ್ಲಿ ಕಾಗೆ ತರ ಹಾರಾಡಿದ್ರೆ ಜನ ಓಟುಕೊಡಲ್ಲ. ಅದೇ ಅಖಿಲೇಶ್ ಸೈಕಲ್ ತುಳಿತ ತಿರುಗಿದ. ಮಾಯಾವತಿ ಮ್ಯಾಗಲ ಸಿಟ್ಟು ವರ್ಕೌಟಾಯ್ತು ಅಷ್ಟೆ."

"ಅಖಿಲೇಶ್ ಮೈಸೂರಲ್ಲಿ ಓದಿದ್ನಂತೆ ಕಣೊ."

"ನಾನು ನೋಡಿದೆ, ಪೇಪ್ರಲ್ಲಿ ಕೊಟ್ಟವುರೆ. ದಿನಾ ಚಾಮುಂಡಿ ಬ್ಯಟ್ಟ ಹತ್ತತಿದ್ನಂತೆ. ಇಂದ್ರಾಭವನದತ್ರಕೆ ಬಂದು ಮೈಸೂರು ಪಾಕ್ ತಿಂತಿದ್ನಂತೆ ಅಂತ ಬರದವೆ."

"ಕತೆ ಕಟ್ಟದ್ರಲ್ಲಿ ಪೇಪರ್‌ನೋರೆ ನಿಸ್ಸೀಮರಲವೆ."

"ಚಿಕ್ಕಮಗಳೂರು ಯಲಕ್ಷನ್ನಲ್ಲಿ ಕಾಂಗ್ರೆಸ್ ಗೆಲ್ತದೆ ಅಂತ ಯಾವನೂ ಬರಿಲಿಲ್ಲವಲ್ಲಾ ಯಾಕೆ?"


"ಎಮ್ಮೆಲ್ಲೆಗಳ್ಯಲ್ಲ ಬಿಜೆಪಿಗಳಾದ್ರೆ ಯಂಗೆ ಬರಿತರೆ. ಜನಗಳೆ ಕಾಂಗ್ರೆಸ್ ಕ್ಯಾಂಡೇಟು ವಳ್ಳೆಮನ್ಸ ಅಂತ ಪ್ರಚಾರ ಮಾಡಿಕೊಂಡ್ರು. ಬಿಜೆಪಿಯೋನು ಭಜರಂಗದಿಂದ ಬಂದು ಅಗಲವಾದ ಕುಂಕುಮ ಅಳಿಸಿಕೊಂಡು ಬರೀ ಒಂದು ಬಟ್ಟು ಮಡಿಕಂಡು ಶೃಂಗಾರ ಪುರುಷನಂಗೆ ಕಂಡ. ಜನಕ್ಕೆ ಏ ಇವುನು ಸರಿಲ್ಲ ಅನ್ನುಸ್ತು. ಇನ್ನ ದಳದ ಬೋಜೇಗೌಡನಿಗೆ ನಿಂತಾಗ್ಲೆ ಗೊತ್ತಾಗಿತ್ತು. ನಾನು ಮೂರನೇ ಸ್ಥಾನ ಅಂತ. ಇದ್ಯಲ್ಲಾತಕಿಂತ್ಲೂ ಎಡೂರಪ್ಪ ಸರಿಯಾಗೇ ಕೈಕೊಟ್ಟ"

"ಎಡೂರಪ್ಪನ ವಿರುದ್ಧ ಚುಂಚನಗಿರಿ ಸ್ವಾಮಿ. ತಿರುಗಿಬಿದ್ದು ಸದಾನಂದನ ಪರ ವಯಿಸ್ಯವುರಲ್ಲಾ, ಹಿಂಗಾದರ್ಯಂಗೇ?"

"ಅದೂ ಹಿಂಗೆ ಕಣೊ. ದಿನಕೆ ಮೂರು ಸತಿ ಡಯಾಲಸಿಸ್ ಆದ್ವಾಗ ಇಂಥೊರ ಮೈಂಡು ಮತೀಯವಾಗತ್ತಂತೆ. ಇದೇ ಕುಮಾರಣ್ಣ ಎಡೂರಪ್ಪನಿಗೆ ಅಧಿಕಾರ ಕೊಡದೆ ಕೈಕೊಟ್ಟಾಗ, ಮಾತಾಡಬೇಕಾಗಿತ್ತು, ಆಗೇನು ನಾಲಗೆ ಬಿದ್ದೋಗಿತ್ತೆ? ಸ್ವಾಮಿಗಳು ಈ ಹಲ್ಲಂಡೆ ರಾಜಕಾರಣದೊಳಿಕೆ ಬರಬಾರದು ಅನ್ನದು ಇದಕೆ" ಎಂದು ವಾಟಿಸ್ನೆ ಸಿಟ್ಟಿನಿಂದ ಹೋದ.

ಕೃತಜ್ಞತೆಯ ನೇಣು

...ಮನುಷ್ಯ ತನ್ನನ್ನು ದೈಹಿಕವಾಗಿ, ಮಾನಸಿಕವಾಗಿ ಶುದ್ಧವಾಗಿಟ್ಟುಕೊಳ್ಳಲು ಇಡೀ ದಿವಸ ಪ್ರಯತ್ನಿಸುವುದು ...ಚಿತ್ರವಾಗಿರುತ್ತದೆ. ಈ ಬಗ್ಗೆ ಆಮೇಲೆ ಬರೆಯುತ್ತೇನೆ. ಇಲ್ಲಿ ನನ್ನನ್ನು ಚಕಿತಗೊಳಿಸಿರುವ ಒಂದು ಸಂಗತಿ ...ಸುತ್ತೇನೆ. ನಮ್ಮೂರಿನ ದೊಡ್ಡ ಶ್ರೀಮಂತರ ಮನೆಯಲ್ಲಿ ರಾಮ ಎಂಬ ಹುಡುಗನಿದ್ದ. ಆತನ ತಾಯಿ ...ನನ್ನು ಸಾಕಲಾಗದೆ ಸಾಹುಕಾರರ ಮನೆಯಲ್ಲಿ ಬಿಟ್ಟಿದ್ದಳು. ಅವನು ಎರಡು ತಿಂಗಳ ಮಗುವಿದ್ದಾಗಲೇ ...ದೆ ತೀರಿಕೊಂಡಿದ್ದ, ಕುಡಿದು ಸತ್ತ ಎಂದು ಎಲ್ಲರೂ ಹೇಳುತ್ತಿದ್ದರು. ನಾನು ಸಹಿತ ತುಂಬ ...ಸ್ಸಾಗಿದ್ದರಿಂದ ಆತ ಅಷ್ಟೇಕೆ ಕುಡಿಯುತ್ತಿದ್ದ, ಕುಡಿಯುವುದರಿಂದ ಸಾಯುತ್ತಾರೆಯೇ ಎಂದು ...ಕೊಂಡು ಯಾವುದೂ ಬಗೆಹರಿಯದೆ ಸುಮ್ಮನಿದ್ದೆ. ನಾನು ಗಮನಿಸಿದಾಗ ರಾಮ ಹನ್ನೆರಡು ...ವಯಸ್ಸಿರಬಹುದು; ನಾನಾಗ ಹೈಸ್ಕೂಲಿನಲ್ಲಿ ಓದುತ್ತಿದ್ದೆ. ರಾಮನಿಗೆ ಸಾಹುಕಾರ ಷಡಕ್ಷರಿಯವರ ...ನೆಯಲ್ಲಿ ಯಾವುದಕ್ಕೂ ಕಡಿಮೆಯಾಗಿರಲಿಲ್ಲ; ಅವನನ್ನು ಅವರು ಶಾಲೆಗೆ ಕಳಿಸಿ ಓದಿಸಿದ್ದರು ...ಡ. ಒಂದು ರೀತಿಯಲ್ಲಿ ಎಲ್ಲ ಕೆಲಸಗಾರರ ಮುಖ್ಯಸ್ಥನಂತೆ ಈತ ಬೆಳೆದ. ಮನೆಯಲ್ಲಿ ಎಲ್ಲ ಕಡೆ ...ಾಡಲು ಆಗುತ್ತಿರಲಿಲ್ಲ, ಷಡಕ್ಷರಿಯವರು ಮೇಲುಜಾತಿಯವರಾದ್ದರಿಂದ ಯಾರೂ ಹೇಳದೆಯೇ ...ಮ ತನ್ನ ಮಿತಿ ಅರಿತಿದ್ದ, ಹಾಡು ಹೇಳಲು ಕಲಿತಿದ್ದ, ತೆಳ್ಳಗೆ ಉದ್ದಕ್ಕೆ ಬೆಳೆದಿದ್ದ, ಎಲ್ಲರಿಗಿಂತ ...ವಾದ ಬಟ್ಟೆ ಹಾಕಿಕೊಳ್ಳುತ್ತಿದ್ದರೂ ಆತ ತಾನು ಶ್ರೇಷ್ಠ ಎಂದು ತೋರದಿರಲು ಕೆಲಸದವರ ...ಯಲ್ಲೇ ಇರುತ್ತಿದ್ದ, ಟವಲು, ಪಂಚೆ, ಅಂಗಿ ಹಾಕಿಕೊಳ್ಳುತ್ತಿದ್ದ ಈತ ಕೆಲಸ ಮಾಡುವಾಗ ...ರಲ್ಲಿ ಇರುತ್ತಿದ್ದ, ಅವನು ಷಡಕ್ಷರಿಯವರ ಮನೆಯಲ್ಲಿ ಎಷ್ಟು ಬಳಕೆಯಾಗಿದ್ದನೆಂದರೆ, ...ಗಳನ್ನು, ಕೆಲಸಕ್ಕೆ ಹಚ್ಚುವುದರಿಂದ ಹಿಡಿದು ಅವರಿಗೆ ಕೊಡಬೇಕಾದ ಕೂಲಿ, ವೇತನ ...ವನ್ನು, ಅವನೇ ಬರೆದಿಟ್ಟು ಯಜಮಾನರಿಗೆ ಹೇಳುತ್ತಿದ್ದ. ಅವನಿಗೆ ಇನ್ನೇನು ಪ್ರಾಯ ...ಗಿಸಿತು ಎನ್ನುವಾಗ ಎಲ್ಲರನ್ನೂ ವಿಸ್ಮಯಗೊಳಿಸಿದ ಒಂದು ಸಂಗತಿ ಆಯಿತು. ರಾಮು ತಾನು ಮದುವೆಯಾಗುವುದಕ್ಕೆ ...ಗಿ ಷಡಕ್ಷರಿಯವರ ಮನೆ ಬಿಡಲು ತೀರ್ಮಾನಿಸಿ ಆ ತೀರ್ಮಾನ ತನ್ನ ಯಜಮಾನರ ಕಿವಿಗೆ ಬೀಳುವಂತೆ ...ಬಿದ್ದ. ಊಟ, ತಿಂಡಿ, ಬಟ್ಟೆ, ಯಾವುದಕ್ಕೂ ಕೊರತೆ ಇರದಿದ್ದರೂ, ಒಂದು ರೀತಿಯಲ್ಲಿ ಯಜಮಾನನಂತಿದ್ದರೂ



ರಾಮ ತನ್ನ ಸ್ವಂತ ಮನೆ ಮಾಡಿಕೊಳ್ಳಲು ಮನಸ್ಸು ಮಾಡಿದ್ದ. ಅವನು ಒಂದು ದಿನ ಎಂದಿಗಿಂತ ಹೆಚ್ಚು ನಿದ್ರಿಸಿ ಕೆಲಸಕ್ಕೆ ಹಾಜರಾಗದಿದ್ದಾಗ ಷಡಕ್ಷರಿಯವರು ಸ್ವಲ್ಪ ದನಿಯೇರಿಸಿ ಮಾತಾಡಿದರಂತೆ-ಅದು ಆತನ ವ್ಯಕ್ತಿತ್ವದ ಏನೇನೋ ಭಾವನೆ ಕೆರಳಿಸಿತ್ತು. ಅಂದು ಎಷ್ಟು ಹೇಳಿದರೂ ರಾಮ ತನ್ನ ನಿರ್ಧಾರ ಬದಲಿಸಲಿಲ್ಲ.


ಸಾಕಿ ಬೆಳೆಸಿದ್ದರೆ ರಾಮ ಕೃತಜ್ಞನಾಗಬೇಡವೇ? ಎಂದು ಕೇಳಬೇಕೆನ್ನಿಸುತ್ತದೆ. ಆದರೆ ಕೃತಜ್ಞತೆಯೇ ಅವನನ್ನು ಜೀತದಲ್ಲಿ ಭದ್ರವಾಗಿ ಸ್ಥಾಪಿಸಿಬಿಡುತ್ತದೆ.

ಕೃತಜ್ಞತೆಯ ಬಂಧನ, ಗೌರವದ ಬಂಧನ, ಭಕ್ತಿಯ ಬಂಧನ ಇವೆಲ್ಲವನ್ನೂ ಬಳಸಿ ರಾಮನನ್ನು ಕಟ್ಟಿಹಾಕಬಹುದು. ಆದರೆ ಅದು ಸಾಧ್ಯವಾಗುವುದಿಲ್ಲ, ಯಾಕೆಂದರೆ ಮನುಷ್ಯನಲ್ಲಿ ಜೀತದ, ಗುಲಾಮಗಿರಿಯ ವಿರುದ್ಧ ಪ್ರಬಲವಾದ ಭಾವನೆ ಇರುತ್ತದೆ-'ಹಂಗಿನರಮನೆಗಿಂತ ಹಂದರದ ಗುಡಿ ಲೇಸು' ಎಂದು ಗುಡಿಸಲನ್ನು ಆರಿಸಿಕೊಳ್ಳುವವನಿಗೆ ದೈಹಿಕ ನೆಮ್ಮದಿಯ ಬಗ್ಗೆ ಗೊತ್ತು, ಆದರೆ ಅದಕ್ಕಿಂತ ಮುಖ್ಯವಾದದ್ದು ಮಾನಸಿಕ ನೆಮ್ಮದಿ.

ಇಲ್ಲಿ ಶೇಕ್ಸ್‌ಪಿಯರ್‌ನ ಕ್ಯಾಲಿಬಾನ್ ಮತ್ತು ಜೀತಮುಕ್ತಿಯ ಬಗ್ಗೆ ಮಾತನಾಡಬಹುದು. ಬೇಡ. ಈ ತರಹದ ಟಿಪ್ಪಣಿಗಳು ಅತಿ ಅನ್ನಿಸಿದೊಡನೆ ತಮ್ಮ ಆಕರ್ಷಣೆ ಕಳೆದುಕೊಳ್ಳುತ್ತವೆ.

ರಾಮ ಈಚೆಗೆ ತೀರಿಕೊಂಡ.... ಆತ ತೀರಾ ಬಡವನಾಗಿದ್ದ. ಅವನ ಹೆಸರಲ್ಲಿ ಷಡಕ್ಷರಿಯವರು ಸ್ವಲ್ಪ ಜಮೀನು ಬರೆದಿದ್ದರು. ಪುಟ್ಟ ಮನೆ ಕಟ್ಟಿಕೊಂಡಿದ್ದ. ಇಬ್ಬರು ಮಕ್ಕಳಿದ್ದವು. ಆದರೆ ಆತ ಕುಡಿಯುವುದನ್ನು ಕಲಿತ. ಹಾಡುತ್ತಾ ಕುಣಿಯುವುದನ್ನು ಕಲಿತ. ಸರಿಯಾಗಿ ತಿನ್ನುತ್ತಿರಲಿಲ್ಲ. ಅವನ ಕಣ್ಣಿನ ಹೊಳಪು ಹಾರಿಹೋಗಿತ್ತು, ಆದರೆ ಆತನ ಚೇತನ ಮುಕ್ತವಾಗಿತ್ತು....

–ಮಾರ್ಚ್ 19, 1997



ಪುರುಸೊತ್ತೇ ಇಲ್ಲವಂತೆ ಕಣ್ರೆ


ಪರೀಕ್ಷೆಗಳ ಕಾಲ. ವಿದ್ಯಾರ್ಥಿಗಳು ಅಭ್ಯಾಸ ಮಾಡಲೇಬೇಕಾದ ಅನಿವಾರ್ಯತೆ. ಆದರೆ ಕರೆಂಟ್ ಇಲ್ಲ.

ಸುಡುಬಿಸಿಲು. ತಣಿಯದ ಬಾಯಾರಿಕೆ. ಕುಡಿಯಲು ನೀರಿಲ್ಲ, ಪಂಪ್ ಸ್ಟಾರ್ಟ್ ಮಾಡಲು ಕರೆಂಟ್ ಇಲ್ಲ.

ವಿಪರೀತ ಧಗೆ. ಬತ್ತದ ನೀರಿನ ಸೆಲೆಯಂತೆ ದೇಹ ಬೆವರು ಒಸರುತ್ತಲೇ ಇದೆ. 'ಫ್ಯಾನ್ ಆದರೂ ಹಾಕ್ರೋ ಮುಂಡೇ ಮಕ್ಕಳ' ಅಂತ ಅರಚಿದರೆ ಬರುವ ಉತ್ತರ 'ಕರೆಂಟ್ ಇಲ್ಲ.'

ಇಂತಹ ಹತ್ತಾರು ದೂರುಗಳು.

ವಿದ್ಯುತ್ ಖಾತೆ ಅಂತ ಇದೆಯಲ್ಲ, ಅದಕ್ಕೆ ಒಬ್ಬ ಮಂತ್ರಿ ಅಂತಾನೂ ಇದಾರಲ್ಲ, ಅವರಿಗೆ ಜನ ಹಿಡಿಶಾಪ ಹಾಕುತ್ತಿದ್ದಾರಂತೆ. 'ಅವರೇನು ಮಂತ್ರಿಗಿರಿ ಮಾಡ್ತಿದಾರೋ ಇಲ್ಲ ಕತ್ತೆ ಕಾಯ್ತಿದಾರೋ' ಅಂತ ಬಿಸಿಲ ಬೇಗೆ ಬಸವಳಿದ ಜನ ಮುಟುಕ್ತಾ ಬಿದ್ದವರಂತೆ.





ಜನ ಯಾಕೆ ಹಿಂಗೆ ಆಡುತ್ತಿದ್ದಾರೋ ತಿಳೀನೇ ವಲ್ದು. ವಿದ್ಯುತ್ ಖಾತೆನೂ ಇದೆ. ಅದಕ್ಕೆ ಮಂತ್ರಿಣಿಯೂ ಇದ್ದಾರೆ. ಜನರ ಕಷ್ಟದ ಅರಿವೂ ಆ ಹೆಣ್ಣುಮಗಳಿಗೆ ಇದೆ. ಅದಕ್ಕೆ ಪರಿಹಾರ ಒದಗಿಸಬೇಕು ಅನ್ನೊ ಕಾಳಜೀನೂ ಇದೆ. ಅವರು ತಾನೆ ಏನು ಮಾಡುತ್ತಾರೆ. ಏಳೆಂಟು ತಿಂಗಳಿಂದ ಆ ಹೆಣ್ಣುಗಳಿಗೆ ಪುರುಸೊತ್ತೇ ಇಲ್ಲದ ಹಾಗೆ ಆಗಿದೆಯಂತೆ. ಅದೇನಪ್ಪ ಅಂತಹ ಘನಕಾರ್ಯ ಅಮರಿಕೊಂಡಿರೋದು ಎಂದೆಲ್ಲ ವ್ಯಂಗ್ಯ ಆಡಬಾರದು ಕಣ್ರಿ. ಅವರ ಸಂಕಟ ಅವರಿಗೆ ಗೊತ್ತು.

ಯಡ್ಯೂರಪ್ನೋರು ಮುಖ್ಯಮಂತ್ರಿಯಾಗಿದ್ದೋರು. ಏಳು ತಿಂಗಳ ಹಿಂದೆ ಗಣಿ ಹಗರಣದಲ್ಲಿ ಯಾರೋ ತಗುಲಾಕಿಸಿದ್ರು. ಅದು ದಿಲ್ಲಿವರೆಗೂ ಮುಟ್ತು. ಅವರು ಅರೆರೆ ಇದೇನು ಯಡವಟ್ಟು ಕೆಲಸ ಆಗೋಗದಲ್ಲಾ. ಇಂತಹವನ್ನೆಲ್ಲ ಮುಚ್ಚುಮರೇಲಿ ಮಾಡೋ ತತ್ವಸಿದ್ಧಾಂತಗಳ ಪಕ್ಷ ನಮ್ಮದಲ್ವಾ. ಅದು ಬಿಟ್ಟು ಹಿಂಗೆ ರಾಜಾರೋಷವಾಗಿ ತಿಂದು ತಲೆಗೇ ತಂದುವುಡಗವ್ನಲ್ಲಾ ಅಂತೆಲ್ಲ ಪೇಚಾಡಿಕೊಂಡರು. ಇದ ಹಿಂಗೆ ಬಿಟ್ರೆ ಆಗದು ಅಂತಾವ ದಿಲ್ಲಿಲಿದ್ದೋರು ಏನು ಮಾಡಿದ್ರು. ಹಗರಣದ ಗಿರಾಕಿನ ಕರೆಸಿ 'ಒಂದು ಆರು ತಿಂಗಳು ಮನೇಲಿ ಕುಂತಿರು. ಜನರ ಬುದ್ಧಿ ಗೊತ್ತೇ ಅದೆ. ಹೊಸದರಲ್ಲಿ ಹಾರಾಡ್ತವೆ. ಆಮೇಲೆ ಮರೆತುಕೊತವೆ. ಆರು ತಿಂಗಳ ನಂತರ ನೀನೇ ರಾಜ್ಯ ಆಳುವೆಯಂತೆ' ಅಂತ ವೈನ ಮಾಡಿದರು. ವಿಧಿ ಇರಲಿಲ್ಲವಲ್ಲಾ, 'ಹಂಗೇ ಆಗಲಿ' ಅಂದ್ರು. ಯಾರೂ ಹಗರಣದ ಗಿರಾಕಿ. ಕುಂತ್ಕೊ ಅಂದರೆ ಕುಂತ್ಕೊಳೋನು, ನಿಂತ್ಕೊ ಅಂದ್ರೆ ನಿಂತ್ಕೊಳೋನು ಯಾರವ್ರೆ ಅಂತ ಯಡ್ಯೂರಪ್ನೋರು ತಲಾಶೆಯಲ್ಲಿದ್ದಾಗ ಒಬ್ಬ ಕಂಡ. ಇದೇ ಬಲಿಗೆ ಸರಿಯಾದ ಕುರಿ ಅಂತಾವ ಅವನ್ನ ಬಿಗಿಯಾಗಿ ತಬ್ಬಕೊಂಡರು. 'ಹಿಂಗಿಂಗೆ ನೀನು ವಸಿದಿನ ಈ ಕುರ್ಚಿ ಮೇಲೆ ಕುಂತಿರು. ನಾನೇಳಿದ ದಿವಸ ಇದ ನನಗೆ ಬಿಟ್ಟುಕೊಡುವಂತೆ' ಅಂದು ಬಿಡಿಸಿಬಿಡಿಸಿ ಹೇಳಿದರು. ಹಲ್ಲು ಬೀರನಿಗೊ ಬಯಸದೇ ಬಂದ ಭಾಗ್ಯ ಅಲ್ಲವಾ ಇದು. 'ಹಂಗೇ ಆಗ್ಲಿ ಗುರುಗಳೇ' ಅಂತಾವ ಅವರ ಕಾಲಿಗೆ ಅನಾಮತ್ತು ಬಿದ್ದ.

ಕುರ್ಚಿ ರುಚಿಯಾಗಿತ್ತು. ಅದರ ಮೇಲೆ ಕುಂತಿದ್ದೋನು ಏನು ಮಾಡ್ದ. ತಡಾರಕೆ ಚೇರ ಭದ್ರ ಮಾಡ್ತಾ ಕುಂತು ಬುಡೋದ! 'ಕುರ್ಚಿ ಬುಡು' ಅಂದರೆ 'ಬುಡಾಕಿಲ್ಲ' ಅಂದುಬುಡೋದ! ಎಲಾ ಎಲಾ ಹಿಂಗೆ ಮಾಡುತ್ತಾ ಅವನಲ್ಲ ಇವನು ಅಂತ ದಿಲ್ಲಿ ದೊರೆಗಳಿಗೆ ದೂರು ಹೊತ್ತರು. ಕಂಠಮಟ್ಟ ತಿನ್ನಿದ್ದ ಮರೆತ ಬದ್ಕೆತ್ತ್ರೋವು 'ಆಗ ನೋಡಾನ, ಈಗ ನೋಡಾನ' ಅನ್ನೋಕೆ ಶುರು ಹಚ್ಕಕೊಂಡೊ. ಇದೊಂದು ಕಡೆ ಆದ್ರೆ ಯಡ್ಯೂರಪ್ನೋರು 'ತಾವು ತಮ್ಮ ಕೂದಲಿಗೂ ಸಮ ಇಲ್ಲ' ಎಂದು ಭಾವಿಸಿದ್ದ ಈಶ್ವರಪ್ಪನಾದ ಈಶ್ವರಪ್ಪ 'ದಿಲ್ಲೀಲಿ ಏನೂ ಕಿಸಿಯೋಕಾಗಕ್ಕಿಲ್ಲ, ಏರ್‌ಲೈನ್ಸ್‌ಗೆ ವ್ಯಾಪಾರ ಆಯ್ತದೆ ಅಷ್ಟೇಯ' ಅನ್ನೊ ಚುಟುಕಿ ಮುಳ್ಳು ಆಡಿಸಿದ. ನನ್ನೇ ಆಡಿಕೊಳ್ಳೊ ಹಂಗೆ ಆದ ಬಡ್ಡಿ ಹೈದ್ನೆ ತೋರುಸ್ತೀನ ನನ್ನವರಸೇಯ ಅಂದ್ಕಂಡ ಯಡ್ಯೂರಪ್ಪನವರು ದಿಲ್ಲೀಯೋರ ಬಿಟ್ಟರು, ಬರೀ ಮಾಟಮಂತ್ರ, ಹೋಮ ಯಜ್ಞ, ತೀರ್ಥಯಾತ್ರೆ, ಮಠಗಳ ಭೇಟಿ ಪ್ರಾರಂಭಿಸಿದರು. ಅಷ್ಟು ಹೊತ್ತಿಗೆ ಹುಟ್ಟಿದ ದಿವಸ ಬಂತು. ಕರ್ನಾಟಕದ ಆರು ಕೋಟಿ ಜನರು ಇದನ್ನು ಆಚರಿಸಲು ಬಯಸಿದರಂತೆ. ಇದನ್ನು ಯಾರು ಹೇಳಿದರು ಎಂದರೆ ಯಡ್ಯೂರಪ್ನೋರೇ ಹೇಳಿದರು! ಈ ಹುಟ್ಟಿದ ಹಬ್ಬವನ್ನು ಎಲ್ಲಿಯವರೆವಿಗೂ ಮಾಡುತ್ತಾರಂತೆ ಅಂದರೆ 'ಕುರ್ಚಿ ಸಿಗುವವರೆಗೂ ಹುಟ್ಟಿದ ಹಬ್ಬ ಎನ್ನುವುದೇ ನಮ್ಮ ಉತ್ತರ!

ಅದು ಹಾಗಿರಲಿ.

ಯಡ್ಯೂರಪ್ಪನವರ 'ಕುರ್ಚಿಗಾಗಿ ಆಧ್ಯಾತ್ಮಿಕತೆ'ಯಲ್ಲಿ ಸಕ್ರಿಯವಾಗಿ ಪಾಲುಗೊಳ್ಳಲು ನಂಬಿಕೆಗೆ ಅರ್ಹರಾದವರು ಒಬ್ಬರಾದರೂ ಇರಬೇಕಲ್ಲಾ, ಕರಾವಳಿ ಕನ್ಯೆಯೇ ಸೂಕ್ತ ಅಂತಾವ ಹೋದಹೋದ ಕಡೆಗೆಲ್ಲ ಎಳೆದುಕೊಂಡು ಹೋಗುತ್ತಿದ್ದರು. ದಿಲ್ಲಿ, ಮಠ, ದೇವಸ್ಥಾನ, ಹುಟ್ಟಿದಹಬ್ಬ ಅದ್ಲೂ ಇದೂ ಅಂತ ತೊಡಗಿಸಿಕೊಂಡಿರೋದ್ರಿಂದ ವಿದ್ಯುತ್ ಸಚಿವೆ ಅವರಿಗೆ ಇಲಾಖೆ ಕಡೆ ನಿಗಾ ವಹಿಸಲೇ ಆಗುತ್ತಿಲ್ಲವಂತೆ ಪಾಪ. ಅವರ ಸಂಕಟ ಅರ್ಥ ಮಾಡಿಕೊಳ್ಳದೆ ಹಿಂಗೆ ಹಿಗ್ಗಾಮುಗ್ಗಾ ಜಾಡಿಸೋದು ತರವಲ್ಲ ಬಿಡಿ.....

ಅವರ ಅದಕ್ಷತೆಯೇ ನಿಮ್ಮ ಶ್ರೀರಕ್ಷೆ....!



ಎಚ್.ಎಲ್. ಕೇಶವಮೂರ್ತಿ

ಅಣಕ

ವಕೀಲರು, ಪೊಲೀಸಿನವರು, ಮಾಧ್ಯಮದವರ ನಡುವೆ ಜಟಾಪಟಿ ನಡೆದದ್ದು ಈಗ ಹಳಸಲಾಗಿದೆ. ಗಬ್ಬುನಾ ಬೀರುತ್ತಿದೆ. ಹಾಗಿದ್ದರೂ ಇನ್ನೂ ಯಾಕೆ ತಪ್ಪಿತಸ್ಥರನ ಹಿಡಿದಿಲ್ಲಾ ಅಂತ ಮಾಧ್ಯಮಗಳವರು, ಅದರಲ್ಲೇ ಜೀ ಇಟ್ಟುಕೊಂಡಿರೋರು ಹಾರಾಡುತ್ತಾ ಬಿದ್ದವರಂತೆ. ಅಲ್ರಿ ಮಾರಾಯರೆ ವಿಡಿಯೋ ಕ್ಲಿಪ್ಪಿಂಗು, ಫೋಟೋಗಳು ಎಲ ಅವೆ ಸರೀರಿ. ಆದರೆ ವಿಷಯ ಗೊತ್ತಾ? ಗಲಾಟೆಯ ಭಾಗವಹಿಸಿದ್ದೋರೆಲ್ಲ ನಕಲಿಗಳಂತೆ! ಲಾಯರುಗಳೂ ನಕ ಪೊಲೀಸಿನವರೂ ನಕಲಿ. ಮಾಧ್ಯಮದವರೂ ನಕ ಇರಬಹುದೋ ಏನೋ! ಅಂದರೇನಾಯಿತು ಹೊಡೆದವರೂ ನಕಲಿ, ಹೊಡೆಸಿ ಕೊಂಡೋರೂ ನಕಲಿ ಯಾರನ್ನ ಅಂತ ಹಿಡಿದು ಕೇಸ್ ಜಡೀತಾರೆ ಹೇ ಅದಕ್ಕೆ ಗೃಹಮಂತ್ರಿಗಳು, ಈ ನಕಲಿ ಬಡ್ಡೇವು ಸಾಯ ಅಂತಾವ ಸುಮ್ಮನೆ ಅವ್ರೆ. ಇದನ್ನೇ ಮಹಾಪರಾಧ ಎನ್ನುವ ಕಸ್ತೂರಿ ಜನ ನಾಯಕ... ಇದೇನಿ ಇದು ಕಸ್ತೂರಿ ಜನನಾಯ ಅಂತೀರಿ. ಜನನಾಯಕ ಅಂದ್ರೆ ಸಾಲದ ಅಂತೆಲ್ಲ ಮ ಬಾಯಿ ಹಾಕಬೇಡಿ. ಕಸ್ತೂರಿ ಚಾನೆಲ್‌ನವರು ಜನನಾಯ ಅಂತ ಸ್ಕ್ರೀನ್ ಮೇಲೆ ತೋರಿಸಿ ಆಮೇಲೆ ಜನನಾಯಕ ಮುಖ ಅವನು ಉದುರಿಸುವ ಅಣಿಮುತ್ತುಗಳನ ಗಂಟೆಗಟ್ಟಲೆ ತೋರಿಸ್ತಾರಲ್ಲಾ ಅವು ಕಣ್ರಿ. ಇವ 'ಜನನಾಯಕತ್ವ' ಕಸ್ತೂರಿ ವಾಹಿನಿಗೆ ಮೀಸಲು. ಬೇ ವಾಹಿನಿಗಳಲ್ಲಿ ಇವರು ಜನನಾಯಕರಲ್ಲ! ಪಾ ಇವರೊಬ್ಬರೇ ಹೀಗೆ ಅಂತ ಅಲ್ಲ, ನಮ್ಮ ಶ್ರೀರಾಮುಲ ಇದಾರಲ್ಲ, ಅದೇ ಬಡವರ ಶ್ರಮಿಕರ ರೈತರ ಪಕ್ಷ ಸ್ವಯಂಘೋಷಿತ ಅಧ್ಯಕ್ಷರು. ಅವರು 'ಜನಶ್ರೀ ಬಡವ ಬಂಧು.' ಅವರವರ ವಾಹಿನಿಗಳಲ್ಲಿ ಅವರವರೆ 'ನಾಯಕರ ಬಂಧುಗಳು'! ಇಷ್ಟೆಲ್ಲ ಹೇಳಿದ ಮೇಲೂ 'ಕಸ್ತೂ ಜನನಾಯಕರು' ಯಾರು ಅಂತಿರಲ್ಲೀ... ಅವರೇ ನ ಕುಮಾರಸ್ವಾಮಿಯೋರು! ಅವರು ಗೃಹಮಂತ್ರಿಗಳನ್ನ 'ಅದ ಗೃಹಮಂತ್ರಿ', 'ನಾಲಾಯಕ್ ಗೃಹಮಂತ್ರಿ' ಅಂತ ಬಡಬಡಿಸ್ತಾ ಅವ್ರೆ. ರೀ ಕುಮಾರಸ್ವಾಮಿಯವರೇ ಕೊಂ ನಿಧಾನ ಇರಲಿ. ನಾಲಿಗೆ ಇದೆ ಅಂತ ಹೆಂಗೆಂಗೋ ಹರಿಯ ಬಿಡಬೇಡಿ. ಅವರು ಅದಕ್ಷರು ನಿಜ. ಅವರು ನಾಲಾಯಕ ಅದೂ ನಿಜ. ಆದರೆ ಅದು ನಿಮ್ಮ ಪುಣ್ಯ ಅಂದುಕೊ

ಸೋನಿ ಸೂರಿಯ ಪೀಡಕನಿಗೆ ಶೌರ್ಯ ಪ್ರಶಸ್ತಿ


ಈ ವರ್ಷದ ಮಹಿಳಾ ದಿನವೂ ಮೊನ್ನೆ ಎಂಟನೆಯ ತಾರೀಖಿನಂದು ಬಂದಿತು, ಹೋಯಿತು. ಹಲವಾರು ಸಾಧಕಿಯರಿಗೆ ಪ್ರಶಸ್ತಿಗಳೂ ಸಿಕ್ಕಿದವು. ಆದರೆ ಈ ಭರಾಟೆಯಲ್ಲಿ ಈ ದೇಶದಲ್ಲಿ ನಡೆದ ಒಂದು ಅತ್ಯಂತ ಖಂಡನೀಯ ವಿಷಯ ಜನರ ಗಮನಕ್ಕೆ ಬಾರದೇ ಹೋಯಿತು. ಈ ವರ್ಷ ರಾಷ್ಟ್ರಪತಿಗಳಿಂದ ಶೌರ್ಯ ಪ್ರಶಸ್ತಿಯನ್ನು ಪಡೆದ ಅಂಕಿತ್ ಗರ್ಗ್ ಛತ್ತೀಸಘಡದ ದಾಂತೆವಾಡಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ.



ನಕ್ಸಲೀಯ ಚಟುವಟಿಕೆಗಳನ್ನು ಅಡಗಿಸಿದ್ದಕ್ಕಾಗಿ ಅವರಿಗೆ ಆ ಪ್ರಶಸ್ತಿಯನ್ನು ನೀಡಲಾಗಿದೆ. ಆದರೆ ಆ ಅಧಿಕಾರಿಯ ವಿರುದ್ಧ ಒಂದು ಮೊಕದ್ದಮೆ ಸುಪ್ರೀಂ ಕೋರ್ಟಿನಲ್ಲಿ ಇರುವಾಗಲೇ ಇಂಥ ಪ್ರಶಸ್ತಿಯನ್ನು ನೀಡಿರುವುದು ಪ್ರಜಾತಂತ್ರ ವಾದಿಗಳನ್ನೂ ಮತ್ತು ಮಹಿಳಾಪರ ಹೋರಾಟಗಾರರನ್ನೂ ಕೆರಳಿಸಿದೆ.

ಸೋನಿ ಸೂರಿ ಎಂಬ ಆದಿವಾಸಿ ಶಾಲಾ ಶಿಕ್ಷಕಿಯ ಮೇಲೆ ದೌರ್ಜನ್ಯ ನಡೆಸಿದ ಆರೋಪ ಈ ಗರ್ಗ್ ಮೇಲಿದೆ. ಈ ಕುರಿತು ಸ್ವತಃ ಸೋನಿ ಸೂರಿಯವರೇ ನ್ಯಾಯಾಲಯಕ್ಕೆ ದೂರು ನೀಡಿದ್ದಾರೆ. ಅವರ ಪತ್ರದಲ್ಲಿ ಗರ್ಗ್ ಮತ್ತು ಅವರ ಸಂಗಡಿಗರು ತಮ್ಮ ಮೇಲೆ ಯಾವಯಾವ ರೀತಿಯ ಅತ್ಯಾಚಾರಗಳನ್ನು ನಡೆಸಿದ್ದರೆಂಬ ಎಲ್ಲ ವಿವರಗಳನ್ನೂ ನೀಡಿದ್ದಾರೆ. ಅವುಗಳನ್ನು ಪಾಶವಿಕ ಕೃತ್ಯಗಳು ಎಂದು ಕರೆಯುವುದೂ ಸರಿಯಿಲ್ಲವೆನಿಸುತ್ತದೆ. ಒಬ್ಬ ಮಹಿಳೆ ರಾಷ್ಟ್ರಪತಿ ಆಗಿರುವಾಗಲೇ ಗರ್ಗ್ ತರಹದವರಿಗೆ ಶೌರ್ಯಪ್ರಶಸ್ತಿ ನೀಡಿರುವುದು ನಮ್ಮ ವ್ಯವಸ್ಥೆ ಎಷ್ಟರಮಟ್ಟಿಗೆ ಎಲ್ಲ ಸಂವೇದನೆಯನ್ನೂ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.



ಕಳೆದುಕೊಂಡಿದೆ ಎಂಬುದಕ್ಕೆ ದ್ಯೋತಕವಾಗಿದೆ. ಕೇಂದ್ರ ಸರ್ಕಾರದ ಈ ಹೃದಯಹೀನ ಕ್ರಮವನ್ನು ಎಲ್ಲರೂ ಒಕ್ಕೊರಲಿನಿಂದ ಖಂಡಿಸಬೇಕಿದೆ.

- ನಗರಗೆರೆ ರಮೇಶ್ (ಸದಸ್ಯ, ಪ್ರಜಾತಾಂತ್ರಿಕ ಜನರ ವೇದಿಕೆ)

ಮಾರ್ಚ್ 21 ರ 'ಲಂಕೇಶ್ 77' ವಿಶೇಷಾಂಕದಲ್ಲಿ ಪ್ರಕಟಗೊಂಡ ಬಿ.ಎಂ. ಬಶೀರರ 'ಯೋಧ ಹೇಳಿದ ಕಥೆ' ಅದ್ಭುತವಾಗಿತ್ತು. ಅವರ ಕಥೆಯೊಳಗೆ ಹತ್ಯೆಗೀಡಾದ ಶತ್ರು ಪಾಳಯದ ಯೋಧನನ್ನು ನಮ್ಮ ದೇಶದ ಗುಜರಾತಿನಲ್ಲಲ್ಲದೆ



ಬೇರೆ ಬೇರೆ ಕಡೆಯಲ್ಲೂ ಕಂಡ ಹಾಗಾಯಿತು.

"ಆ ಸೈನಿಕ ಅಷು ಬಲಿಷ್ಟವಾಗಿದ್ದನೇ?" ಎಂ ಮಕ್ಕಳ ಅಚ್ಚರಿಯ ಪ್ರಶ್ನೆಯೊಳಗೆ "ಗಾಂಧಿ"ಯ ಮು ಹಾದುಹೋದಂತಾಯಿತು.

"ಹತ್ತು ಸಾವಿರಕ್ಕೂ ಅಧಿಕ ಶತ್ರು ಸೈನಿಕರಿರು ಕಡೆ ಇನ್ನೂರು ಸೈನಿಕರನ್ನು ಕೊಂದರೆ ಯು ಮುಗಿಯುತ್ತದೆಯೇ!?" ಎಂಬ ಪ್ರಶ್ನೆಯಲ್ಲಿ ಕೇಸರಿ ಮತ್ತು ಹಸಿರು ಬ ಮಿಂಚಿದಂಗಾಯಿತು.

"ಇಲ್ಲ.......... ಅವತ್ತು ಒಬ್ಬ ಸೈನಿಕನನ್ನು ನಾವೆಲ್ಲ ಸೇರಿ ಕೊಂದುಹಾಕಿದೆವು." "ಬರೇ ಒಬ್ಬನನ್ನೇ.........." ಮ ಪ್ರಶ್ನೆಯ ನಿರಾಶೆಯ ಹಿಂದೆ, ಆ ಒಬ್ಬ ಯಾರು ಎನ್ನುವ ಮಕ್ಕಳಿಗೇನು ಗೊತ್ತು, ಅಪ್ರಜ್ಞಾವಂತ ದೊಡ್ಡವರೆನಿಸಿಕೊಂಡವ ಕೂಡ ಹಲವರ ಕಣ್ಣಿನಲ್ಲಿ ಮಕ್ಕಳಾಗಿ ಕಾಣಿಸಿಕೊಂಡಿರಲಿ ಸಾಕು ಅಂದುಕೊಂಡೆ.

"ಒಂದುಕ್ಷಣ ಮೌನವಾಗಿದ್ದ ಯೋಧ ಹೇಳಿದ, ಯಾಕೆಂ ಅವನು ನಮ್ಮ ದೇಶದ ಶತ್ರುವಾಗಿದ್ದ...." ಇಲ್ಲಿ ಪ್ರಸ್ತುತ ಅನೇಕ ವಿ ಮನಸಿನಲ್ಲಿ ಮೂಡಿದರೂ ಇದೀಗ ನನಗನಿಸಿದ್ದು, ಬ್ಯಾರಿ ಅಕಾಡೆಮಿ ಅಧ್ಯಕ್ಷ ಮತ್ತು ಬಿಜೆಪಿಯ ಸಕ್ರಿಯ ಕಾರ್ಯಕರ್ತ ರಹೀಂ ಉಚ್ಚಿಲ್‌ರ ಮೇ ಮಂಗಳೂರಿನಲ್ಲಿ ದಾಳಿ ನಡೆದಾಗ ಮುಸ್ಲಿಂ ಲೀಗ್‌ನ ಸಕ್ರಿಯ ಕಾರ್ಯಕ ರಿಯಾಜ್ ಹರೇಕಳ ಎಂಬುವವರು ಉಚ್ಚಿಲ್‌ರನ್ನು ಆಸ್ಪತ್ರೆಗೆ ಸಾಗಿಸ ಮೂಲಕ ಅವರ ಜೀವವನ್ನು ಕಾಪಾಡಿದ್ದು.

- ಅಲ್ಲಾರಂಡ ವಿಠಲ್ ನಂಜಪ್ಪ, ಮಡಿ

ನನ್ನ ಪ್ರೀತಿಯ 'ಲಂಕೇಶ್' ವಾರ ಪತ್ರಿಕೆಯ ಹೊಸ ಸಂಪಾದಕರಿಗೆ ಕಂಗ್ರಾಟ್ಸ್!

- ಎನ್.ಮೋಹನ್, ಶಿವಮೊಗ್ಗ



ವಿಶೇಷಾಂಕದಲ್ಲಿ ಪಾರ್ವತೀಶ ಅವರ 'ಮೊಂಬತ್ತಿಯ ಇನ್ನೊಂದು ತುದಿಗೂ ಕಿಡಿ ಹೊತ್ತುವ ಘಳಿಗೆ' ಲೇಖನ ಸೂಪರ್ ಆಗಿತ್ತು. ಅವರು ಪತ್ರಿಕೆಯ ಸಂಪಾದರಾದ ವಿಷಯ ನೋಡಿ ನನಗೆ ಸಂತೋಷವಾಯಿತು. ಅವರಿಗೆ ಅಭಿನಂದನೆಗಳು.

- ಕುಂಸಿ ಉಮೇಶ್, ಶಿವಮೊಗ್ಗ

ಪಾರ್ವತೀಶ ಅವರು ಪತ್ರಿಕೆಯ ಸಂಪಾದಕರಾಗಿದ್ದು ಸಂತೋಷ ತಂದಿದೆ. ಅವರಿಗೆ ಅಭಿನಂದನೆಗಳು.

- ಮಹೇಂದ್ರ, ಬಳ್ಳಾರಿ

ನಾನು ಅನೇಕ ವರ್ಷಗಳಿಂದ ಪತ್ರಿಕೆಯ ಅಭಿಮಾನಿ. ಪ್ರತಿವಾರ ಪತ್ರಿಕೆಯನ್ನು ತಪ್ಪದೆ ಕೊಂಡು ಓದುತ್ತಿರುವೆ.

ಲಂಕೇಶ್ ಅವರು ಸಂಪಾದಕರಾಗಿ, ಗೌರಿಯವರು ಸಂಪಾದಕರಾಗಿ ಈಗ ಪಾರ್ವತೀಶ್ ಮುನ್ನಡೆಸುವ ಪತ್ರಿಕೆಗೆ ನನ್ನ ಶುಭ ಹಾರೈಕೆಗಳು. ಪತ್ರಿಕೆಯ ಅನೇಕಾನೇಕ ಕಾರ್ಯಕ್ರಮಗಳಲ್ಲಿ ನಾನು ಭಾಗವಹಿಸಿದ್ದೇನೆ. ಪಾರ್ವತೀಶ ಅವರನ್ನು ಹತ್ತಿರದಿಂದ ನೋಡಿದ್ದೇನೆ. ಮಾತಾಡಿಸಿದ್ದೇನೆ ಮತ್ತು ಅವರ ಎಲ್ಲಾ ಲೇಖನ/ವರದಿಗಳನ್ನು ಓದಿರುತ್ತೇನೆ. ಗೌರಿ ಮೇಡಂ ನಂತರ ಪತ್ರಿಕೆಯನ್ನು ಮುನ್ನಡೆಸಲು ಪಾರ್ವತೀಶ ಅವರೇ ಸೂಕ್ತ ಎಂದು ನಾನು ತಿಳಿದುಕೊಂಡಿದ್ದೆ, ಅದು ನಿಜವಾಗಿದೆ.

ಪಾರ್ವತೀಶ ನಾಯಕತ್ವದಲ್ಲಿ ಮತ್ತು ಗೌರಿ ಮೇಡಂ ಮಾರ್ಗದರ್ಶನದಲ್ಲಿ ಪತ್ರಿಕೆ ಇನ್ನೂ ಹೆಚ್ಚು ಪ್ರಗತಿಪರ ಧೋರಣೆಗಳೊಂದಿಗೆ, ಸತ್ಯನಿಷ್ಠ ವರದಿಗಳೊಂದಿಗೆ ನಮ್ಮೆಲ್ಲರ ಜ್ಞಾನವನ್ನು ಹೆಚ್ಚಿಸಲಿ ಎಂದು ಹಾರೈಸುವೆ....

-ಎಂ.ಸದಾಶಿವ, ತುಮಕೂರು

ಕರ್ನಾಟಕ ವಿಧಾನಸಭೆಯು ರಾಜ್ಯಸಭೆಗೆ ನಾಲ್ವರು ಅಭ್ಯರ್ಥಿಗಳ ಕಳುಹಿಸಬೇಕಿದೆ. ನಮ್ಮ ಎಲ್ಲಾ ಪಕ್ಷಗಳೂ ಕರ್ನಾಟಕದ ಹಿತಾಸಕ್ತಿ ಕಾಯ ಕನ್ನಡ ಮನಸ್ಸಿನ ಕರ್ನಾಟಕದ ಅಭ್ಯರ್ಥಿಗಳನ್ನು ಆರಿಸಲು ಇದು ಸಕ ನಮ್ಮ ರಾಜ್ಯದ ಎಲ್ಲಾ ಪಕ್ಷಗಳ ನಾಯಕರು ತಮ್ಮ ಆಷಾಢಭೂತಿತನವ ಬಿಟ್ಟು ನಾಡಿನ ಹಿತದ ಬಗ್ಗೆ ಚಿಂತಿಸುವುದು ಈಗ ಅತ್ಯಗತ್ಯವಾಗಿದೆ.

ನಮ್ಮ ರಾಜ್ಯದ ನೆಲ-ಜಲ-ಭಾಷೆಯ ಬಗ್ಗೆ ಒಲವಿರುವ ಅಭ್ಯರ್ಥಿಗಳ ಆರಿಸುವ ಹೊಣೆಗಾರಿಕೆ ನಮ್ಮ ರಾಜ್ಯದ ಎಲ್ಲಾ ಪಕ್ಷಗಳ ಶಾಸಕರ ಮೇಲ ಆದರೂ ಕರ್ನಾಟಕದ ಶಾಸಕರು ರಾಜ್ಯಸಭೆಯಲ್ಲಿ ನಮ್ಮ ರಾಜ್ಯದ ಹಿತಾಸಕ್ತಿಯ ಕಾಯಲು ಇತರೇ ಭಾಷೆಯ/ರಾಜ್ಯದ ಮಂದಿಯನ್ನು ಆಯ್ಕೆ ಮಾಡುವ ಎಷ್ಟು ಸರಿ? ನಮ್ಮ ಯಾವ ಪಕ್ಷವೂ ಕರ್ನಾಟಕದ ಬಗ್ಗೆ ಕನ್ನಡಿಗರ ಕಾಲಜಿ ಹೊಂದಿಲ್ಲದವರನ್ನು ನಮ್ಮ ಪ್ರತಿನಿಧಿಗಳು ಬಲವಂತವಾಗಿ ಆ ಮಾಡದಿರುವ ನೋಡಿಕೊಳ್ಳಬೇಕಿದೆ.

- ಛನ್.ಶರವಣ ರಾಮಾಪುರ, ಬೆಂಗಳೂ

...ಮ ಒಂದು ವೇಳೆ ದಕ್ಷರೇ ಆಗಿದ್ದರೆ ನೀವೇನಾಗುತ್ತಿದ್ದಿರಿ?
...) ಮಾಡಿರುವ ತಗರಣಗಳಿಗೆ ಪರಪ್ಪನ ಅಗ್ರಹಾರ
ಭಜನೆ ಮಾಡುತ್ತಿದ್ದೀರಿ! ಅವರ ಅದಕ್ಷತೆಯೇ
...ಶ್ರೀರಕ್ಷೆ! ಇದನ್ನ ಮೊದಲು ತಿಳ್ಕೊಂಡು ಮಾತಾಡಿ.....

...ಓಟಿಗಾಗಿ ಸುಳ್ಳು!

...ನೀನಾಸಂ ತಿರುಗಾಟದ ಒಂದು ನಾಟಕ 'ಕಂತು'.
...ದ ವಿಶೇಷ ಪ್ರದರ್ಶನ ಮಂಡ್ಯದ ಕಲಾಮಂದಿರದಲ್ಲಿ
... ರಾಜ್ಯ ರೈತಸಂಘ ಇದನ್ನು ಪ್ರಾಯೋಜಿಸಿತ್ತು.
...ಕದ ನಂತರ 'ಸಂವಾದ' ಕಾರ್ಯಕ್ರಮ ಇತ್ತು.
...'ಕಂತು' ವಿಜ್ಞಾನ-ನಂಬಿಕೆ ನಡುವಣ ಸಂಘರ್ಷ ಇರುವ
...ಕ. ಕೆ.ಎಸ್. ಪುಟ್ಟಣ್ಣಯ್ಯನವರು ತಮ್ಮ ಅನುಭವ
...ಚಿಕೊಂಡರು.
...ದೇವರು ಮೈಮೇಲೆ ಬರುವುದು ಸಾಮಾನ್ಯ ಸಂಗತಿ.
...ರೋ ಒಬ್ಬನಿಗೆ ಶನಿದೇವರು ಬರುತ್ತಿತ್ತಂತೆ. ಪುಟ್ಟಣ್ಣಯ್ಯ
...ರೂ ಶನಿದೇವರ ಬಳಿಗೆ ಹೋಗಿದ್ದರಂತೆ. ಅವರಿಗೆ
...ನ ಮೈಮೇಲೆ ದೇವರು ಬರುವುದು ಸುಳ್ಳು ಎಂಬುದು
...ತ್ತಿತ್ತಂತೆ. ಅಲ್ಲಿ ಸುಮಾರು ಭಕ್ತರು ನೆರೆದಿದ್ದರಂತೆ.
...ಣ್ಣಯ್ಯ 'ದೇವರು ಇವನ ಮೈಮೇಲೆ ಬರುವುದು
... ಇವನು ಮೋಸ ಮಾಡುತ್ತಿದ್ದಾನೆ' ಎಂದು
...ಳಲಿಲ್ಲವಂತೆ. ನೆರೆದಿದ್ದ ಎಲ್ಲ ಭಕ್ತರಂತೆ ನಡೆದು
...ಂಡರಂತೆ. ಅವರ ಮಾತಿನಲ್ಲೇ ಹೇಳುವುದಾದರೆ
...ಮಹಾತ್ಮನಿಗೆ ಜಯವಾಗಲಿ' ಅಂತಾನೂ ಹೇಳಿದರಂತೆ.
...ಅವರು ಯಾಕೆ ಆಂತರಿಕವಾಗಿ ಒಂದು ರೀತಿ,
...ಬಹಿರಂಗವಾಗಿ ತದ್ವಿರುದ್ಧವಾಗಿ ನಡೆದುಕೊಂಡರು ಎಂದರೆ
...ರೇ ಹೇಳಿದ್ದು 'ಇಲ್ದಿದ್ರೆ ಐವತ್ತು ಓಟು ಹೊರಟು
...ಗುತ್ತಿತ್ತು!'
... ಪುಟ್ಟಣ್ಣಯ್ಯ ಶಾಸಕರಾಗಿದ್ದರು. ಮತ್ತೆ ಶಾಸಕರಾಗಲು
...ಸಾಹಸ ಪಡುತ್ತಿರುವವರು. ಇದರಲ್ಲಿ ಯಾವ
...ರಾಧವೂ ಇಲ್ಲ. ಆದರೆ ಶನಿದೇವರ ವಿಷಯದಲ್ಲಿ
...ರ ನಿಲುವು ಪ್ರಶ್ನಾರ್ಹ. ಮೋಸವನ್ನು ಮೋಸ ಎಂದು
...ಳಲು ಹಿಂಜರಿಯುವಿಕೆಯಿಂದಲೇ ನಂಬಿಕೆ
...ರೂರುವುದು. ಐವತ್ತು ಓಟಿಗಾಗಿ ಆತ್ಮಸಾಕ್ಷಿಗೆ
...ದ್ಧವಾಗಿ ನಡೆದುಕೊಂಡಾಗ 'ಶನಿದೇವರು ಮೈಮೇಲೆ
...ದವನ್ನೆ' ಎಂದು ಸುಳ್ಳು ಹೇಳಿ ಜನರ ಮುಗ್ಧತೆಯನ್ನೇ
...ಂಡವಾಳ ಮಾಡಿಕೊಂಡು ಮೋಸ ಮಾಡುತ್ತಾನೆ
...ಬುದು ಯಾಕೆ ಹೊಳೆಯಲಿಲ್ಲ? ಸಾವಿರಾರು ಜನರ
...ಮ ಮುಖ್ಯವೋ? ಐವತ್ತು ಓಟು ಮುಖ್ಯವೋ?
... ನೈಜ ಚಳವಳಿಗಾರ ರಾಜಕೀಯ ಧಿಕ್ಕರಿಸಬೇಕು.
Politics is full of compromises
...ನ್ನುವುದೇ ನಿಜವಾ....

✽

... ಈ ವಾರದ 'ಕಟ್ಟೆಪುರಾಣ'ದಲ್ಲಿ ಉಗ್ರಿಯು
...ಬಿಯೋರಿಗೆ ಇನ್ನೂ ಎರಡು ಬುಡಬೇಕಿತ್ತು' ಎಂಬ
...ನಿಸಿಕೆಯೇ ನನ್ನ ಅನಿಸಿಕೆಯೂ ಆಗಿದೆ. ಈ ಪಾಪಿ
...ಕ್ಕಳಿಗೆ ಅವರ ಕಾರ್ಯಕ್ರಮ ನೋಡುವ ಜನರ
...ತು ಕೆಡುಕುಗಳು ಬೇಕೇ ಇಲ್ಲ. ಬದಲಾಗಿ
...ಮಂತರು ಮತ್ತು ಸಿನಿಮಾದವರಿಗಾಗಿ ಈ ಚಾನೆಲ್
... ಹುಟ್ಟಿಕೊಂಡಿವೆ.

- ಸಂತೋಷ್ ಗುದ್ದಿಯಂಗಡಿ, ಎಸ್‌ಎಂಎಸ್ ಮೂಲಕ



ದೇವನೂರು ಮಹಾದೇವರ 'ಕುಸುಮಬಾಲೆ'ಯ ಚೆನ್ನನ ಅತ್ತಿಗೆಯ ಹಾಗಿರುವ ಜೀವದ ಕುರಿತು 'ಕಂಡಹಾಗೆ'ಯಲ್ಲಿನ ಒಳಮಾತುಗಳು; ಆ ಮೂಲಕ ಹೊರಬಂದಿರುವ ಆತಂಕ ನನ್ನದು ಕೂಡ.

- ಆರ್. ಸುಧೀಂದ್ರ ಕುಮಾರ್, ಎಸ್ ಎಂ ಎಸ್ ಮೂಲಕ

ದೇವನೂರರ ಕಾಳಜಿ ಈಗ ಕರ್ನಾಟಕದ ಕಾಳಜಿ
...ಗಬೇಕಾದ ಅನಿವಾರ್ಯತೆಯನ್ನು ನಾವು ಸೃಷ್ಟಿಸಬೇಕಾ
...ದೆ. 'ಬ್ಯಾರಿ' ಚಿತ್ರದ ಕುರಿತು ಚರ್ಚಿಸುವಾಗ ಎಚ್ಚರ
...ರಲಿ. ಪರಿಸ್ಥಿತಿಯ ದುರ್ಲಾಭ ಪಡೆಯಲು ಆರೆಸ್ಸೆಸ್‌ನ
...ಪರ್ಷಗಳು ಕಾದು ಕುಳಿತಿವೆ. ಎಲ್ಲ ಸಹೃದಯರ
...ಯಗಳನ್ನು ಅವು ನುಂಗಿಬಿಡುತ್ತವೆ.


- ರವಿಕುಮಾರ್, ಹಾಸನ

ನಾನು ಕಳೆದ ನಾಲ್ಕು ವರ್ಷಗಳಿಂದ ಗೌರಿ ಲಂಕೇಶ್
...ತ್ರಿಕೆಯನ್ನು ತಪ್ಪದೆ ಓದುತ್ತಿದ್ದೇನೆ. ಪತ್ರಿಕೆಯ ವಾರ್ಷಿ
...ಕ ಬರಬೇಕೆಂದು ಪ್ರತಿ ಬಾರಿ ನಿರ್ಧಾರ
...ಮಾಡಿಕೊಂಡಿದ್ದರೂ ಕೊನೆಕ್ಷಣದಲ್ಲಿ ಏನಾದರೂ ಕೆಲಸ
...ಂದು ತಡೆ ಒಡ್ಡುತ್ತದೆ. ಆಮೇಲೆ ಏನೋ ಕಳೆದುಕೊಂಡ
...ಅನುಭವ ನನ್ನನ್ನು ಕಾಡುತ್ತದೆ. ವಿಶೇಷ ಸಂಚಿಕೆ
...ದ್ಭುತವಾಗಿತ್ತು. ಶಿವಸುಂದರ್ ಮತ್ತು ಗೌರಿ ಅಕ್ಕನ
...ಬರಹಗಳು ಪ್ರತಿಯೊಬ್ಬರೂ ಓದಲೇಬೇಕಾದಂತಹವು
.... ಹೊಸ ಸಂಪಾದಕರಿಗೆ ಅಭಿನಂದನೆಗಳು. ಯಾರಿಗೂ
...ದೆ ನಿರ್ಭಿಡೆಯಿಂದ ಮಠಗಳ ಮತ್ತು ಮಾಧ್ಯಮಗಳ
...ಗಳನ್ನು ಎತ್ತಿ ಹಿಡಿದು ವರದಿ ಮಾಡುವ ಗೌರಿ
... ಬಳಗಕ್ಕೆ ಸದಾ ಸೆಲ್ಯೂಟ್.

- ಮಾರುತಿ ಹಿಪ್ಪರಗಿ, ಮುದ್ದೇಬಿಹಾಳ

ಸಬ್ಸಿಡಿ ಕಮಿಟಿಯಲ್ಲಿ ಕಳ್ಳರ ಕಮಾಯಿ

ಕಷ್ಟ ಪಟ್ಟು ಸಿನಿಮಾ ನಿರ್ಮಿಸುತ್ತಿರುವವರು ಯಾರೋ... ಸರ್ಕಾರ ನೀಡುವ ಸಹಾಯಧನವನ್ನು ಕಳ್ಳ ಮಾರ್ಗದಲ್ಲಿ ಪಡೆದು ಗುಳುಂ ಮಾಡುತ್ತಿರುವವರು ಇನ್ಯಾರೋ...



ಮಂಗ್ಳೂರು ಸುರೇಶ

2009-2010ನೇ ಸಾಲಿನಲ್ಲಿ ಸಬ್ಸಿಡಿ ಪಡೆದ ಕನ್ನಡ ಚಿತ್ರಗಳ ಪಟ್ಟಿ ಮೊನ್ನೆ ಸೋರಿಕೆಯಾಗಿ ಚಿತ್ರರಂಗದಲ್ಲಿ ದೊಡ್ಡ ರಾದ್ಧಾಂತಕ್ಕೆ ಕಾರಣವಾಗಿದೆ.

ಈ ಪಟ್ಟಿಯಲ್ಲಿ ಯಾರೂ ಕೇಳಿರದ 'ಪ್ರಶ್ನೆ' ಎಂಬ ಸಿನಿಮಾ ಮಾತ್ರವಲ್ಲದೆ 'ನಿರ್ದೋಷಿ' ಎಂಬ ಸೆಕ್ಸ್ ಸಿನಿಮಾ ಕೂಡ ಸ್ಥಾನ ಪಡೆದಿರುವುದು, ಆಯ್ಕೆ ಸಮಿತಿಯ ಸದಸ್ಯನೊಬ್ಬ ಲಂಚ ಸ್ವೀಕರಿಸಿ ಸಿಕ್ಕಿಬಿದ್ದಿರುವುದು... ಇವೆಲ್ಲದರ ಸುತ್ತ ಈಗ ಚರ್ಚೆ ನಡೆಯುತ್ತಿದೆ.

ಗುಣಾತ್ಮಕ ಮತ್ತು ಸ್ವಮೇಕ್ ಚಿತ್ರಗಳನ್ನು ಪ್ರೋತ್ಸಾಹಿಸಲು ಕನ್ನಡ, ಕೊಂಕಣಿ, ತುಳು ಸೇರಿದಂತೆ ಕರ್ನಾಟಕದ ಭಾಷೆಗಳ 25 ಚಿತ್ರಗಳಿಗೆ ರಾಜ್ಯ ಸರ್ಕಾರ ಪ್ರತಿ ವರ್ಷ 10 ಲಕ್ಷದಿಂದ 25 ಲಕ್ಷ ರೂಪಾಯಿಗಳ ತನಕ ಸಹಾಯಧನ - ಅಂದರೆ ಸಬ್ಸಿಡಿ - ನೀಡುತ್ತದೆ. ಅಂತಹ ಚಿತ್ರಗಳನ್ನು ಆಯ್ಕೆ ಮಾಡಲು ಸರ್ಕಾರ ಪ್ರತಿವರ್ಷ ಒಂದು ಸಮಿತಿಯನ್ನು ನೇಮಕ ಮಾಡುತ್ತದೆ. ಈ ಬಾರಿ, ಅಂದರೆ 2009-10ನೇ ಸಾಲಿನ ಕನ್ನಡ ಸಿನಿಮಾಗಳನ್ನು ಸಬ್ಸಿಡಿಗೆ ಆಯ್ಕೆ ಮಾಡಲು ಹಿರಿಯ ನಟ ಶಿವರಾಮ್ ಅವರ ನೇತೃತ್ವದ ಸಮಿತಿಯನ್ನು ಸರ್ಕಾರ ನೇಮಕ ಮಾಡಿತ್ತು. ಅದಕ್ಕೂ ಮೊದಲು ಸರ್ಕಾರ ಅಭಿನಯ ಶಾರದೆ ಜಯಂತಿಯವರನ್ನು ಸಬ್ಸಿಡಿ ಕಮಿಟಿಗೆ ಮುಖ್ಯಸ್ಥರನ್ನಾಗಿ ನೇಮಿಸಲಾಗಿತ್ತು. ಆದರೆ ಆರಂಭದಲ್ಲೇ ಅಲ್ಲಿನ ಅವ್ಯವಸ್ಥೆ ಕಂಡು ಜಯಂತಿಯವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ಹೊರಬಂದಿದ್ದರು.

ಸದ್ಯ ಶಿವರಾಮಣ್ಣ ನೇತೃತ್ವದ ಸಮಿತಿಯಲ್ಲಿ ಅಭಿರುಚಿ ಚಂದ್ರು, ಸುರೇಶ್ ಮಂಗಳೂರು, ಎಸ್.ಎನ್. ರವಿಶಂಕರ್, ರಾಮಕೃಷ್ಣ ಮಹಾಬಲಮೂರ್ತಿ ಕೊಡ್ಲೆಕೆರೆ, ಬಿ.ಆರ್. ಲಕ್ಷ್ಮಣರಾವ್, ಮಹಾದೇವ, ಮುಂತಾದವರು ಸದಸ್ಯರಾಗಿದ್ದಾರೆ. ಈ ಸಬ್ಸಿಡಿ ಸಮಿತಿಯಲ್ಲಿ ಚಿತ್ರರಂಗಕ್ಕೆ ಸಂಬಂಧ ಪಡದವರೇ ಜಾಸ್ತಿ ಇದ್ದಾರೆ ಎಂಬ ಆರೋಪ ಆರಂಭದಲ್ಲೇ ಕೇಳಿಬಂದಿತ್ತು. ಆದರೆ ಯಾವಾಗ ಈ ಸಮಿತಿಯಲ್ಲಿರುವ ಸುರೇಶ್ ಮಂಗಳೂರು ಎಂಬ ಕಲಾವಿದನೂ, ರವಿಶಂಕರ ನೆಂಬ ಪ್ರೊಡಕ್ಷನ್ ಮ್ಯಾನೇಜರು ಸಿನಿಮಾ ನಿರ್ಮಾಪಕರ ಕಚೇರಿಗಳಿಗೆ ಭೇಟಿ ಕೊಟ್ಟು ವ್ಯವಹಾರ ಕುದುರಿಸಲು ನಿಂತರೋ ಆಗ ವೃತ್ತಿಪರ ನಿರ್ಮಾಪಕರ ತಲೆ ಗಿರ್ರೆನ್ನುವಂತಾಗಿತ್ತು.


"ಮಂತ್ರಿ ಆರ್. ಅಶೋಕ್ ನನ್ನ ಗಾಡ್‌ಫಾದರ್" ಅಂತಾ ತಿರುಗಾಡುವ ರವಿಶಂಕರ್ ಗಾಂಧಿನಗರದ ಹಳೇ ಕಳ್ಳರಲ್ಲೊಬ್ಬ. ವಿಷ್ಣುವರ್ಧನ್ ನಟಿಸುತ್ತಿದ್ದ ಬಹಳಷ್ಟು ಸಿನಿಮಾಗಳಲ್ಲಿ ಈತ ಪ್ರೊಡಕ್ಷನ್ ಮ್ಯಾನೇಜರ್ ಆಗಿ ಕೆಲಸ ಮಾಡಿದ್ದ. "ವಿಷ್ಣುವರ್ಧನ್ ನನ್ನ ಮಾತನ್ನ ಮೀರೋದಿಲ್ಲ" ಅಂತ ಹೇಳಿಕೊಂಡೇ ತನಗೆ ಬಿಲ್ಡಪ್ ಕೊಡುತ್ತಿದ್ದ. ಈ ಮಹಾನುಭಾವ ಅಶೋಕ್ ಇನ್‌ಫ್ಲೂಯೆನ್ಸ್ ಬಳಸಿ ಚಲನಚಿತ್ರ ಅಕಾಡೆಮಿ ಮತ್ತು ಸಬ್ಸಿಡಿ ಕಮಿಟಿಯ ಸದಸ್ಯನಾಗಿ ವಕ್ಕರಿಸಿಕೊಂಡ. ಈತನ ವಿರುದ್ಧ ವಾರ್ತಾ ಇಲಾಖೆಯಲ್ಲಿ ಕನಿಷ್ಠ ಮೂವತ್ತಕ್ಕೂ ಹೆಚ್ಚು ಕಂಪ್ಲೇಂಟುಗಳು ದಾಖಲಾಗಿವೆ. ಖುದ್ದು ವಾರ್ತಾ ಇಲಾಖೆಯ ನಿರ್ದೇಶಕ ಬೇವಿನಮರದ ಈತನನ್ನು ಅಕಾಡೆಮಿಯಿಂದ ಹೊರಹಾಕಿ ಎಂದು ಪತ್ರ ಬರೆದರೂ ಅಕಾಡೆಮಿಯ ಹಿಂದಿನ ಅಧ್ಯಕ್ಷ ನಾಗಾಭರಣ ಯಾವುದೇ ಕ್ರಮ ತೆಗೆದುಕೊಂಡಿರಲಿಲ್ಲ.

ಇನ್ನು ಈಗ ಸಬ್ಸಿಡಿ ಕೊಡಿಸಲು ಲಂಚ ಪಡೆದಿರುವ ಬಗ್ಗೆ ಆಧಾರಸಮೇತವಾಗಿ ಸಿಕ್ಕಿಬಿದ್ದಿರುವ ಸುರೇಶ್ ಮಂಗಳೂರು ಓರ್ವ ಸೀರಿಯಲ್ ನಟ. 'ತಾಜ್ ಮಹಲ್', 'ಮೈಲಾರಿ', 'ಒಂದು ಪ್ರೀತಿಯ ಕಥೆ' ಮುಂತಾದ ಸಿನಿಮಾಗಳಲ್ಲಿ ಪೋಷಕ ಪಾತ್ರಗಳಲ್ಲಿ ನಟಿಸಿರುವಾತ. ಇಂಥವರೆಲ್ಲಾ ಹೇಗೆ ಸಬ್ಸಿಡಿ ಸಮಿತಿಗೆ ವಕ್ಕರಿಸಿದರೋ ಗೊತ್ತಿಲ್ಲ.

ಕಾಸು ಕೊಟ್ಟ ಕೂಡ್ಲು ಹಿಡಿದುಕೊಟ್ಟರು!

ಸಬ್ಸಿಡಿಗಾಗಿ ಅರ್ಜಿ ಸಲ್ಲಿಸಿದ್ದ ಸಿನಿಮಾ ನಿರ್ಮಾಪಕರ ಕಚೇರಿ, ಮನೆಗಳಿಗೆ ಭೇಟಿ ನೀಡಿ ಅಥವಾ ಅವರಿಗೆ ಫೋನ್ ಮಾಡಿ ಡೀಲು ಕುದುರಿಸಿದವರಲ್ಲಿ ಸುರೇಶ್ ಮಂಗಳೂರು ಮತ್ತು ರವಿಶಂಕರ್ ಪ್ರಮುಖರು. ಆದರೆ ಎನ್.ಎಂ. ಸುರೇಶ್, ಮಹೇಶ್ ಸುಖಧರೆ ಮತ್ತು ಇತರೆ ಕಲವು ನಿರ್ಮಾಪಕರು ಲಂಚ ಕೊಟ್ಟು ಸಬ್ಸಿಡಿ ಪಡೆಯಲು ನಿರಾಕರಿಸಿದರು. ಇಂತಹ ನಿಯತ್ತು ಇಲ್ಲದ ಕೂಡ್ಲು ರಾಮಕೃಷ್ಣ ತರಹದ ಹಲವು ನಿರ್ಮಾಪಕರು ಸಮಿತಿಯ ಸದಸ್ಯರಿಗೆ ಲಂಚ ನೀಡಿದರು.


ಅದರಲ್ಲೂ ಮಕ್ಕಳ ಚಿತ್ರಗಳಿಗೆ ಸರ್ಕಾರ ಬರೋಬ್ಬರಿ 25 ಲಕ್ಷ ರೂಪಾಯಿಗಳ ಸಬ್ಸಿಡಿ ನೀಡುವುದರಿಂದ ಕೂಡ್ಲು ರಾಮಕೃಷ್ಣ ತನ್ನ ನಿರ್ಮಾಣದ 'ಬೆಟ್ಟದ ಪುರದ ದಿಟ್ಟ ಮಕ್ಕಳು' ಚಿತ್ರಕ್ಕೆ ಸಬ್ಸಿಡಿ ಬೇಕೆಂದು 2.5 ಲಕ್ಷ ರೂಪಾಯಿ ಲಂಚ ನೀಡಿದ್ದರು. ಲಂಚ ಪಡೆದುಕೊಂಡ ಸುರೇಶ್ ಮಂಗಳೂರು ಎಂತಹ ಹುಂಬನೆಂದರೆ ಆ ಹಣವನ್ನು ಆತ ರಾಜಾರೋಷವಾಗಿ ತನ್ನ ಬ್ಯಾಂಕ್ ಅಕೌಂಟ್‌ಗೆ ವರ್ಗಾ ಮಾಡಿಸಿಕೊಂಡಿದ್ದ.



ಲಂಚಕೋರರ ವಿರುದ್ಧ ನಿರ್ಮಾಪಕರ ಪತ್ರಿಕಾಗೋಷ್ಠಿ

ಕೊನೆಗೆ ಸಬ್ಸಿಡಿಗೆ ಆಯ್ಕೆಯಾದ ಸಿನಿಮಾಗಳ ಪಟ್ಟಿ ಸರಕಾರಕ್ಕೆ ಸಲ್ಲಿಕೆಯಾಗುವ ಮೊದಲೇ ಸೋರಿಕೆಯಾಗಿದ್ದರಿಂದ ಚೆನ್ನಾಗಿರುವ ತಮ್ಮ ಸಿನಿಮಾಗೆ ಆರ್ಥಿಕ ನೆರವು ಸಿಕ್ಕೇ ಸಿಗುತ್ತದೆ ಎಂದು ನಂಬಿದ್ದವರು, ಲಂಚ ಕೊಟ್ಟಿದ್ದರಿಂದ ಪ್ರತಿಫಲ ನಿರೀಕ್ಷಿಸಿದ್ದವರು, ಇಬ್ಬರೂ ಕಕ್ಕಾಬಿಕ್ಕಿಯಾದರು. ಯಾಕೆಂದರೆ ಆ ಪಟ್ಟಿಯಲ್ಲಿ ಉತ್ತಮ ಚಿತ್ರಗಳ ಬದಲಾಗಿ ಹೇಳಹೆಸರಿಲ್ಲದೆ ಸಿನಿಮಾಗಳಲ್ಲದೆ, ಲಂಚ ಕೊಟ್ಟ ನಿರ್ಮಾಪಕರ ಸಿನಿಮಾಗಳೂ ಮಂಗಮಾಯವಾಗಿದ್ದವು.

ಇದನ್ನು ಕಂಡು ಎಲ್ಲರಿಗಿಂತ ಮೊದಲು ದನಿ ಎತ್ತಿದ್ದು ಕೂಡ್ಲು ರಾಮಕೃಷ್ಣ. ಆತ ಕೂಡಲೇ ಒಂದು ಸ್ಟಿಂಗ್ ಆಪರೇಷನ್ ಮಾಡಿ ಸುರೇಶ್ ಮಂಗಳೂರು ತನ್ನಿಂದ ಲಂಚ ಸ್ವೀಕರಿಸಿದ್ದರ ಬಗ್ಗೆ ಮಾತಾಡಿದ್ದನ್ನೆಲ್ಲ ವಿಡಿಯೋ ಮಾಡಿಕೊಂಡು ಅದನ್ನು ಟಿವಿ ಚಾನೆಲ್ಲೊಂದಕ್ಕೆ ನೀಡಿದರು.



ಅದರಿಂದಾಗಿ ಈ ಲಂಚ ಪ್ರಕರಣ ಬಯಲಾಯಿತಾದರೂ "ತನ್ನ ಸಿನಿಮಾಗೆ ಇಪ್ಪತ್ತೈದು ಲಕ್ಷ ರೂಪಾಯಿ ದೊರೆಯಲಿಲ್ಲ ಎಂಬ ಕಾರಣಕ್ಕೆ ಕೂಡ್ಲು ಕಳ್ಳನನ್ನು ಹಿಡಿದು ಕೊಟ್ಟರೇ? ನೀವು ಲಂಚ ಕೊಟ್ಟಿದ್ದೇ ಮೊದಲ ಅಪರಾಧವಲ್ಲವೇ?" ಎಂದು ಕೆಲವರು ಕೂಡ್ಲು ಅವರನ್ನು ಟೀಕಿಸಿದರು. ಅದಕ್ಕೆ ಕೂಡ್ಲು ನೀಡಿರುವ ಸಮಜಾಯಿಸಿ ಮಜವಾಗಿದೆ. ಅವರು "ಗುಣಮಟ್ಟದ ಚಿತ್ರಗಳಿಗೆ ನೀಡುವ ಹಣದಲ್ಲಿ ಗೋಲ್‌ಮಾಲ್ ನಡೆದಿರುವುದು ನಿಜ. ನಾನು ಕೊಟ್ಟಿರುವುದು ಲಂಚವಲ್ಲ. ಸುರೇಶ್ ಮಂಗಳೂರು ಅವರನ್ನು ಬಲೆಗೆ ಬೀಳಿಸಲು ಹೀಗೆ ಮಾಡಿದ್ದೇನೆ" ಎಂದಿದ್ದಾರೆ. ನಂಬುವಂತ ಮಾತಾ ಇದು?!

ಅಷ್ಟೇ ಅಲ್ಲದೆ, ಈ ಲಂಚ ಪ್ರಕರಣದಲ್ಲಿ ಸಿಕ್ಕಿಬಿದ್ದಿರುವ ಸುರೇಶ್ ಮಂಗಳೂರು "ನಾನು ಪಡೆದ ಲಂಚದ ಹಣದಲ್ಲಿ ಒಂದು ಲಕ್ಷ ರೂಪಾಯಿ ಸಮಿತಿಯ ಮುಖ್ಯಸ್ಥ ಶಿವರಾಮಣ್ಣನಿಗೇ ತಲುಪಿಸಬೇಕು" ಎಂದಿರುವುದು ಚಿತ್ರರಂಗದವರನ್ನು ದಿಗ್ಭ್ರಾಂತಿಗೊಳಿಸಿದೆ. ಹೇಳಿಕೇಳಿ ಶಿವರಾಮ್ ಕನ್ನಡ ಚಿತ್ರರಂಗದ ಹಿರಿಯ ನಟ. ಮಾತ್ರವಲ್ಲ ತಮ್ಮ ಸಹೋದರ ರಾಮನಾಥ್ ಜೊತೆಗೂಡಿ ರಾಜ್‌ಕುಮಾರ್, ರಜನೀಕಾಂತ್, ಅಮಿತಾಭ್ ಬಚ್ಚನ್‌ರಂಥ ಮಹಾನ್ ನಟರ ಸಿನಿಮಾಗಳನ್ನು ನಿರ್ಮಿಸಿದವರು. ಇಂತಹ ಶಿವರಾಮ್ ಲಂಚದ ಸುಳಿಯಲ್ಲಿ ಬಿದ್ದಿದ್ದಾರೆ ಎಂದರೆ ಎಂಥವರಿಗೂ ಶಾಕ್ ನೀಡುತ್ತದೆ. ಒಂದು ವೇಳೆ ಶಿವರಾಮ್ ಅವರು ಈ ಲಂಚದ ದುಡ್ಡನ್ನು ಸ್ವೀಕರಿಸಿಲ್ಲ ಎನ್ನುವುದಾದರೆ ಅವರು ಈ ಪ್ರಕರಣದ ಕುರಿತು ಹೇಳಿಕೆ ನೀಡಲಿ ಎಂದು ರಾಮು, ಎನ್.ಎಂ.ಸುರೇಶ್, ಸೂರಪ್ಪ ಬಾಬು ತರಹದ ನಿರ್ಮಾಪಕರು ಹೇಳಿದ್ದಾರೆ. ಆದರೆ ಈ ವಿಷ್ಯ ಹೊರಬಿದ್ದು ಇವತ್ತಿಗೆ ನಾಲ್ಕೈದು ದಿನಗಳೇ ಕಳೆದಿದ್ದರೂ ಶಿವರಾಮಣ್ಣ ಯಾವ ಪ್ರತಿಕ್ರಿಯೆಯನ್ನೂ ನೀಡದೆ, 'ನನಗೇನೂ ಗೊತ್ತಿಲ್ಲ' ಎಂಬಂತೆ ಮಗುಮ್ಮಾಗಿರುವುದು ಅವರ ಮೇಲಿನ ಆರೋಪಗಳು ಮತ್ತಷ್ಟು ಗಟ್ಟಿಕೊಳ್ಳುವಂತೆ ಮಾಡಿದೆ.


ಲಿಸ್ಟು ರದ್ದಾಗುತ್ತಾ?

ಈಗ ಈ ಪಟ್ಟಿಯನ್ನು ರದ್ದು ಮಾಡಬೇಕೆಂದು ಹಲವು ನಿರ್ಮಾಪಕರು ಮತ್ತು ನಿರ್ದೇಶಕರು ಒತ್ತಾಯಿಸಿದ್ದಾರೆ. ಅಷ್ಟೇ ಅಲ್ಲದೆ, ನಿರ್ಮಾಪಕ ಕೋಟಿ ರಾಮು ಕೋರ್ಟ್ ಮೊರೆ ಹೋಗಲು ನಿರ್ಧರಿಸಿದ್ದಾರೆ. ಶಿವರಾಮ್ ನೇತೃತ್ವದ ಸಮಿತಿಯನ್ನು ರದ್ದು ಮಾಡಬೇಕು, ಸಮಿತಿ ಸಿದ್ಧಪಡಿಸಿದ ಪಟ್ಟಿಯನ್ನು ಸರ್ಕಾರ ಸ್ವೀಕರಿಸಬಾರದು ಎಂದು ನ್ಯಾಯಾಲಯಕ್ಕೆ ಅವರು ಮನವಿ ಮಾಡಲಿದ್ದಾರಂತೆ.

ಆದರೆ ಭ್ರಷ್ಟಾಚಾರದಲ್ಲೇ ಪ್ರತಿದಿನ ಮುಳುಗೇಳುತ್ತಿರುವ ಬಿಜೆಪಿ ಸರ್ಕಾರ ಪ್ರಾಮಾಣಿಕ ಸಿನಿಮಾ ನಿರ್ಮಾಪಕರ ಬೇಡಿಕೆಯನ್ನು ಮಾನ್ಯ ಮಾಡುತ್ತಾ?

• ಅರುಣ್.ಜಿ

ವಂಚಕ ಕುಮಾರಸ್ವಾಮಿ



ಕುಮಾರಸ್ವಾಮಿ

ಗಾಂಧಿನಗರದಲ್ಲಿ ಎಂತೆಂತಹ ಐನಾತಿ ವಂಚಕರಿದ್ದಾರೆ ಎನ್ನುವುದಕ್ಕೆ ಇಲ್ಲೊಂದು ಉದಾಹರಣೆ ನೀಡುತ್ತಿದ್ದೇವೆ.

ಒಂದು ದಿನ ಸಬ್ಸಿಡಿ ಸಮಿತಿಯ ಮುಖ್ಯಸ್ಥ ಶಿವರಾಮ್ ಅವರಿಗೆ ಒಂದು ಫೋನ್ ಕರೆ ಬಂದಿದೆ. ಕರೆ ಸ್ವೀಕರಿಸಿದ ಶಿವರಾಮಣ್ಣ "ಹಲೋ" ಎನ್ನುತ್ತಿದ್ದಂತೇ, ಆ ಕಡೆಯ ಧ್ವನಿ "ರೀ ಶಿವರಾಮು ಅವರೇ, ನಾನ್ರೀ ಮಾಜಿ ಸಿಎಮ್ಮು ಕುಮಾರಸ್ವಾಮಿ ಮಾತಾಡೋದು... ನಮ್ದು 'ಪ್ರಶ್ನೆ' ಅನ್ನೋ ಸಿನಿಮಾ ಬಂದಿದೆ. ಅದನ್ನ ಸಬ್ಸಿಡಿಗೆ ಸೆಲೆಕ್ಟ್ ಮಾಡ್ಕೊಂಬುಡೀ. ರಿಜೆಕ್ಟ್‌ಗಿಜೆಕ್ಟ್ ಮಾಡ್ಬಿಟ್ಟೀರಾ ಹುಷಾರ್!" ಎಂದಿದೆ.

ತಕ್ಷಣ ಶಿವರಾಮಣ್ಣ "ಕುಮಾರಸ್ವಾಮಿ ಅವರು ಕಾಲ್ ಮಾಡಿದ್ರು. ಅವರ 'ಪ್ರಶ್ನೆ' ಸಿನಿಮಾನ ಸೆಲೆಕ್ಟ್ ಮಾಡ್ಬಿಡೀಪ್ಪಾ..." ಎಂದು ಸಮಿತಿಯ ಸದಸ್ಯರಿಗೆ ತಾಕೀತು ಮಾಡಿದ್ದಾರೆ. ಈಗ ಸಬ್ಸಿಡಿಗೆ ಆಯ್ಕೆ ಆಗಿರುವ ಚಿತ್ರಗಳ ಪಟ್ಟಿಯಲ್ಲಿ ಮೊದಲು ಸ್ಥಾನದಲ್ಲಿರುವ ಹೆಸರೇ 'ಪ್ರಶ್ನೆ'!

ಅಸಲಿಗೆ ಶಿವರಾಮಣ್ಣನಿಗೆ ಹೀಗೊಂದು ಕರೆ ಮಾಡಿದ್ದು ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅಲ್ಲ. ಬದಲಾಗಿ 'ಗೌತಮಿ ಎಂಟರ್‌ಪ್ರೈಸಸ್' ಎಂಬ ಬ್ಯಾನರ್ ಅಡಿ ಕಳೆದೆರಡು ದಶಕಗಳಿಂದ ಸಿಕ್ಕಸಿಕ್ಕನವ ಮುಂಡಾ ಮೋಚುತ್ತಿರುವ ಕುಮಾರಸ್ವಾಮಿ ಎಂಬ ಮಹಾಶಯ. 'ನಾರಿಯ ಸೀರೆ ಕದ್ದ', 'ನಾನಲ್ಲ', 'ಪ್ರಶ್ನೆ' ಎಂಬತ್ಯಾದಿ ತಗಡು ಸಿನಿಮಾಗಳನ್ನು ತೆಗೆದಿರುವ ಈತ ಸಮಿತಿಯ ಅಧ್ಯಕ್ಷರಿಗೇ ಕರೆ ಮಾಡಿ ಯಾಮಾರಿಸುತ್ತಾನೆಂದರೆ ಈತ ಎಷ್ಟು ಖತರ್‌ನಾಕ್ ಇರಬೇಕೆಂದು ನೀವು ಸುಲಭವಾಗಿ ಊಹಿಸಬಹುದು.

ಇಂಥ ತೋಲಾಂಡಿಯೊಬ್ಬ ಫೋನ್ ಮಾಡಿದ್ದಕ್ಕೇ 'ಪ್ರಶ್ನೆ' ಎಂಬ ಸಿನಿಮಾಕ್ಕೆ ಸಬ್ಸಿಡಿ ನೀಡಿರುವ ಶಿವರಾಮಣ್ಣ ನಿಜಕ್ಕೂ ಆ ಸ್ಥಾನಕ್ಕೆ ಲಾಯಕ್ಕಾ?

✽

Registered No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 04-04-2012 RNI No. KARKAN2005/1

ಗಾಂಧಿನಗರದ ತಾರಾಸಮರ



ಗಾಂಧಿನಗರದಲ್ಲಿ ಮುಂದಿನ ತಿಂಗಳು ಒಂದು ದೊಡ್ಡ 'ತಾರಾಸಮರ' ನಡೆಯುವುದು ಅನಿವಾರ್ಯವಾಗಿದೆ.

ಎಲ್ಲವೂ ಅಂದುಕೊಂಡಂತೆ ನಡೆದರೆ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಮತ್ತು ರಿಯಲ್ ಸ್ಟಾರ್ ಉಪೇಂದ್ರ ಬಾಕ್ಸ್ ಆಫೀಸಿನಲ್ಲಿ ಮುಖಾಮುಖಿಯಾಗುವುದು ಬಹುತೇಕ ಖಚಿತವಾಗಿದೆ. ಈ ತಾರಾಸಮರದಲ್ಲಿ ಯಾರು ಗೆಲ್ಲುತ್ತಾರೆ, ಯಾರು ಸೋಲುತ್ತಾರೆ ಎಂದು ಗಾಂಧಿನಗರದ ಬಾಜಿದಾರರು ಈಗಾಗಲೇ ಬೆಟ್ ಕಟ್ಟುತ್ತಿದ್ದಾರೆ.

ಬರುವ ಏಪ್ರಿಲ್ 24ರಂದು ಪುನೀತ್ ನಟನೆಯ 'ಅಣ್ಣಾ ಬಾಂಡ್' ಮತ್ತು ಉಪೇಂದ್ರ ನಟಿಸಿರುವ 'ಕಠಾರಿ ವೀರ ಸುರಸುಂದರಾಂಗ' ಚಿತ್ರಗಳು ಬಿಡುಗಡೆಯಾಗಲಿವೆ. 'ಅಣ್ಣಾ ಬಾಂಡ್' ಚಿತ್ರದ ಬಗ್ಗೆ ಈಗಾಗಲೇ ಎಲ್ಲರಲ್ಲೂ ಅಪಾರ ಕುತೂಹಲವಿದೆ. ಅದಕ್ಕೆ ಮುಖ್ಯ ಕಾರಣ ಚಿತ್ರದ ಟೈಟಲ್ ಮಾತ್ರವಲ್ಲ, 'ಜಾಕಿ' ಎಂಬ ಹಿಟ್ ಚಿತ್ರದ ಯಶಸ್ವಿ ಜೋಡಿಯಾದ ಪುನೀತ್ ಮತ್ತು ನಿರ್ದೇಶಕ ಸೂರಿ ಈ ಚಿತ್ರದಲ್ಲಿ ಮತ್ತೊಮ್ಮೆ ಒಂದಾಗಿರುವುದು.



ಹಾಗೆಯೇ 'ಕಠಾರಿ ವೀರ ಸುರಸುಂದರಾಂಗ' ಚಿತ್ರದ ಬಗ್ಗೆಯೂ ಎಲ್ಲರಲ್ಲಿ ದೊಡ್ಡ ನಿರೀಕ್ಷೆಯಿದೆ. ಅದಕ್ಕೆ ಕಾರಣ ಈ ಚಿತ್ರದಲ್ಲಿ ಉಪೇಂದ್ರ ಮತ್ತು ರಮ್ಯ ಜೋಡಿಯಾಗಿ ಕಾಣಿಸಿಕೊಳ್ಳುವುದಕ್ಕಿಂತಲೂ ದುಬಾರಿ ತಂತ್ರಜ್ಞಾನವಾದ ತ್ರೀಡಿಯಲ್ಲಿ ಈ ಚಿತ್ರ ತಯಾರಾಗಿರುವುದು.

ಈ ಮಧ್ಯೆ ಇನ್ನೊಂದು ಆಘಾತಕರ ಸುದ್ದಿಯೂ ಈಗ ಕೇಳಿಬರುತ್ತಿದೆ. ಅದೇನೆಂದರೆ ಈ ತಾರಾಸಮರದ ನಡುವೆಯೇ ಮತ್ತೊಂದು ಅದ್ದೂರಿ ಚಿತ್ರವೂ ಬಿಡುಗಡೆಯಾಗುವ ಸಾಧ್ಯತೆ ಇದೆ. ಚಾಲೆಂಜಿಂಗ್ ಸ್ಟಾರ್ ದರ್ಶನ್ ಅಭಿನಯಿಸಿರುವ 'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ' ಚಿತ್ರದ ಬಿಡುಗಡೆಗಾಗಿ ಅದರ ನಿರ್ಮಾಪಕ ಆನಂದ್ ಅಪ್ಪುಗೋಳ್ ಪ್ರಯತ್ನಿಸುತ್ತಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಚಾರಿತ್ರಿಕ ಚಿತ್ರಗಳು ಕಣ್ಮರೆ ಆಗುತ್ತಿರುವ ಸಂದರ್ಭದಲ್ಲೂ ತಮ್ಮ ಐತಿಹಾಸಿಕ ಚಿತ್ರ ಗೆಲ್ಲುತ್ತದೆ ಎಂಬ ಧೈರ್ಯ ನಿರ್ಮಾಪಕ ಆನಂದ್ ಅಪ್ಪುಗೋಳ್ ಮತ್ತು ನಾಯಕನಟ ದರ್ಶನ್ ಅವರಿಗಿದೆ. ಈ ಚಿತ್ರದ ನಾಯಕ ಸಂಗೊಳ್ಳಿ ರಾಯಣ್ಣ ಕುರುಬ ಜನಾಂಗದವನಾಗಿದ್ದರಿಂದ ರಾಜ್ಯದ ಕುರುಬ ಸಮುದಾಯ ತಮ್ಮ ಐತಿಹಾಸಿಕ ಹೀರೋನನ್ನು ನೋಡಲು ಕಾತೊರೆಯುತ್ತಿದೆ; ಬರೀ ಕುರುಬ ಸಮುದಾಯ ಮಾತ್ರವಲ್ಲ, ಸಂಗೊಳ್ಳಿ ರಾಯಣ್ಣನ ಪರಾಕ್ರಮ ಮತ್ತು ಸಾಹಸವನ್ನು ಕನ್ನಡಿಗರೆಲ್ಲರೂ ಮೆಚ್ಚಿರುವುದರಿಂದ ಈ ಚಿತ್ರ 'ಶ್ರೀ ಕೃಷ್ಣದೇವರಾಯ', 'ಮಯೂರ' ಮೊದಲಾದ ಚಾರಿತ್ರಿಕ ಚಿತ್ರಗಳಂತೆ ಸಮಸ್ತ ಕನ್ನಡಿಗರ ಹೃದಯವನ್ನು ಗೆದ್ದರೂ ಆಶ್ಚರ್ಯವಿಲ್ಲ ಎಂಬುದು ಅವರಿಬ್ಬರ ಅನಿಸಿಕೆ.

ಆದರೆ ಕೋಟ್ಯಂತರ ರೂಪಾಯಿ ಹೂಡಿರುವ, ಸ್ಟಾರ್‌ಗಳು ನಟಿಸಿರುವ ಚಿತ್ರಗಳು ಒಟ್ಟಿಗೆ ಬಿಡುಗಡೆಯಾಗುವುದು ಅತ್ಯಂತ ವಿಷಾದನೀಯ.

ಕನ್ನಡ ಚಿತ್ರರಂಗದ ದೊಡ್ಡ ಶಾಪ ಯಾವುದೆಂದರೆ ಕಳೆದ ಹಲವಾರು ವರ್ಷಗಳಿಂದ ಭಾರಿ ನಿರೀಕ್ಷೆಯ ದೊಡ್ಡ ದೊಡ್ಡ ಚಿತ್ರಗಳು ಒಮ್ಮೆಗೆ ಬಿಡುಗಡೆಯಾಗಿ ಅವುಗಳ ನಿರ್ಮಾಪಕರು ಕೈಸುಟ್ಟುಕೊಂಡಿರುವುದು. ಇಂತಹ ಒಂದು ಕೆಟ್ಟ ಚಾಳಿಗೆ ಫುಲ್‌ಸ್ಟಾಪ್ ಹಾಕಲು ಇಲ್ಲಿಯತನಕ ಯಾರಿಂದಲೂ ಸಾಧ್ಯವಾಗಿಲ್ಲ.

ಒಂದೆಡೆ ಬಾಂಡ್ ಚಿತ್ರ, ಮತ್ತೊಂದೆಡೆ ತ್ರೀಡಿ ಚಿತ್ರ, ಇನ್ನೊಂದೆಡೆ ಚಾರಿತ್ರಿಕ ಚಿತ್ರ ... ಈ ಮೂರು ಚಿತ್ರಗಳು ಗೆದ್ದು ಕನ್ನಡ ಚಿತ್ರರಂಗದಲ್ಲಿ ಹೊಸ ಭರವಸೆಯನ್ನು ಮೂಡಿಸುವ ಸಾಧ್ಯತೆಗಳಿವೆ. ಆದರೆ ಇಂತಹ ಚಿತ್ರಗಳು ಬಿಡುಗಡೆಯಾಗುವ ಮುನ್ನ ಅವುಗಳ ನಿರ್ಮಾಪಕರು ಮುಂಚಿತವಾಗಿಯೇ ಒಂದಿಷ್ಟು ಪ್ಲ್ಯಾನಿಂಗ್ ಮಾಡಿಕೊಳ್ಳಬೇಕು. ಅವರೊಂದಿಗೆ ಚಲನಚಿತ್ರ ವಾಣಿಜ್ಯ ಮಂಡಳಿ ಕೂಡ ಸಹಕರಿಸಬೇಕು. ಆದರೆ ಅಂತಹದ್ದು ಯಾವುದೂ ಇಲ್ಲಿ ನಡೆಯುತ್ತಿಲ್ಲ.

ಈಗಿನ ಪರಿಸ್ಥಿತಿಯಲ್ಲಿ ಈ ಮೂರು ಚಿತ್ರಗಳು ಒಂದು ವಾರದ ಅವಧಿಯಲ್ಲಿ ಬಿಡುಗಡೆಗೊಂಡರೆ ಮೂರೂ ಚಿತ್ರಗಳ ನಿರ್ಮಾಪಕರು ಕೈಸುಟ್ಟುಕೊಳ್ಳುವುದು ಗ್ಯಾರಂಟಿ. ಹಾಗಾಗಬಾರದೆಂಬುದು ನಮ್ಮ ಆಶಯ. ಈ ಚಿತ್ರಗಳ ಬಿಡುಗಡೆಗೆ ಇನ್ನೂ ಒಂದು ತಿಂಗಳ ಅವಧಿ ಇರುವುದರಿಂದ ಸ್ಟಾರ್‌ಗಳ ನಡುವಿನ ತಾರಾಸಮರವನ್ನು ತಪ್ಪಿಸಿದರೆ ಖಂಡಿತ ಚಿತ್ರರಂಗಕ್ಕೆ ಒಳ್ಳೆಯದಾಗುತ್ತದೆ.

– ಶೆಣೈ

ರವಿಗೆ ರಾಜಕೀಯ ಬೇಡವಂತೆ!


ಇತ್ತೀಚೆಗೆ ಗಾಂಧಿನಗರದ ಮಾಜಿ ಮತ್ತು ಹಾಲಿ ನಾಯಕಿಯರು ತಾ ಮುಂದು, ನಾ ಮುಂದು ಎಂದು ರಾಜಕೀಯ ಪಕ್ಷಗಳನ್ನು ಸೇರುತ್ತಿರುವುದನ್ನು ನೋಡಿ ಕನ್ನಡಿಗರಿಗೆ ನಗಬೇಕೋ, ಅಳಬೇಕೋ ಗೊತ್ತಾಗುತ್ತಿಲ್ಲ. ಇಂತಹ ಸಂದರ್ಭದಲ್ಲಿ "ನಿಮಗೂ ರಾಜಕೀಯ ಸೇರುವ ಐಡಿಯಾ ಇದೆಯೇ?" ಎಂದು ಕ್ರೇಜಿಸ್ಟಾರ್ ರವಿಚಂದ್ರನ್ ಅವರನ್ನು ಕೆಲವು ಪತ್ರಕರ್ತರು ಪ್ರಶ್ನಿಸಿದರು. ಅದಕ್ಕೆ ಕ್ರೇಜಿ ಸ್ಟಾರ್ ರವಿ ಕೊಟ್ಟ ಉತ್ತರ ಹೀಗಿತ್ತು:

"ನಮಗೆ ಸಿನಿಮಾದಲ್ಲಿ ಇರುವ ರಾಜಕೀಯವನ್ನೇ ಜೀರ್ಣ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ, ಕಲಾವಿದರ ಸಂಘದ ನಾವೆಲ್ಲ ಸೇರಿ ಒಂದು ಕಲಾಭವನ ಕಟ್ಟಲು ಸಾಧ್ಯವಾಗಿಲ್ಲ, ಅದನ್ನು ಬಿಟ್ಟು ನಾವು ರಾಜಕೀಯ ಪಕ್ಷಗಳನ್ನು ಸೇರಿ ಸಮಾಜ ಸೇವೆ ಮಾಡಲು ಹೇಗೆ ತಾನೇ ಸಾಧ್ಯ? ಇಷ್ಟಕ್ಕೂ ರಾಜಕೀಯದಲ್ಲಿ ಬರೀ ಜಾತಿ ಲೆಕ್ಕಾಚಾರದಲ್ಲೇ ಎಲ್ಲಾ ಕೆಲಸ ಕಾರ್ಯಗಳು ನಡೆಯುತ್ತವೆ, ಕುರ್ಚಿಗಳು ಸಿಗುತ್ತವೆ, ಸನ್ಮಾನಗಳು ದೊರೆಯುತ್ತವೆ. ಆದರೆ ನಾನು ಯಾವುದೇ ಜಾತಿಗೆ ಸೇರಿದವನಲ್ಲ, ನನ್ನದೇನಿದ್ದರೂ ಕಲಾವಿದ ಜಾತಿ. ಈ ಜಾತಿ, ಮತ, ಭೇದ, ಭಾವಗಳನ್ನು ಮೀರಿ ನಾನು ಬದುಕುತ್ತಿದ್ದೇನೆ. ಹೀಗಿರುವಾಗ ನನ್ನ ಜಾತಿಯ ಹೆಸರನ್ನು ಹೇಳಿ ಕುರ್ಚಿ ಗಿಟ್ಟಿಸಿಕೊಳ್ಳುವ ಆಸೆ ನನಗಿಲ್ಲ, ರಾಜಕೀಯ ಪಕ್ಷಕ್ಕೆ ಸೇರಿ ಜನಸೇವೆ ಮಾಡುತ್ತಾರೆಂಬುದು ಸುಳ್ಳು. ಅಲ್ಲೇನಿದ್ದರೂ ಅತ್ತಿಂದ ಅತ್ತ ಅತ್ತಿಂದಿತ್ತ ಓಡಾಡಿ ಟೈಂ ವೇಸ್ಟ್ ಆಗುತ್ತದೆ. ಅದರ ಬದಲಿಗೆ ಸಿನಿಮಾ ರಂಗದಲ್ಲೇ ಇದ್ದು ಸಿನಿಮಾದ ಮುಖಾಂತರವೇ ಜನರ ಸೇವೆ ಮಾಡಲು ನಾನು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ."



ರವಿಚಂದ್ರನ್ ಅವರ ಇಂತಹ ಮಾತು ಕೇಳಿ ಈಗಾಗಲೇ ಹಲವಾರು ರಾಜಕೀಯ ಪಕ್ಷಗಳನ್ನು ಸೇರಿರುವ ಕಲಾವಿದರಿಗೆ ಬೇಸರ ಆಗಬಹುದು. ಆದರೆ ರವಿಚಂದ್ರನ್ ಮಾತಲ್ಲಿ ನಿಜಾಂಶವಿದೆ ಎಂಬುದರಲ್ಲಿ ಎರಡು ಮಾತಿಲ್ಲ, ಅಲ್ಲವೇ?!

ಗಡ್ಡದ ಗುರುವಿನ ಕಿತಾಪತಿ



ಗಿಮಿಕ್ ರಾಜ ಪ್ರೇಮ್‌ನ ಕಾಲನ್ನು ಮತ್ತೊಬ್ಬ ನಿರ್ದೇಶಕ ಗುರುಪ್ರಸಾದ್ ಸಾರ್ವಜನಿಕವಾಗಿ ಎಳೆದಿದ್ದಾರೆ.

ಗುರುಪ್ರಸಾದ್ ನಿರ್ದೇಶಿಸಿರುವ 'ಡೈರೆಕ್ಟರ್ಸ್ ಸ್ಪೆಷಲ್' ಎಂಬ ಚಿತ್ರದ ಜಾಹೀರಾತಿನಲ್ಲಿ 'ಪ್ಯೂರ್ ಎಂಟರ್‌ಟೈನ್‌ಮೆಂಟ್... ನೋ ಗಿಮಿಕ್ಸ್... ಪ್ರೇಮ್ ಮೇಲಾಣೆ...!' ಎಂದು ಬರೆಸಿದ್ದಾರೆ. ಕನ್ನಡ ಚಿತ್ರರಂಗದ ನಿಜ ಬಣ್ಣವನ್ನು 'ಡೈರೆಕ್ಟರ್ಸ್ ಸ್ಪೆಷಲ್' ಚಿತ್ರದ ಮೂಲಕ ಬಹಿರಂಗ ಮಾಡಲು ಹೊರಟಿರುವ ಗುರುಪ್ರಸಾದ್‌ಗೆ ಮೊದಲಿನಿಂದಲೂ ಪ್ರೇಮ್ ಎಂದರೆ ಅಷ್ಟಕ್ಕಷ್ಟೇ. ಪುಕ್ಕಟೆ ಪ್ರಚಾರಕ್ಕಾಗಿ ಪ್ರೇಮ್ ಮಾಡುವ ಗಿಮಿಕ್‌ಗಳ ಬಗ್ಗೆ ತಮ್ಮ 'ಎದ್ದೇಳು ಮಂಜುನಾಥ' ಚಿತ್ರದಲ್ಲೂ ಗುರು ಟೀಕಿಸಿದ್ದರು. ಆದರೀಗ ಅದನ್ನು ಬಹಿರಂಗವಾಗಿಯೇ ಮಾಡುತ್ತಿದ್ದಾರೆ.



'ಮಠ' ಮತ್ತು 'ಎದ್ದೇಳು ಮಂಜುನಾಥ' ಚಿತ್ರದ ಮೂಲಕ ಪಾಪ್ಯುಲಾರಿಟಿ ಪಡೆದ ಗುರುಪ್ರಸಾದ್ ತನ್ನ ಮೂರನೇ ಚಿತ್ರ 'ಡೈರೆಕ್ಟರ್ಸ್ ಸ್ಪೆಷಲ್'ನಲ್ಲಿ ಕನ್ನಡ ಚಿತ್ರರಂಗದ ಒಳಗನ್ನು ಬಟಾಬಯಲು ಮಾಡುತ್ತೇನೆಂದು 2010ರಲ್ಲೇ ಗುರುಪ್ರಸಾದ್ ಘೋಷಿಸಿದ್ದರು. ಕೋಮಲ್ ಅವರನ್ನು ಈ ಚಿತ್ರದ ನಾಯಕನಟನಾಗಿ ಮೊದಲು ಗುರು ಆರಿಸಿದರು. ಆದರೆ ಚಿತ್ರದ ಕತೆ ಕೇಳಿದ ಕೋಮಲ್ ಅದರಿಂದ ದೂರ ಸರಿದರು. ಅದಕ್ಕೆ ಕಾರಣ ಈ ಚಿತ್ರದಲ್ಲಿ ಕನ್ನಡ ಚಿತ್ರರಂಗವನ್ನು ವಿಡಂಬಿಸಿರುವುದು ಮತ್ತು ಕನ್ನಡದ ನಿರ್ದೇಶಕರು-ಸ್ಟಾರುಗಳನ್ನೇ ವ್ಯಂಗ್ಯ ಮಾಡಿರುವುದು.

ಅನಂತರ ಚಿತ್ರದ ನಾಯಕನ ಜಾಗಕ್ಕೆ ಕೇಳಿ ಬಂದ ಹೆಸರು ರಿಯಲ್ ಸ್ಟಾರ್ ಉಪೇಂದ್ರನದ್ದು. ಆದರೆ ಇದೂ ಫಲಿಸಲಿಲ್ಲ. ಆಗ ಹೊಸಬರನ್ನೇ ಪರಿಚಯಿಸುವ ನಿರ್ಧಾರಕ್ಕೆ ಗುರುಪ್ರಸಾದ್ ಬಂದರು. ಈ ಸಿನಿಮಾ ಈಗ ಬಿಡುಗಡೆಗೆ ಸಿದ್ಧವಾಗಿದೆ. ಇದು ತೆರೆಗೆ ಬರುವಷ್ಟರಲ್ಲಿ ಗುರು ಇನ್ನೆಷ್ಟು ಜನರನ್ನು ಲೇವಡಿ ಮಾಡುತ್ತಾರೋ ಕಾಣೆ.



ನಾಣಿ ನಿವೃತ್ತಿ?

ಸದ್ಯದಲ್ಲೇ ಎಸ್.ನಾರಾಯಣ್ ಸಿನಿಮಾ ರಂಗಕ್ಕೆ ವಿದಾಯ ಹೇಳಲಿದ್ದಾರೆ ಎಂದು ಅವರ ಪರಮಾಪ್ತರೇ ಹೇಳುತ್ತಿದ್ದಾರೆ. ಇದು ನಿಜವೇ ಆದಲ್ಲಿ ಖಂಡಿತವಾಗಿಯೂ ಅದು ವಿಷಾದನೀಯ. ಏಕೆಂದರೆ ನಾರಾಯಣ್ ಬರೀ ರೀಮೇಕ್ ಚಿತ್ರಗಳನ್ನು ಮಾಡುತ್ತಿದ್ದರೂ ಅವರು ಶಿಸ್ತಿಗಾಗಿ ಹೆಸರು ಮಾಡಿರುವವರು.

ಡಾ. ರಾಜ್‌ಕುಮಾರ್, ವಿಷ್ಣುವರ್ಧನ್, ರವಿಚಂದ್ರನ್, ಅಂಬರೀಷ್, ಶಿವರಾಜ್‌ಕುಮಾರ್, ಪುನೀತ್ ರಾಜ್‌ಕುಮಾರ್, ಸುದೀಪ್, ಗಣೇಶ್ ... ಹೀಗೆ ಕನ್ನಡ ಚಿತ್ರರಂಗದ ಬಹುತೇಕ ಎಲ್ಲ ನಾಯಕ ನಟರುಗಳನ್ನು ಹಾಕಿ ಚಿತ್ರ ಮಾಡಿರುವ ನಾರಾಯಣ್ ಸಭ್ಯ ನಿರ್ದೇಶಕ ಎಂಬುದರಲ್ಲಿ ಎರಡು ಮಾತಿಲ್ಲ.

ಇಂತಹ ನಾರಾಯಣ್ ನಿವೃತ್ತಿಯ ಘೋಷಣೆ ಮಾಡಲು ಮುಖ್ಯ ಕಾರಣ ಅವರು ಇತ್ತೀಚೆಗೆ ನಿರ್ದೇಶಿಸಿದ ಬಹುನಿರೀಕ್ಷಿತ ನಾಲ್ಕು ಚಿತ್ರಗಳು ಬಾಕ್ಸ್ ಆಫೀಸ್‌ನಲ್ಲಿ ತರಗೆಲೆಗಳಂತೆ ಉದುರಿರುವುದು. ಮೊದಲು ನಾಣಿಯ ಪುತ್ರ ಪಂಕಜ್ ನಟಿಸಿದ್ದ 'ದುಷ್ಟ' ಮಕಾಡೆಮಲಗಿತು. ಅನಂತರ ಸುದೀಪ್-ಐಂದ್ರಿತಾ ರೈ-ಅಂಬರೀಷ್ ನಟಿಸಿದ್ದ 'ವೀರ ಪರಂಪರೆ' ಕೂಡ ಬಾಕ್ಸ್ ಆಫೀಸ್‌ನಲ್ಲಿ ಮೊದಲ ವಾರವೇ ಮುಗ್ಗರಿಸಿತು. ಅದೆಲ್ಲ ಹಾಳಾಗಲಿ, ಗೋಲ್ಡನ್ ಸ್ಟಾರ್ ಗಣೇಶ್ ನಟಿಸಿದ್ದ, ನಾಣಿ ನಿರ್ದೇಶಿಸಿ-ನಿರ್ಮಿಸಿದ್ದ ಎರಡು ಚಿತ್ರಗಳು ನಾಣಿಯ ಅದೃಷ್ಟದ ಬಾಗಿಲನ್ನೇ ಬದಲಾಯಿಸಬಹುದು ಎಂದೇ ಎಲ್ಲರ ನಿರೀಕ್ಷೆಯಾಗಿತ್ತು. ಅದಕ್ಕೆ ಕಾರಣ ಈ ಹಿಂದೆ ನಾರಾಯಣ್-ಗಣೇಶ್ ಜೋಡಿಯ 'ಚೆಲುವಿನ ಚಿತ್ತಾರ' ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಅಪಾರ ಹಣವನ್ನು ತಂದುಕೊಟ್ಟಿತ್ತು. ಆದರೆ ಈ ಬಾರಿ ಗಣೇಶ್ ನಟಿಸಿದ್ದ 'ಶೈಲೂ' ಮತ್ತು 'ಮುಂಜಾನೆ' ಎರಡೂ ಚಿತ್ರಗಳು ನಾಣಿಗೆ ಸಖತ್ತಾಗಿ ಕೈಕೊಟ್ಟವು.

ಇದರರ್ಥ ಈ ನಾಲ್ಕು ಚಿತ್ರಗಳ ಸೋಲಿನಿಂದ ನಾಣಿಗೆ ಕನಿಷ್ಠವೆಂದರೂ ಐದಾರು ಕೋಟಿ ರೂ.ಗಳು ಕೈಬಿಟ್ಟಿವೆ. ಇದೆಲ್ಲಕ್ಕೆ ಕಲಶವಿಟ್ಟಂತೆ ಶ್ರೀನಗರ ಕಿಟ್ಟಿ ನಟಿಸಿರುವ 'ಅಪ್ಪಯ್ಯ' ಎಂಬ ಚಿತ್ರ ಈಗ ಬಿಡುಗಡೆಗೆ ತಯಾರಾಗಿದ್ದರೂ ಅದನ್ನು ಖರೀದಿಸಲು ಯಾರೂ ಮುಂದೆ ಬರುತ್ತಿಲ್ಲ. ಇದನ್ನು ಕಂಡು ಸಹಜವಾಗಿಯೇ ನಾರಾಯಣ್ ಚಿಂತಾಕ್ರಾಂತರಾಗಿದ್ದಾರೆ. ಏಕೆಂದರೆ ಈ ಚಿತ್ರ ಬಿಡುಗಡೆಯಾದರೆ ಅವರಿಗೆ ಲಾಭ ಆಗುವುದಕ್ಕಿಂತ ಇನ್ನೊಂದೆರೆಡು ಕೋಟಿ ರೂಪಾಯಿಗಳ ನಷ್ಟವಾಗುವ ಸಾಧ್ಯತೆಯೇ ಹೆಚ್ಚು.

ರೆಬೆಲ್ ಸ್ಟಾರ್ ಅಂಬರೀಷ್ ಅವರ ೬೦ರ ಹುಟ್ಟುಹಬ್ಬದ ಸಂದರ್ಭದಲ್ಲಿ ಅಂಬಿ ನಾಯಕನಟನಾಗಿ ನಟಿಸಬೇಕಿದ್ದ 'ಚೌಡಯ್ಯ' ಎಂಬ ಚಿತ್ರವನ್ನು ನಿರ್ಮಿಸಲು ನಾರಾಯಣ್ ಪ್ಲ್ಯಾನ್ ಹಾಕಿದ್ದರು. ಆದರೆ ತಮ್ಮ ಚಿತ್ರಗಳು ಸಾಲುಸಾಲಾಗಿ ಸೋಲುತ್ತಿರುವುದರಿಂದ ಜರ್ಜರಿತರಾಗಿರುವ ನಾರಾಯಣ್ 'ಚೌಡಯ್ಯ' ಚಿತ್ರವನ್ನು ಈಗ ಡ್ರಾಪ್ ಮಾಡಿದ್ದಾರೆ. ಬಹುಶಃ ಇತ್ತೀಚಿನ ದಿನಗಳಲ್ಲಿ ಇದೊಂದೇ ನಾಣಿಯ ಅತ್ಯಂತ ಜಾಣ್ಮೆಯ ನಿರ್ಧಾರವೆಂದು ಗಾಂಧಿನಗರಿಗಳು ತಮಾಷೆ ಮಾಡುತ್ತಿದ್ದಾರೆ. ಅವರ ಲೆಕ್ಕಾಚಾರದ ಪ್ರಕಾರ 'ಚೌಡಯ್ಯ' ಚಿತ್ರವನ್ನು ಡ್ರಾಪ್ ಮಾಡಿರುವುದರಿಂದ ನಾರಾಯಣ್ ಕನಿಷ್ಠವೆಂದರೂ ಮೂರು ಕೋಟಿ ರೂ.ಗಳನ್ನು ಉಳಿಸಿಕೊಂಡಿದ್ದಾರೆ.

ಅದೇನೇ ಇರಲಿ, ಸುಮಾರು 45ಕ್ಕೂ ಹೆಚ್ಚು ಚಿತ್ರಗಳನ್ನು ನಿರ್ಮಿಸಿ-ನಿರ್ದೇಶಿಸಿರುವ ನಾರಾಯಣ್ ಇತ್ತೀಚೆಗಿನ ಸೋಲುಗಳಿಗೆ ಹೆದರಿ ಚಿತ್ರರಂಗಕ್ಕೆ ಗುಡ್‌ಬೈ ಹೇಳುತ್ತಿರುವುದು ಬೇಸರದ ವಿಷಯ. ಅವರು ರೀಮೇಕ್ ಚಿತ್ರಗಳನ್ನು ಸಾಲುಸಾಲಾಗಿ ನಿರ್ಮಿಸುವ ತಮ್ಮ ಚಾಳಿಯನ್ನು ಬಿಟ್ಟು ಕ್ರಿಯಾಶೀಲರಾದರೆ ಅವರು ಖಂಡಿತವಾಗಿಯೂ ಹೊಸತನದ ಸಿನಿಮಾಗಳನ್ನು ಪ್ರೇಕ್ಷಕರಿಗೆ ನೀಡಬಹುದು.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4. Phone : 26676427,
Fax : 26604536, E-mail :lankesh70@rediffmail.com